ಕ ರ್ನಾ ಟ ಕ ವಿ ಧಾ ನ ಸ ಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೧೩ನೇ ಜೂನ್ ೧೯೮೮ ಜ್ಯೇಷ್ಠ ೨೩, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೨೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಸಂತಾಪ ಸೂಚನಾ ನಿರ್ಣಯ

ಅಧ್ಯಕ್ಷರು.— ಮಾಜಿ ಶಾಸಕರಾದ ಶ್ರೀ ಡಿ. ವೆಂಕಟೇಶ್‌ರವರು ದಿನಾಂಕ ೧೧ನೇ ಜೂನ್ ೮೮ ರಂದು ನಿಧನರಾದರೆಂದು ತಿಳಿಸಲು ನಾನು ವಿಷಾದಿಸುತ್ತೇನೆ. ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು, ಅವರು ಪ್ರಮುಖ ಕಾರ್ಮಿಕ ಮುಖಂಡರಾಗಿ 'ಇಂಟಕ್' ಮುಖಾಂತರ ಕಾರ್ಮಿಕರ ಕಲ್ಯಾಣಕ್ಕಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ೧೯೫೨ರಿಂದ ೧೯೫೭ನೇ ಇಸವಿಯವರೆಗೆ ಮೊದಲನೆಯ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಮೌನವನ್ನು ಆಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

(ಬೇಡಿಕೆ ಸಂಖ್ಯೆ ೬೩, ೬೪, ೨೬ ಮತ್ತು ೩೦ಕ್ಕೆ ಉತ್ತರ)

ಸಮಾಜ ಕಲ್ಯಾಣ ಮತ್ತು ರಸ್ತೆ ಸಾರಿಗೆ ಇಲಾಖೆಗಳು

ಅಧ್ಯಕ್ಷರು.— ಈಗ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಂದ ಉತ್ತರ.

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಬೇಡಿಕೆಯ ಮೇಲೆ ಈ ಮನೆಯ ೯ ಜನ ಸದಸ್ಯರು ಮಾತನಾಡಿದ್ದಾರೆ. ಹಿಂದುಳಿದವರ ಬಗ್ಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದವರ ಬಗ್ಗೆ ಹೆಣ್ಣು ಮಕ್ಕಳ ಬಗ್ಗೆ ಅಂಗವಿಕಲರ ಬಗ್ಗೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ಬಹಳ ಕಳಕಳಿಯಿಂದ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ನನ್ನ ಗಮನವನ್ನೂ ಕೂಡ ಸೆಳೆದಿದ್ದಾರೆ. ಪ್ರತಿಯೊಬ್ಬ ಸದಸ್ಯರೂ ಮಾತನಾಡಿದ ವಿಷಯವನ್ನು ಗಮನಿಸಿದರೆ ಈ ಸಮಾಜದ ದುರ್ಬಲವರ್ಗದವರ ಬಗ್ಗೆ ಇಟ್ಟಿರತಕ್ಕಂತಹ ಆಸಕ್ತಿ, ಕಳಕಳಿ ಎಷ್ಟು ಎನ್ನುವುದು ಎದ್ದು ಕಾಣುತ್ತದೆ ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಕೆಲವರು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ ಅದು ಏನೇ ಇರಲೀ ನಾನು ಅವರೆಲ್ಲ

ರಿಗೂ ಸಂಬಂಧಪಟ್ಟ ಮಂತ್ರಿಯಾಗಿ ಅಭಿನಂದಿಸುತ್ತೇನೆ. ಜನತಾ ಸರಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಾಗ ನಾವು ಈ ವರ್ಗಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದೇವೆ. ನಮ್ಮದು ರಾಷ್ಟ್ರೀಯ ಪಕ್ಷ ಈ ಪಕ್ಷಕ್ಕೆ ತನ್ನದೇ ಆದ ಸಂವಿಧಾನ ಪ್ರಣಾಳಿಕೆ ಇದೆ. ಆ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಶತಮಾನಗಳಿಂದ ತುಳಿಯಲ್ಪಟ್ಟ ವರ್ಗ ಏನು ಇದೆ, ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದವರ ಬಗ್ಗೆ ಅವರ ಏಳಿಗೆಗಾಗಿ ದುರ್ಬಲ ವರ್ಗದವರು ಯಾರಿದ್ದಾರೆ ಅವರಿಗೆ ಮೀಸಲಾತಿ ಪದ್ಧತಿ ಆಗತ್ಯ. ಕೇಂದ್ರ ಸರಕಾರದ ಮಂಡಲ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ಒತ್ತಾಯ. ಹಿಂದುಳಿದ ವರ್ಗದ ಮಹಿಳೆಯರನ್ನು ಎಲ್ಲಾ ವರ್ಗದ ಮಹಿಳೆಯರ ಜೊತೆ ಸೇರ್ಪಡಿಸಬೇಕೆಂಬುದೇ ನಮ್ಮ ಸಿದ್ಧಾಂತ. ಇದನ್ನು ನಾವು. ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಈ ರೀತಿ ಹಿಂದುಳಿದವರ ಬಗ್ಗೆ ಹೆಣ್ಣುಮಕ್ಕಳ ಬಗ್ಗೆ ಹೇಳಿದ್ದೇವೆ. ಅದೇ ಪ್ರಕಾರವಾಗಿ ಅಧಿಕಾರವನ್ನು ವಿಕೇಂದ್ರಿಕರಿಸಿ ಮಂಡಲ ಪಂಚಾಯತಿ ಮತ್ತು ಜಿಲ್ಲಾಪರಿಷತ್ತುಗಳನ್ನು ಅಧಿಕಾರಕ್ಕೆ ತಂದೆವು. ಮಂಡಲ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಇಟ್ಟಿದ್ದೇವೆ. ಹೆಣ್ಣುಮಕ್ಕಳಿಗೆ ೨೦ ಪರ್ಸೆಂಟ್ ಮೀಸಲಾತಿಯನ್ನು ಇಟ್ಟಿದ್ದೇವೆ. ಯಾರು ದುರ್ಬಲ ವರ್ಗದವರು, ಹಿಂದುಳಿದವರು ಇದ್ದಾರೆ ಅಂದರೆ ಅನ್ ರೆಪ್ರೆಸಂಟೆಡ್ ಕಮ್ಯುನಿಟೀಸ್ ಯಾರು ಇದ್ದಾರೆ ಅವರನ್ನು ನಾಮಿನೇಟ್ ಮಾಡುವ ಮೂಲಕ ಅವರೂ ಸಹ ಇದರಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ ನಾವು ಏನು ಹೇಳಿದ್ದೇವೆ. ಅದನ್ನು ಕಾರ್ಯರೂಪದಲ್ಲಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇವೆ. ಈ ಒಂಭತ್ತು ಜನ ಶಾಸಕರು ಮಾತನಾಡಿದ್ದರಲ್ಲಿ ಮೊದಲನೆಯದಾಗಿ ಮಾನ್ಯ ಶ್ರೀ ಧರ್ಮಸಿಂಗ್‌ರವರು ಮಾತನಾಡಿದ್ದರ ಬಗ್ಗೆ ಹೇಳುತ್ತೇನೆ. ಶ್ರೀ ಧರ್ಮಸಿಂಗ್‌ರವರು ದೇವರಾಜ ಅರಸ್ ಕಾಲದಲ್ಲಿ ಮತ್ತು ಗುಂಡೂರಾವ್‌ರವರ ಕಾಲದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿದವರು ಹಿಂದುಳಿದವರ ಮುಖಂಡರಲ್ಲಿ ಒಬ್ಬರು. ಅವರನ್ನು ನಾನು ಬಹಳ ವರ್ಷಗಳಿಂದ ಬಲ್ಲೆ. ಅವರು ನಮ್ಮ ಮೂರು ಇಲಾಖೆಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ರಚನಾತ್ಮಕವಾಗಿ ಟೀಕೆಯನ್ನು ಮಾಡಿದ್ದಾರೆ, ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಅವರು ಮಾತನಾಡುತ್ತಾ ಈ ಇಲಾಖೆಗಳ ಬಗ್ಗೆ ಹಣವನ್ನು ವರ್ಷೇ ವರ್ಷೇ ಜಾಸ್ತಿ ಒದಗಿಸುವುದರ ಬಗ್ಗೆ ಕಡಿಮೆ ಮಾಡಲಾಗಿದೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಯಾವ ಆಧಾರದಮೇಲೆ ಆ ರೀತಿ ಮಾತನಾಡಿದರೋ ನನಗೆ ಅರ್ಥವಾಗಲಿಲ್ಲ. ಆಗಲೇ ನಾನು ಎದ್ದು ಮಾತನಾಡಲಿಕ್ಕೆ ಹೋದಾಗ ಉತ್ತರ ಕೊಡುವಾಗ ಹೇಳಿ ಎಂದು ಹೇಳಿದರು. ಇಲಾಖೆಗಳಿಗೆ ಯಾವ ರೀತಿ ವರ್ಷೇ ವರ್ಷೇ ಹಣವನ್ನು ಹೆಚ್ಚು ಒದಗಿಸಿದ್ದೇವೆ. ಅದನ್ನು ಯಾವ ರೀತಿ ಖರ್ಚು ಮಾಡಿದ್ದೇವೆ ಎನ್ನುವುದನ್ನು ನಾನು ಅಂಕಿಅಂಶಗಳ ಸಮೇತ ಈ ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಅವರು ೮೩-೮೪ ಮತ್ತು ೮೭-೮೮ನೇ ಇಸವಿಯ ಬಗ್ಗೆ ಪ್ರಸ್ತಾಪ ಮಾಡಿದರು. ೧೯೮೩-೮೪ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ೨೨ ಕೋಟಿ ೪೨ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ೮೭-೮೮ ರಲ್ಲಿ ೩೮ ಕೋಟಿ ೪೨ ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಆ ಮೂರು ವರ್ಷಗಳಲ್ಲಿ ಶೇಕಡ ೭೫ ರಷ್ಟು ಹಣವನ್ನು ನಾವು ಹೆಚ್ಚು ಒದಗಿಸಿದ್ದೇವೆ. ಈಗ ೧೯೮೦-೮೧ ರಲ್ಲಿ ಅವರ ಸರ್ಕಾರ ಇದ್ದಾಗ ಏನು ಖರ್ಚು ಮಾಡಿದ್ದಾರೆ. ನಾವು ಏನು ಮಾಡಿದ್ದೇವೆ ಎನ್ನುವುದರ ಬಗ್ಗೆ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಗೆ ೧೩.೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೧-೮೨ರಲ್ಲಿ ೧೩.೮೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೨-೮೩ರಲ್ಲಿ ೧೮-೮೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದೇ ನಮ್ಮ ಕಾಲದಲ್ಲಿ ೮೩-೮೪ರಲ್ಲಿ ೨೨.೪೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೪-೮೫ರಲ್ಲಿ ೨೫.೮೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೫-೮೬ರಲ್ಲಿ ೨೬.೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೬-೮೭ರಲ್ಲಿ ೨೬.೨೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೭-೮೮ರಲ್ಲಿ ೨೮.೪೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪ್ರಸ್ತುತ ವರ್ಷದಲ್ಲಿ ೩೮.೪೧ ಕೋಟಿ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಅಂದರೆ ೮೨-೮೩ ರಲ್ಲಿ ಅವರು ಏನು ಖರ್ಚು ಮಾಡಿದ್ದರೋ ಆಗ ನಮ್ಮ ಖರ್ಚನ್ನು ನೋಡಿದರೆ ಅವರಿಗಿಂತ ಎರಡು ಪಟ್ಟು ಹೆಚ್ಚು ಖರ್ಚು ಮಾಡಿದ್ದೇವೆ. ಅದೇ ರೀತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಬಗ್ಗೆ ಹೇಳುವುದಾದರೆ ೮೦-೮೧ರಲ್ಲಿ ೭.೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೮೧-೮೨ ರಲ್ಲಿ ೯.೯೭ ಕೋಟಿ ರೂಪಾಯಿ, ೮೨-೮೩ರಲ್ಲಿ ೧೧.೨೫ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದೇ ನಮ್ಮ ಸರ್ಕಾರ ಬಂದಮೇಲೆ ೮೩-೮೪ರಲ್ಲಿ ೧೮.೧೦ ಕೋಟಿ ರೂಪಾಯಿ

ಗಳನ್ನು ಖರ್ಚು ಮಾಡಿದ್ದೇವೆ. ೮೪-೮೫ರಲ್ಲಿ ೨೮.೯೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಇಲಾಖೆಗೆ ೮೧-೮೨ರಲ್ಲಿ ಕೇವಲ ೭.೨೪ ಕೋಟಿ ರೂಪಾಯಿ ಮಾತ್ರ ಇದ್ದದ್ದು. ಈಗ ಪ್ರಸ್ತುತ ವರ್ಷದಲ್ಲಿ ನಾವು ೮೮.೯೯ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿದ್ದೇವೆ, ಅಂದರೆ ಒಂದಕ್ಕೆ ಎಂಟು-ಒಂಭತ್ತು ಪಟ್ಟು ಈ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿಗೋಸ್ಕರ ಒದಗಿಸಿದ್ದೇವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಾರಂಭವಾದದ್ದು ೧೯೭೫ರಲ್ಲಿ. ಕೇವಲ ಮೂರು ಕೋಟಿ ರೂಪಾಯಿಗಳ ಹಣವನ್ನು ನಾವು ಅಂದು ಖರ್ಚು ಮಾಡಿದ್ದೆವು. ಇಂದು ೮೮-೯೯ ಕೋಟಿ ರೂಪಾಯಿಯಷ್ಟನ್ನು ಖರ್ಚು ಮಾಡುವ ಮಟ್ಟಕ್ಕೆ ಬಂದಿದ್ದೇವೆ ಎನ್ನುವ ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ,

ಶ್ರೀ ಬಿ. ಬಸವಲಿಂಗಪ್ಪ.— ಇದರಲ್ಲಿ ಮಹಿಳೆಯರಿಗೆ ಎಷ್ಟು ? ಮಕ್ಕಳದ್ದು ಎಷ್ಟು ಎಂದು ಹೇಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.— ಆಮೇಲೆ ಅದನ್ನು ಹೇಳುತ್ತೇನೆ. ಹಿಂದುಳಿದ ವರ್ಗಗಳ ಇಲಾಖೆಯ ಬಗ್ಗೆ ೮೦-೮೧ರಲ್ಲಿ ೧೦.೬೫ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ೮೧-೮೨ ರಲ್ಲಿ ೯.೬೮ ಕೋಟಿ ರೂಪಾಯಿ ೮೨-೮೩ರಲ್ಲಿ ೧೧.೫೩ ಕೋಟಿ ರೂಪಾಯಿ, ೮೩-೮೪ರಲ್ಲಿ ೧೨.೫೯ ಕೋಟಿ ರೂಪಾಯಿ, ೮೪-೮೫ರಲ್ಲಿ ೧೧.೯೫ ಕೋಟಿ ರೂಪಾಯಿ, ೮೫-೮೬ರಲ್ಲಿ ೨೨.೬೫ ಕೋಟಿ ರೂಪಾಯಿ, ೮೬-೮೭ರಲ್ಲಿ ೨೧.೭೮ ಕೋಟಿ ರೂಪಾಯಿ. ೮೭-೮೮ ರಲ್ಲಿ ೨೨.೭೩ ಕೋಟಿ ರೂಪಾಯಿಯನ್ನು ನಾವು ಖರ್ಚು ಮಾಡಿದ್ದೇವೆ.

೧೦-೩೦ ಪಿ.ಎಂ.

ಪ್ರಸ್ತುತ ವರ್ಷದಲ್ಲಿ ೨೬.೮೮ ಕೋಟಿ ರೂಪಾಯಿ ಒದಗಿಸಲಾಗಿದೆ. ಅದೇ ರೀತಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಆರ್ಥಿಕ ಅಭಿವೃದ್ಧಿಗೋಸ್ಕರ ನೀವು ಏನು ಕೆಲಸ ಮಾಡಿದ್ದೀರಿ ಎಂದು ಮಾನ್ಯ ಧರ್ಮಸಿಂಗ್‌ರವರು, ಬಸವಲಿಂಗಪ್ಪನವರು ಹಾಗೂ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಕೇಳಿದ್ದಾರೆ. ರಾಜ್ಯದ ಯೋಜನೆಯಲ್ಲಿ ೧೯೮೦-೮೧ರಲ್ಲಿ ೩೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ೬೦ ಕೋಟಿ ರೂಪಾಯಿಗಳಲ್ಲಿ ೩೨ ಕೋಟಿ ರೂಪಾಯಿ ಅವರು ಖರ್ಚು ಮಾಡಿದ್ದಾರೆ. ೫೪ ಪರ್ಸೆಂಟ್ ಎಕ್ಸ್‌ಪೆಂಡಿಚರ್. ೮೧-೮೨ರಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ೬೪ ಕೋಟಿ ರೂಪಾಯಿ ಒದಗಿಸಿದರೆ ದೇಹ್ಯಾವ್ ಸ್ಪೆಂಟ್ ೪೪ ಕ್ರೋರ್ಸ್. ೧೯೮೨-೮೩ರಲ್ಲಿ ೬೬ ಕ್ರೋರ್ಸ್ ಎಕ್ಸ್‌ಪೆಂಡಿಚರ್ ೫೫ ಕ್ರೋರ್ಸ್, ೮೩ ಪರ್ಸೆಂಟ್. ೧೯೮೩-೮೪ರಲ್ಲಿ ಔಟ್‌ಲೇ ೬೫ ಕ್ರೋರ್ಸ್ ಆದರೆ, ಎಕ್ಸ್‌ಪೆಂಡಿಚರ್ ೫೩ ಕ್ರೋರ್ಸ್ ಪರ್ಸೆಂಟ್ ೮೩. ೮೪-೮೫ರಲ್ಲಿ ಔಟ್‌ಲೇ ೭೦ ಕ್ರೋರ್ಸ್ ಆದರೆ ಎಕ್ಸ್‌ಪೆಂಡಿಚರ್ ೭೧ ಕ್ರೋರ್ಸ್, ಪರ್ಸೆಂಟ್ ೧೦೦. ನಮ್ಮ ಪೀರಿಯಡ್‌ನಲ್ಲಿ ೮೩-೮೪ನಲ್ಲಿ ಔಟ್‌ಲೇ ೭೦ ಕ್ರೋರ್ಸ್ ಆದರೆ ಎಕ್ಸ್‌ಪೆಂಡಿಚರ್ ೭೦ ಕ್ರೋರ್ಸ್, ೧೦೦ ಪರ್ಸೆಂಟ್ ೧೯೮೫-೮೬ರಲ್ಲಿ ೬೭ ಕ್ರೋರ್ಸ್ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೬೭ ಕ್ರೋರ್ಸ್, ಪರ್ಸೆಂಟ್. ೧೦೦. ೧೯೮೭-೮೮ ೧೦೪ ಕ್ರೋರ್ಸ್ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೮೭ ಕ್ರೋರ್ಸ್, ೮೪ ಪರ್ಸೆಂಟ್ ಎಕ್ಸ್‌ಪೆಂಡಿಚರ್. ೧೯೮೬-೮೭ರಲ್ಲಿ ೮೮ ಕ್ರೋರ್ಸ್ ಔಟ್‌ಲೇ ಆದರೆ ೭೨ ಕ್ರೋರ್ಸ್ ಎಕ್ಸ್‌ಪೆಂಡಿಚರ್, ೮೨ ಪರ್ಸೆಂಟ್, ಇದು ಏಕೆ ಕಡಿಮೆ ಆಯಿತು, ಅದನ್ನು ಆಮೇಲೆ ಹೇಳುತ್ತೇನೆ. For the present year, the State outlay was Rs. 94 crores for the Special Component Plan. Government of India assistance provision is Rs, 8.8 crores. ೮೭-೮೮ರಲ್ಲಿ ೮೮ ಕ್ರೋರ್ಸ್ ಸ್ಟೇಟ್ ಸೆಕ್ಟರ್‌ನಲ್ಲಿ ಒದಗಿಸಿದರೆ ಕೇಂದ್ರ ಸರ್ಕಾರ ೧೦ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದೆ, This is regarding Special Component Plan. Regarding Tribal Sub Plan, ೮೦-೮೧ರಲ್ಲಿ ೩.೪೪ ಕ್ರೋರ್ಸ್ ಔಟ್‌ಲೇ ಆದರೆ, ಎಕ್ಸ್‌ಪೆಂಡಿಚರ್ ೨.೬೪, ಪರ್ಸೆಂಟ್ ೭೬. ೮೧-೮೨ರಲ್ಲಿ ೪.೧ ಕ್ರೋರ್ಸ್ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೩.೦೮, ಪರ್ಸೆಂಟ್ ೭೫. ೮೨-೮೩ನಲ್ಲಿ ೪.೫೮ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೩.೧೯ ಕ್ರೋರ್ಸ್, ಪರ್ಸೆಂಟ್ ೬೯. ೮೪-೮೫ರಲ್ಲಿ ೫.೬೨ ಕ್ರೋರ್ಸ್ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೫.೩೪ ಕ್ರೋರ್ಸ್, ಪರ್ಸೆಂಟ್ ೯೫.೮ ೫-೮೬ರಲ್ಲಿ ೫.೫೩ ಔಟ್‌ಲೇ ಆದರೆ ಎಕ್ಸ್‌ಪೆಂಡಿಚರ್ ೫.೮೧ ಕ್ರೋರ್ಸ್ ಪರ್ಸೆಂಟ್ ೧೦೪. ೮೬-೮೭ನಲ್ಲಿ ೧೧.೫ ಕ್ರೋರ್ಸ್ ಔಟ್‌ಲೇ

ಆದರೆ ಎಕ್ಸಪೆಂಡಿಚರ್ ೧೦ ಕ್ರೋರ್ಸ್. ಪರ್ಸೆಂಟ್ ೯೫. ೧೯೮೭-೮೮ರಲ್ಲಿ ೧೬ ಕ್ರೋರ್ಸ್ ಔಟ್‌ಲೇ ಆದರೆ ಎಕ್ಸಪೆಂಡೀಚರ್ ೧೬ ಕ್ರೋರ್ಸ್ ಪರ್ಸೆಂಟ್ ೧೦೦

SRI B. BASAVALINGAPPA.—Just to help you I am interrupting. ಅವರು ಎಷ್ಟು ಒದಗಿಸಿದ್ದಾರೆ, ಖರ್ಚು ಎಷ್ಟು ಆಗಿದೆ ಎಂದು ತಿಳಿಸಿದ್ದೀರಿ, ಒಳ್ಳೆಯದು. ಇದನ್ನು ನೀವು ಸಪ್ಲೈ ಮಾಡಿರುವುದು ಡಿಪಾರ್ಟ್‌ಮೆಂಟಲ್ ರಿಪೋರ್ಟ್‌ನಲ್ಲಿದೆ. ಎಷ್ಟು ಜನರಿಗೆ ಅಂದರೆ ಇದರಲ್ಲಿ ಬೆನಿಫಿಷಿಯರೀಸ್ ಎಷ್ಟು ಜನ ಎಂದು ಹೇಳಬೇಕು. ಯಾವ ಯಾವ ಕ್ಯಾಟಗರಿಯಲ್ಲಿ ಎಷ್ಟು ಜನಕ್ಕೆ ಸಿಕ್ಕಿದೆ ಎಂದು ತಿಳಿಸಿದರೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಫಲಾನುಭವಿಗಳು ಇದ್ದಾರೆ. ಹೆಂಗಸರು ಎಷ್ಟು ಜನರಿಗೆ ಸಿಕ್ಕಿದೆ, ೫೦-೫೬ ಪರ್ಸೆಂಟ್ ಅವರು ಇದ್ದಾರೆ. ಎಷ್ಟು ಫಲಾನುಭವಿಗಳಿಗೆ ಸಿಕ್ಕಿದೆ ಎಂದು ತಿಳಿಸಿದರೆ ಸಂತೋಷವಾಗುತ್ತದೆ. ಎಷ್ಟು ವರ್ಷದಲ್ಲಿ ಮಹಿಳಾ ಪ್ರಗತಿ ಆಗುತ್ತದೆ ಎನ್ನುವ ಬಗ್ಗೆ ಗೊತ್ತಾಗುತ್ತದೆ.

SRI G. BASAVANNAPPA.—I am very happy he has rightly pointed it out. ಎಷ್ಟು ಜನರು ಫಲಾನುಭವಿಗಳು ಎಂದು ನನ್ನ ಹತ್ತಿರ ಫಿಗರ್ಸ್ ಇದೆ. I have got the details.

SRIMATHI LEELADEVI R. PRASAD.—Allocation for 87-88 is Rs. 16.40 crores and expenditure is 14.71 crores.

SRI G. BASAVANNAPPA.—That pertains to pooled funds. ಮೊದಲು ೧೬ ಕ್ರೋರ್ಸ್ ಕೊಟ್ಟಿದ್ದೇವೆ. Rs. 64 crores is from non-pooled funds. This amount is given to 27 departments. This 16 crores, the entire amount has been transferred to Zilla Parishad. Target was 1.07 families but we have assisted 71,000 families, This is for 80-81 For 81-82 target was 1.15 lakhs, we have assisted 86,730. For 82-83 target 1.36 lakhs, assisted 98,000. For 83-84 target is 1.25 lakhs. assisted 1.40 lakhs, For 84-85 target is 1.50 lakhs assisted 1.57 lakhs. 85-86 target is 97,149, assisted 1.09 lakhs. For 86-87 1.14 lakh is target, assisted 1:14 lakhs. For 87-88 1.11 lakh is target, we have assisted 1.01 lakh families. ೧೯೮೭-೮೮ರಲ್ಲಿ ಕಡಿಮೆ ಆಗಲು ಕಾರಣ ಏನೆಂಬುದನ್ನು ನಾನು ಆಮೇಲೆ ಹೇಳುತ್ತೇನೆ. ಇದೇ ರೀತಿಯಾಗಿ ನಾವು ಟ್ರೈಬಲ್ ಸಬ್-ಪ್ಲಾನ್‌ನಲ್ಲಿ ಸಹ ಸಹಾಯ ಮಾಡಿದ್ದೇವೆ. ಆಮೇಲೆ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಪ್ರಗತಿ ಹೊಂದಲು ನಾವು ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಶೈಕ್ಷಣಿಕ ಪ್ರಗತಿಯ ಬಗ್ಗೆ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಸ್ವಲ್ಪ ಅಂಕಿ ಅಂಶಗಳನ್ನು ಕೊಡುವುದು ಅವಶ್ಯಕವೆಂದು ನಾನು ಭಾವಿಸಿದ್ದೇನೆ. ೭೬೫ ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳನ್ನು. ೧೫೦ ವಸತಿ ಆಶ್ರಮ ಶಾಲೆಗಳನ್ನು, ೬೫೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ೨೪೨ ಮೆಟ್ರಿಕ್ ಪೂರ್ವ ಖಾಸಗಿ ವಿದ್ಯಾರ್ಥಿನಿಲಯಗಳನ್ನು ೯೭ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು, ೩೩ ಖಾಸಗಿ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು, ತೆರೆಯುವುದರ ಮೂಲಕ ನಾವು ಸುಮಾರು ಒಂದು ಲಕ್ಷಕ್ಕೂ ಮೇಲ್ಪಟ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ರಾಜ್ಯ ಸರ್ಕಾರದಿಂದ ಆರ್ಥಿಕ ಸಹಾಯವನ್ನು ಒದಗಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ನಮ್ಮಲ್ಲಿ ಕೆಲವು ಕೇಂದ್ರ ಪುರಸ್ಕೃತ ಯೋಜನೆಗಳು ಇವೆ. ಈ ಯೋಜನೆಗಳು ಯಾವುವು ಎಂದರೆ Post Matric Scholarship: Pre-matric scholarship for those engaged in unclean work, Book bank for SC/ST Engineering and Medical Students, Girl's Hostels, Coaching and other allied schemes, Enforcement under PCRI, SC/ST Development Corporation, ಇದರ ಬಗ್ಗೆ ಯೋಜನಾ ಆಯೋಗದವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಶ್ರೀಮತಿ ಲೀಲಾದೇವಿ ಆರ್

ಪ್ರಸಾದ್ ಅವರು ಮಾತನಾಡುವಾಗ, ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದೆ ಬರಬೇಕಾದರೆ, ಸರ್ಕಾರದವರು ಟೈಮ್-ಬೌಂಡ್ ಕಾರ್ಯಕ್ರಮಗಳನ್ನು ಹಾಕಿಕೊಂಡು ಜಾರಿಗೆ ತರಬೇಕೆಂದು ಸಲಹೆ ಮಾಡಿದರು. ಮಾನ್ಯ ಅಧ್ಯಕ್ಷರೇ: ತಮಗೆ ಗೊತ್ತಿರುವಂತೆ ನಮ್ಮ ಒಂದು ಆರ್ಥಿಕ ಇತಿಮಿತಿಯಲ್ಲಿ ಇಷ್ಟೆಲ್ಲಾ ಕಾರ್ಯ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕಾದರೆ ಕೇಂದ್ರ ಸರ್ಕಾರದ ಸಹಾಯವೂ ನಮಗೆ ಬೇಕಾಗುತ್ತದೆ. ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮಿನಲ್ಲಿ ನಮಗೆ ಕೇಂದ್ರದಿಂದ ಹೆಚ್ಚಿನ ಸಹಕಾರ ಬೇಕಾಗುತ್ತದೆ. ಈ ಸ್ಕೀಮಿನ ಕೆಳಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕೆಲವು ಕಡೆ ಶೇಕಡ ನೂರರಷ್ಟು ಮತ್ತೆ ಕೆಲವು ಕಡೆ ಶೇಕಡ ೫೦ರಷ್ಟು ಸಹಾಯ ಕೊಡಬೇಕೆಂದು ಹೇಳಿದೆ. ಈಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಗರ್ಲ್ಸ್ ಹಾಸ್ಟೆಲ್‌ಗಳಿಗೆ ಆಗುತ್ತಿರುವ ಖರ್ಚಿನಲ್ಲಿ ಕೇಂದ್ರ ಸರ್ಕಾರ ಶೇಕಡ ೫೦ರಷ್ಟು ಕೊಟ್ಟರೆ ರಾಜ್ಯ ಸರ್ಕಾರ ಶೇಕಡ ೫೦ರಷ್ಟು ಕೊಡುತ್ತಿದೆ. ಆದರೆ ಈ ಬಗ್ಗೆ ಶೇಕಡ ನೂರರಷ್ಟು ಸಹಾಯವನ್ನು ಕೇಂದ್ರ ಸರ್ಕಾರವೇ ಕೊಡಬೇಕೆಂದು ಹೇಳಿದೆ. ಅದೇ ರೀತಿ ಬಾಲಕರ ಹಾಸ್ಟಲ್‌ಗಳಿಗೆ ಆಗುವಂತಹ ಪೂರ್ತಿ ಖರ್ಚನ್ನು ರಾಜ್ಯ ಸರ್ಕಾರವೇ ವಹಿಸಿಕೊಂಡಿದೆ. ಈ ಬಗೆ ಕೇಂದ್ರ ಸರ್ಕಾರ ಶೇಕಡ ೫೦ರಷ್ಟು ಸಹಾಯವನ್ನು ರಾಜ್ಯ ಸರ್ಕಾರಕ್ಕೆ ನೀಡಬೇಕೆಂದು ಯೋಜನಾ ಆಯೋಗ ಹೇಳಿದೆ. ಆದ್ದರಿಂದ ನಾವು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ೨೦೦ ಹಾಸ್ಟಲ್ ಕಟ್ಟಡಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದರು. ಅದು ಏನಾಯಿತು? ಕಟ್ಟಡಗಳನ್ನು ಇನ್ನೂ ಕಟ್ಟಿಸುತ್ತಲೇ ಇದ್ದೀರಾ ಹೇಗೆ?

ಶ್ರೀ ಜಿ. ಬಸವಣ್ಣೆಪ್ಪ.—೧೯೮೫ರಲ್ಲಿ ಕೇವಲ ೧೪೮ ಹಾಸ್ಟೆಲ್ ಕಟ್ಟಡಗಳು ಇದ್ದವು.

ಶ್ರೀ ಬಿ. ಬಸವಲಿಂಗಪ್ಪ.—೧೯೮೭ರಲ್ಲಿ ನೀವು ಕಟ್ಟಿಸಿದ್ದು ಎಷ್ಟು?

ಶ್ರೀ ಜಿ. ಬಸವಣ್ಣೆಪ್ಪ.—ಅದನ್ನು ಹೇಳುತ್ತೇನೆ. ಈ ಹಾಸ್ಟಲ್ ಕಟ್ಟಡಗಳ ಬಗ್ಗೆ ಮತ್ತು ಈ ಹಾಸ್ಟಲ್‌ಗಳ ಸಮಸ್ಯೆಗಳ ಅಧ್ಯಯನ ಮಾಡಲು ಶ್ರೀ ಗುರುಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರ ನೇಮಕ ಮಾಡಿತ್ತು, ಆ ಸಮಿತಿಯವರು ಕೊಟ್ಟ ವರದಿ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. Based on the report of the Guruprasad Committee, our Chief Minister has taken action immediately and he has provided 9 crores. ಈ ಹಾಸ್ಟಲ್ ಕಟ್ಟಡಗಳ ಕೆಲಸವನ್ನು ನಾವು ಲ್ಯಾಂಡ್ ಆರ್ಮಿ ನವರಿಗೆ ವಹಿಸಿಕೊಟ್ಟಿದ್ದೇವೆ. ಈಗ ೫೭ ಕಟ್ಟಡಗಳ ಕೆಲಸ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುತ್ತಿದೆ. ranging from 9 lakhs to 10 lakhs They are under progress. ಈ ಕೆಲಸಕ್ಕಾಗಿ ೫ ಕೋಟಿ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಈ ವರ್ಷ ಮತ್ತೆ ೩ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ. It is definitely a remarkable progress.

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೇಳಿದ್ದುದು ೨೦೦. ಆದರೆ ೮-೧೦ ಕಟ್ಟಡಗಳನ್ನು ಕಟ್ಟಿಸಿದ್ದೀರಿ ಅಷ್ಟೆ.

ನೀವು ಏನು ವಾಗ್ದಾನ ಮಾಡುತ್ತೀರಿ ಅದರಂತೆ ನಡೆದುಕೊಳ್ಳಿ ಎಂದು ಹೇಳುತ್ತಾ ಇದ್ದೇನೆ. ನೀವು ಮಾಡಿ ಎಂದು ನಾನು ಹೇಳುತ್ತಾ ಇಲ್ಲ. ನೋಡೋಣ ಮುಂದೆ ಏನು ಮಾಡುತ್ತೀರಿ ಎಂದು.

ಶ್ರೀ ಜಿ. ಬಸವಣ್ಣೆಪ್ಪ.—ಅದೇ ರೀತಿ ಈ ಆರ್ಥಿಕ ಪ್ರಗತಿ ಬಗ್ಗೆ ಈಗಾಗಲೇ ಹೇಳಿದೆ. ಈ ವಿಶೇಷ ಘಟಕ ಯೋಜನೆಯಿಂದ ಪ್ರತಿವರ್ಷ ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಮಾಡುತ್ತಾ ಇದ್ದೇವೆ. ಹಿಂದೆ ಈ ವಿಶೇಷ ಘಟಕ ಯೋಜನೆ ಮತ್ತು ಟ್ರೈಬಲ್ ಸಬ್ ಪ್ಲಾನ್ ಅನ್ನು ಸ್ಪೆಷಲ್ ಡಿ. ಸಿ., ಡಿ. ಆರ್. ಎಸ್. ಎಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇಂಪ್ಲಿಮೆಂಟ್ ಮಾಡುತ್ತಾ ಇದ್ದರು. ನಾನು ಹೇಳುತ್ತಾ ಇದ್ದೇನೆ. It was not that effective. ಅನೇಕ ಕಾರ್ಯ ಕ್ರಮಗಳನ್ನು ಯಾವ ಉದ್ದೇಶಕ್ಕಾಗಿ ರೂಪಿಸುತ್ತಿದ್ದವೋ ಆ ಉದ್ದೇಶಕ್ಕೆ ಆ ಜನಗಳಿಗೆ ಮುಟ್ಟುತ್ತಾ ಇರಲಿಲ್ಲ. ಈಗ ಆಡಳಿತ ವಿಕೇಂದ್ರೀಕರಣ ಆಗಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳು

ಬಂದಿದೆ. ಉದಾಹರಣೆಗೆ ಫಲಾನುಭವಿಗಳನ್ನು ಗುರುತು ಮಾಡತಕ್ಕಂಥ ಜವಾಬ್ದಾರಿ ಮಂಡಲ ಪಂಚಾಯಿತಿಗೆ ಇದೆ. ಮಂಡಲ ಪಂಚಾಯಿತಿ ಕರೆದು ಗ್ರಾಮಸಭೆ ಕರೆದು ಅರ್ಹ ಫಲಾನುಭವಿಗಳನ್ನು ಗುರುತುಮಾಡಿ ತೀರ್ಮಾನ ಮಾಡತಕ್ಕಂಥ ಒಂದು ವಿಧಾನ ಇದೆ. ಪ್ರಾರಂಭದ ವರ್ಷದಲ್ಲಿ ಸ್ವಲ್ಪ ಎಡರು ತೊಡರುಗಳು ಆಗಿದೆ. ಆ ಎಡರು ತೊಡರುಗಳು ಏನು ಎನ್ನುವುದನ್ನು ಆಮೇಲೆ ಹೇಳುತ್ತೇನೆ. ಈ ರೀತಿ ಅನ್ಯಾಯ ಆಗುವುದಕ್ಕೆ, ಅವ್ಯವಹಾರ ಆಗುವುದಕ್ಕೆ ಆಡಳಿತ ವಿಕೇಂದ್ರೀಕರಣ ಆಗಿದ್ದರಿಂದ ಅವಕಾಶವೇ ಇಲ್ಲ. ಅರ್ಹ ಫಲಾನುಭವಿಗಳಿಗೆ ಇದು ಸಿಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈಗ ಏನು ಈ ವಿಶೇಷ ಘಟಕ ಯೋಜನೆಯಲ್ಲಿ ಬಡವರನ್ನು ಬಡತನ ರೇಖೆಯಿಂದ ಮೇಲೆ ಎತ್ತತಕ್ಕ ಕಾರ್ಯಕ್ರಮಗಳಿವೆ ಅವು ಬಡವರಿಗೆ ಮುಟ್ಟಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮುಟ್ಟಿ ಅವರು ಬಡತನ ರೇಖೆಯಿಂದ ಮೇಲೆ ಹೋಗುವುದಕ್ಕೆ ನಿಜವಾಗಲೂ ಫಲಕಾರಿಯಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ವಿಶೇಷ ಘಟಕ ಯೋಜನೆ ಬಗ್ಗೆ ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಅದಕ್ಕೆ ಉತ್ತರ ಕೊಡಬೇಕು ಬರೀ ಮಾರ್ಚಿ ತಿಂಗಳಲ್ಲೇ ನೀವು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ. ಜಿಲ್ಲಾ ಪರಿಷತ್, ಮಂಡಲ್ ಪಂಚಾಯಿತಿ ಆದಮೇಲೆ ಮಂಡಲ ಪಂಚಾಯಿತಿಗೆ ಜವಾಬ್ದಾರಿ ಕೊಟ್ಟು ಈ ಜಾತಿ ವೈಷಮ್ಯದಿಂದ, ಇದಕ್ಕೆ ಸರಿಯಾಗಿ ಹಣವನ್ನು ಖರ್ಚು ಮಾಡದೆ, ಅವರಿಗೆ ನೇರವಾಗಿ ಸಿಕ್ಕುತ್ತಾ ಇಲ್ಲ ಎನ್ನುವುದು ನನ್ನ ವಾದ, ಇದನ್ನು ನಾನು ಹೇಳಿದ್ದೇನೆ. ಇದಕ್ಕೆ ಉತ್ತರ ಕೊಡಿ.

ಶ್ರೀ ಬಿ ಬಸವಣ್ಣೆಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಈ ವಿಶೇಷ ಘಟಕ ಯೋಜನೆಯಲ್ಲಿ ಅತಿ ಮುಖ್ಯವಾದಂಥ ಕಾರ್ಯಕ್ರಮ ಅಂದರೆ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಅನುಕೂಲ ಮಾಡತಕ್ಕಂಥದ್ದು.

ಶ್ರೀ ಬಿ. ರಾಚಯ್ಯ.—ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಮಾನ್ಯ ರಾಚಯ್ಯನವರೆ, ಅಲ್ಲೇ ನಿಂತುಕೊಂಡು ಹೇಳಿ ಪಾಯಿಂಟ್ ಆಫ್ ಆರ್ಡರ್. ರಾಚಯ್ಯನವರೆ ಆ ಜಾಗದಲ್ಲೇ ನಿಂತುಕೊಂಡು ಪಾಯಿಂಟ್ ಆಫ್ ಆರ್ಡರ್ ಹೇಳಿ, ನಾನು ಪರ್ಮಿಷನ್ ಕೊಡುತ್ತೇನೆ.

(ಗೊಂದಲ)

ಶ್ರೀ ಪಟವಂಕ್ಕಿ ರತ್ನಾಕರ್.—ಅವರ ಜಾಗ ಯಾವುದು ಅಧ್ಯಕ್ಷರೆ.

MR. SPEAKER —I have permitted the Hon. Health Minister to speak from the same place. ಅವರು ಪಾಯಿಂಟ್ ಆಫ್ ಆರ್ಡರ್ ಹೇಳಬೇಕು ಎಂದು ಹೇಳಿದಾಗ ಅವರ ಜಾಗದಲ್ಲಿ ಮತ್ತೊಬ್ಬರು ಇದ್ದರು, ಆದುದರಿಂದ ಅಲ್ಲೇ ನಿಂತುಕೊಂಡು ಹೇಳಿ ಎಂದು ನಾನೇ ಹೇಳಿದೆ.

SRI B. BASAVALINGAPPA.—Have you suspended the rules ?

MR. SPEAKER.—I have permitted the Hon. Minister.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಾಚಯ್ಯನವರು ಯಾವಾಗಲಾದರೂ ಒಂದು ಸಾರಿ ಮಾತನಾಡಿ ಪ್ರಾಬ್ಲಂ ಕ್ರಿಯೇಟ್ ಮಾಡುತ್ತಾರೆ.

ಅಧ್ಯಕ್ಷರು.—ಅವರು ಏನು ಪ್ರಾಬ್ಲಂ ಕ್ರಿಯೇಟ್ ಮಾಡಿದರು ಎನ್ನುವುದನ್ನು ಹೇಳಿ ನೋಡೋಣ. ಅವರು ಏನು ಪ್ರಾಬ್ಲಂ ಕ್ರಿಯೇಟ್ ಮಾಡಿದರು ? ಅವರು ಈಗ ಜಾಗಕ್ಕೆ ಬರುತ್ತೇನೆ ಎಂದು ಹೇಳಿದರು ಅವರ ಜಾಗದಲ್ಲಿ ಬೇರೆಯವರು ಕುಳಿತಿದ್ದರು. ಆದ್ದರಿಂದ ಅಲ್ಲೇ ನಿಂತುಕೊಂಡು ಪಾಯಿಂಟ್ ಆಫ್ ಆರ್ಡರ್ ಏನು ಎನ್ನುವುದನ್ನು ಹೇಳಿ ಎಂದು ನಾನು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೂಲ್ಸ್ ಸಸ್ಪೆಂಡ್ ಮಾಡಿ ಬೇಕಾದರೆ ಅವರಿಗೆ ಹೇಳಿ.

ಅಧ್ಯಕ್ಷರು.—ಸಸ್ಪೆಂಡ್ ಮಾಡಿಯೇ ಹೇಳಿದ್ದುದು. I have permitted the Hon. Health Minister. To raise his point of order. ರಾಚಯ್ಯನವರೆ ಪಾಯಿಂಟ್ ಆಫ್ ಆರ್ಡರ್ ಏನು ಹೇಳಿ.

ಶ್ರೀ ಬಿ. ರಾಚಯ್ಯ.—ಮಾನ್ಯ ಮಂತ್ರಿಗಳು ಈಲ್ ಆಗದೇ ಇದ್ದಾಗ ಮಾನ್ಯ ಬಸವಲಿಂಗಪ್ಪನವರು ಮಾತನಾಡುವುದು ಸರಿಯಲ್ಲ ಎಂದು. ಈಗ ಬಸವಲಿಂಗಪ್ಪನವರು ಕುಳಿತುಕೊಂಡಿದ್ದಾರೆ, ಮಂತ್ರಿಗಳು ಮುಂದುವರಿಸಲಿ,

ಅಧ್ಯಕ್ಷರು.—ಅದು ಕರೆಕ್ಟ್. ಅವರು ಹೇಳಿರುವುದರಲ್ಲಿ ಸತ್ಯಾಂಶ ಇದೆ. ಬಸವಲಿಂಗಪ್ಪನವರೇ ದಯಮಾಡಿ ಕುಳಿತುಕೊಳ್ಳಿ. ನೋಡಿ, ನೀವು ಮಾತನಾಡುವಾಗ ಅವರು ಇಂಟರ್‌ಫಿಯರ್ ಮಾಡಲಿಲ್ಲ. ಅವರು ಚೆನ್ನಾಗಿ ಉತ್ತರ ಹೇಳುತ್ತಿದ್ದಾರೆ, ಕೇಳಿರಿ. ಆಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಬೆಂಬಲ ಕೊಟ್ಟಿದ್ದೀರಿ, ಅವರು ಬೆಂಬಲ ಕೊಟ್ಟಿದ್ದಾರೆ. ಅವರು ಹೇಳಿದ್ದೆಲ್ಲಾ ಸರಿ......

ಅಧ್ಯಕ್ಷರು.—ಅವರು ಉತ್ತರ ಹೇಳಿ ಮುಗಿಸಲಿ, ಬಸವಲಿಂಗಪ್ಪನವರೇ ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ.

SRI B. BASAVALINGAPPA.—Healthy intervening is very good You must encourage it at proper time. But, he is going on jumping That is why I am telling.

ಅಧ್ಯಕ್ಷರು.—ಅವರಿಗೆ ಬೇಕಾದದ್ದು, ಅವರಿಗೆ ತಿಳಿದದ್ದು ಹೇಳಲಿ. ನೀವು ನಿಮಗೆ ತಿಳಿದದ್ದು ಯೋಗ್ಯವಾದ್ದು ಹೇಳಿದಿರೋ ಇಲ್ಲವೋ ಹಾಗೇ ಅವರೂ ತಿಳಿದದ್ದು, ಯೋಗ್ಯವಾದದ್ದನ್ನು ಹೇಳಲಿ. ನೀವು ಹಂಸಕ್ಷೀರ ನ್ಯಾಯದಂತೆ ತೆಗೆದುಕೊಳ್ಳಬೇಕು. ಅವರು ಏನೇ ಹೇಳಲಿ, ಇವರು ಏನೇ ಹೇಳಲಿ ನೀವು ಹಂಸಕ್ಷೀರ ನ್ಯಾಯದಂತೆ ತೆಗೆದುಕೊಳ್ಳಬೇಕು. ಹಾಲು ತೆಗೆದುಕೊಂಡು ನೀರು ಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಕ್ಷೀರ ಬೇಕು.

ಅಧ್ಯಕ್ಷರು.—ಹಾಲು ತೆಗೆದುಕೊಳ್ಳಿ, ನೀರು ಬಿಡಿರಿ.

ಶ್ರೀ ಬಿ. ಬಸವಲಿಂಗಪ್ಪ.—ವಿಶೇಷ ಘಟಕ ಯೋಜನೆಯಲ್ಲಿ ಅತಿಮುಖ್ಯವಾದಂಥ ಕಾರ್ಯಕ್ರಮ ಅಂದರೆ ನೀರಾವರಿ ಬಾವಿಗಳನ್ನು ಒದಗಿಸತಕ್ಕಂಥಾದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಿ ಕೊಡುವುದು, ಇದು ಒಂದು ಮಹತ್ತರವಾದ ಯೋಜನೆಯಾಗಿದೆ. ಈಗ ವೈಯಕ್ತಿಕವಾದ ಬಾವಿಗೆ ಒಟ್ಟು ವೆಚ್ಚ ೩೫ ಸಾವಿರ, ಸಾಮೂಹಿಕ ಕೊಳವೆ ಬಾವಿಗಳಿಗೆ ೨ ಲಕ್ಷ. ಇದರಲ್ಲಿ ೭೫ ರಷ್ಟು ಸಹಾಯಧನ, ೨೫ ರಷ್ಟು ಸಾಲದ ರೂಪದಲ್ಲಿದೆ.

ಮಾನ್ಯ ಅಧ್ಯಕ್ಷರೆ, ೧೯೮೦–೮೧ ರಿಂದ ಇಲ್ಲಿಯವರೆಗೆ ೧೧೨೨ ಕೊಳವೆ ಬಾವಿಗಳ ಗುರಿಯನ್ನು ಇಟ್ಟುಕೊಂಡಿದ್ದೆವು. ೨೭೨ ಕಮ್ಯುನಿಟಿ ಕೊಳವೆ ಬಾವಿಗಳನ್ನು ಒದಗಿಸುವ ಗುರಿ ಇಟ್ಟುಕೊಂಡು ಅದಕ್ಕಾಗಿ ೩೦.೯೨ ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ಪೈಕಿ ೮೭೩೮ ಕೊಳವೆ ಬಾವಿಗಳನ್ನು ಈಗಾಗಲೇ ತೆಗೆಯಲಾಗಿದೆ. ೧೩೮ ಕಮ್ಯುನಿಟಿ ಕೊಳವೆ ಬಾವಿಗಳನ್ನು ತೆಗೆಯಲಾಗಿದೆ. ಇವುಗಳ ಪೈಕಿ ೬೯೨೦ ಕೊಳವೆ ಬಾವಿಗಳು ಸಕ್ಸೆಸ್‌ಫುಲ್ ಆಗಿವೆ. ೧೩೩ ಕಮ್ಯುನಿಟಿ ಕೊಳವೆ ಬಾವಿಗಳು ಸಕ್ಸೆಸ್‌ಫುಲ್ ಆಗಿವೆ. ಈ ಒಂದು ಯೋಜನೆಯಿಂದ ೧೭೮೪೫ ಎಕರೆ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಇದು ಅತ್ಯಂತ ಪ್ರಮುಖವಾದ ಕಾರ್ಯಕ್ರಮ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿ ನಿಗಮದವರು ನಡೆಸತಕ್ಕ ಈ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾಗಿದ್ದು ಚೆನ್ನಾಗಿ ನಡೆಯುತ್ತಿದೆ. ಇದರ ಜೊತೆಗೆ ನಿಗಮದವರು ಬಡತನದ ರೇಖೆಯಿಂದ ಕೆಳಗಿರತಕ್ಕಂಥವರನ್ನು ಮೇಲಕ್ಕೆ ತರುವ ದೃಷ್ಟಿಯಿಂದ ಬೀಜಧನದ ಯೋಜನೆಯನ್ನು ಹಾಕಿಕೊಂಡಿದ್ದು, ಅದರ ಮೂಲಕ ಸ್ವಾವಲಂಬನೆ ಯೋಜನೆ, ಕೊಳವೆ ಬಾವಿ ಯೋಜನೆ, ಮೋಟಾರು ಡ್ರೈವಿಂಗ್ ತರಬೇತಿ ಹೀಗೆ ಮೂರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಸಹಾಯಧನ ಬೀಜಧನದ ಯೋಜನೆಯಲ್ಲಿ ೧,೭೬,೯೭೩ ಜನಗಳಿಗೆ ಸಹಾಯವನ್ನು ಒದಗಿಸಲಾಗಿದೆ. ಈ ಒಂದು ಯೋಜನೆ ಸಾಲದ ರೂಪದಲ್ಲಿತ್ತು, ಅಂದರೆ ಶೇಕಡ ೨೫ರಷ್ಟು ಸೀಡ್ ಮನಿ. ೭೫ ಭಾಗ ಬ್ಯಾಂಕಿನ ಸಾಲ ತೆಗೆದುಕೊಳ್ಳಬೇಕಾಗಿತ್ತು. ೩೧–೧೦–೭೭ರಿಂದ ಬೀಜಧನ ಯೋಜನೆಯನ್ನು ಸಹಾಯಧನ

ಯೋಜನೆಯನ್ನಾಗಿ ಪರಿವರ್ತಿಸಿ ೨೫ ಪರ್ಸೆಂಟ್ ಸೀಡ್‌ಮನಿ ೨೫ ಪರ್ಸೆಂಟ್ ಸಬ್ಸಿಡಿ ಮತ್ತು ೫೦ ಪರ್ಸೆಂಟ್ ಬ್ಯಾಂಕ್‌ಸಾಲ ಹೀಗೆ ಬಡ ಜನಗಳಿಗೆ ಕೊಡುವಂಥ, ಆ ಮೂಲಕ ಅವರಿಗೆ ಸಹಾಯ ಮಾಡುವಂಥ ಒಂದು ಕೆಲಸವನ್ನು ಈ ಅಭಿವೃದ್ಧಿ ನಿಗಮ ಮಾಡುತ್ತಿದೆ. ಈ ವರ್ಷವೂ ಕೂಡ ಸಮಾಜಕಲ್ಯಾಣ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಹಾಗೂ ಹಿಂದುಳಿದವರ್ಗಗಳ ಇಲಾಖೆಗೆ ಹೆಚ್ಚಿನ ಹಣ ಒದಗಿಸಲಾಗಿದೆ. ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರು ಯಾವ ಹಿನ್ನೆಲೆಯಲ್ಲಿ ಹೆಚ್ಚಿಗೆ ಹಣ ಒದಗಿಸಿಲ್ಲವೆಂದು ಮಾತನಾಡಿದರೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆನ್ಯುಯಲ್ ಪ್ಲಾನ್ ಔಟ್‌ಲೇ ನೋಡಿದರೆ, ಸೋಷಿಯಲ್ ವೆಲ್‌ಫೇರ್ ಮತ್ತು ಕಮ್ಯೂನಿಟಿ ಸರ್ವೀಸಸ್‌ಗೆ ಟೇಬಲ್ ೧೮ರಲ್ಲಿ ಕೊಟ್ಟಿದ್ದೀರಿ, ಹಣ ಹೆಚ್ಚಿಗೆ ಕೊಟ್ಟಿರಬಹುದು. ಈ ವರ್ಷ ೧೦೦ ಕೋಟಿ ಇಟ್ಟಿರಬಹುದು, ೭೮ರಲ್ಲಿ ೫೦ ಕೋಟಿ ಇಟ್ಟಿರಬಹುದು. ಅದನ್ನು ತಾಳೆ ಹಾಕಿದರೆ ಕಡಿಮೆ ಆಗುತ್ತದೆ. ಪಿಕ್ಚರ್ ಆಫ್ ಕರ್ನಾಟಕ ಬಜೆಟ್ಟಿನಲ್ಲಿ ಟೇಬಲ್ ೧೫ ಮತ್ತು ೧೮ರಲ್ಲಿ ನೋಡಿದರೆ ಗೊತ್ತಾಗುತ್ತದೆ. ೮೩–೮೪ರಲ್ಲಿ ೨೩ ಪರ್ಸೆಂಟ್ ಇದ್ದರೆ, ೮೪–೮೫ಕ್ಕೆ ೩೦ಕ್ಕೆ ಬಂತು. ೮೫–೮೬ರಲ್ಲಿ ೩೧ಕ್ಕೆ ಬಂದಿದೆ. ೮೬–೮೭ರಲ್ಲಿ ೩೩ಕ್ಕೆ ಹೋಗಿದ್ದದ್ದು ೮೭–೮೮ರಲ್ಲಿ ೩೦ಕ್ಕೆ ಇಳಿದಿದೆ. ೮೮–೮೯ರಲ್ಲಿ ೨೭ಕ್ಕೆ ಬಂದಿದೆ. ಅಂದರೆ ಇದರ ಅರ್ಥ ವರ್ಷೇ ವರ್ಷೇ ಕಡಿಮೆಯಾಗುತ್ತಾ ಹೋಗುತ್ತಿದೆ. ನಿಮಗೆ ರೆಫರೆನ್ಸ್ ಬೇಕಾದರೆ ಕಳುಹಿಸಿಕೊಡುತ್ತೇನೆ. ನಾವು ಇದರ ಆಧಾರದ ಮೇಲೆಯೇ ಮಾತನಾಡಬೇಕಾಗಿದೆ.

ಶ್ರೀ ಜಿ. ಬಸವಣ್ಣೆಪ್ಪ.—ನಾವು ಏನು ಖರ್ಚು ಮಾಡಿದ್ದೇವೆ ಅದರ ಆಧಾರದ ಮೇಲೆ ಮಾತನಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದುಡ್ಡು ಕೊಟ್ಟಿದ್ದೀರಿ. ೧೯೭೮ರಲ್ಲಿ ೫೦ ರೂಪಾಯಿ ಕೊಟ್ಟಿರಬಹುದು. ಈಗ ೭೫ ರೂಪಾಯಿ ಕೊಟ್ಟಿರಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಇದು ಡಿಬೇಟ್‌ಗೆ ಉತ್ತರವೋ ? ಅಥವಾ ಸಂವಾದವೋ ಹೇಗೆ ?

ಶ್ರೀ ಜಿ. ಬಸವಣ್ಣೆಪ್ಪ.—ಖರ್ಚು ಮಾಡುವುದನ್ನು ಕಡಿಮೆ ಮಾಡಿಲ್ಲ, ಹೆಚ್ಚಿಗೆ ಖರ್ಚು ಮಾಡಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ನೋಟ್ ಮಾಡಿಕೊಳ್ಳಿ.

ಅಧ್ಯಕ್ಷರು.—ತಾವು ವಿವರಣೆ ಕೇಳಿ. ಅವರು ಸ್ಟಡಿ ಮಾಡಿಕೊಂಡು ಬಂದಿರುತ್ತಾರೆ. ನಿಮಗೆ ವಿವರಣೆ ಕೇಳಲು ನಂತರ ಅವಕಾಶ ಕೊಡುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್ ಅವರು ಮೂರನೆ ಹಿಂದುಳಿದ ಆಯೋಗದ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ ಅದರ ಬಗ್ಗೆ ನಾನು ಅನಂತರ ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಬಹಳ ಹಿರಿಯರು, ಅನುಭವಿಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಾಯಕರು ಈ ಇಲಾಖೆಯ ಬಗ್ಗೆ ಅನೇಕ ವಿಷಯಗಳ ವಿಚಾರದಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಅವರು ಮಾತನಾಡುತ್ತಾ, ಈ ಸಮಾಜ ಕಲ್ಯಾಣ ಇಲಾಖೆಯ ಹೆಸರನ್ನು ಬದಲಾಯಿಸಬೇಕು ಇದು ಸಮಾಜ ಸುಧಾರಣೆ ಇಲಾಖೆ ಆಗಬೇಕೆಂದು ಹೇಳಿದ್ದಾರೆ. ಅಧ್ಯಕ್ಷರೆ ಈ ಹೆಸರನ್ನು ಬದಲಾವಣೆ ಮಾಡುವುದರಿಂದ ಇಲಾಖೆಯ ಕೆಲಸ ಚುರುಕಾಗುತ್ತದೆಂದು ಅಲ್ಲ. ಈ ಇಲಾಖೆಯಲ್ಲಿ ಕೆಲಸ ಮಾಡುವವರ ಮತ್ತು ಮಂತ್ರಿಗಳ ಮನೋಭಾವ ಬದಲಾವಣೆಯಾಗಬೇಕೆ ? ಹೊರತು ಬರೀ ಇಲಾಖೆಯ ಹೆಸರನ್ನು ಬದಲಾವಣೆ ಮಾಡುವುದರಿಂದ ಸುಧಾರಣೆಯಾಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಸಮಾಜ ಕಲ್ಯಾಣ ಇಲಾಖೆ ಎನ್ನುವ ಹೆಸರು ಏನಿದೆ ಇದು ಬಹಳ ಚೆನ್ನಾಗಿದೆ. ಆದ್ದರಿಂದ, ಆ ಹೆಸರನ್ನು ಬದಲಾವಣೆ ಮಾಡಲಿಕ್ಕೆ ಹೋಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಹಾಗೆಯೇ ಮಾನ್ಯ ಬಸವಲಿಂಗಪ್ಪನವರು ಎರಡನೆಯದಾಗಿ ಒಂದು ವಿಚಾರವನ್ನು ತಿಳಿಸಿದರು. ಆದರೆ ಅದನ್ನು ಧ್ವಂಧ್ವ ಅಭಿಪ್ರಾಯದಲ್ಲಿ ಹೇಳಿದ್ದಾರೆ. ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರು ಹೆಣ್ಣುಮಕ್ಕಳಾಗಿರುವುದರಿಂದ, ಅವರಲ್ಲಿ ಕಠಿಣತೆ ಇರುವುದಿಲ್ಲ ಆಡಳಿತಾತ್ಮಕ ಬಿಗಿ ಇರುವುದಿಲ್ಲ. ಹೆಣ್ಣುಮಕ್ಕಳ ಬದಲು ಗಂಡುಮಕ್ಕಳು ಇರಬೇಕೆನ್ನುವ ಮಾತನ್ನು ಹೇಳಿದ್ದಾರೆ. ಅದೇ ಸಮಯದಲ್ಲಿ ಇನ್ನೊಂದು ಕಡೆ ಹೆಣ್ಣು ಮಕ್ಕಳಿಗೆ ಸರಿಸಮಾನತೆ ಇರಬೇಕು, ಆಸ್ತಿಯಲ್ಲಿ ಹಕ್ಕು ಇರಬೇಕೆಂದು ಹೇಳಿದ್ದಾರೆ. ಈ ರೀತಿಯಾಗಿ ಅವರು ಧ್ವಂಧ್ವ ಅಭಿಪ್ರಾಯವನ್ನು ಹೇಳಿದ್ದಾರೆಂದು

ನಾನು ಹೇಳುತ್ತಿದ್ದೇನೆ. ಈಗಿನ ಹೆಣ್ಣು ಮಕ್ಕಳು ಯಾರಿಗೂ ಕಡಿಮೆ ಇಲ್ಲ, ನಮ್ಮ ಇಲಾಖೆಯ ನಿರ್ದೇಶಕರು ಐ.ಎ.ಎಸ್. ಆಫೀಸರ್ ಇದ್ದಾರೆ. ಕನ್ನಡವನ್ನು ಬಲ್ಲವರು ಇದ್ದಾರೆ, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಮಾತನಾಡುತ್ತಾ ಮಹಿಳೆಯರ, ಮಕ್ಕಳ ಮತ್ತು ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕರು ಬಹಳ ದಯಾಳುಗಳಾಗಿರಬೇಕು. ಅವರಿಗೆ ಕನ್ನಡ ಚೆನ್ನಾಗಿ ಗೊತ್ತಿರಬೇಕು ರಾಜ್ಯಾದ್ಯಂತ ಪ್ರವಾಸ ಮಾಡುವಂತಹವರು ಇರಬೇಕೆಂದು ಹೇಳಿದರು. ನಮ್ಮ ಇಲಾಖೆಯ ನಿರ್ದೇಶಕರು ಬಹಳ ದಕ್ಷರಿದ್ದಾರೆ. ಹೆಣ್ಣುಮಗಳಾದರೂ ಅವರಲ್ಲಿ ಕಠಿಣತೆ ಇದೆ. ಹೆಣ್ಣು ಮಕ್ಕಳ ರಕ್ಷಣೆ, ಎಲ್ಲರ ರಕ್ಷಣೆ ಮಾಡತಕ್ಕ ಶಕ್ತಿ ಇದೆ, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಹೇಳಿದ ಹಾಗೆ ಇನ್‌ಟೆನ್‌ಸೀವ್ ಆಗಿ ಟೂರ್ ಮಾಡಿ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಸೂಕ್ತ ಆದೇಶ, ನಿರ್ದೇಶನವನ್ನು ಕೊಡುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಧ್ವಂಧ್ವ ಅಭಿಪ್ರಾಯವನ್ನು ಹೇಳಿದ್ದಾರೆ. ಅವರ ಅಭಿಪ್ರಾಯವನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡು ಅದರಲ್ಲಿ ಯಾವುದು ಸಾಧ್ಯ, ಯಾವುದು ಅಸಾಧ್ಯ ಎಂದು ನೋಡಿ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಇನ್ನು ಬೋರ್ಡಿಂಗ್ ಚಾರ್ಜ್‌ಸ್ ಬಗ್ಗೆ ಅವರು ಏನು ಹೇಳಿದ್ದಾರೆ ಅದು ನಿಜ. ಮಾನ್ಯ ಖರ್ಗೆಯವರು ಒಂದು ಪ್ರಶ್ನೆಯನ್ನು ಹಾಕಿದಾಗ ನಾನು ಉತ್ತರವನ್ನು ಹೇಳಿದ್ದೇನೆ. ಈಗಿನ ದುಬಾರಿ ಕಾಲದಲ್ಲಿ ಬೋರ್ಡಿಂಗ್ ಚಾರ್ಜ್‌ಸ್ ಬಹಳ ಕಡಿಮೆ ಇದೆ. ಉದಾಹರಣೆಗೆ ವಸತಿ ಶಾಲೆ, ಆಶ್ರಮ ಶಾಲೆ ಇವೆ. ಅಲ್ಲಿ ನಾವು ಬೋರ್ಡಿಂಗ್ ಚಾರ್ಜ್‌ಸ್ ೭೫ ರೂಪಾಯಿ ಕೊಡುತ್ತಿದ್ದೇವೆ. ಪ್ರೀಮೆಟ್ರಿಕ್ ಹಾಸ್ಟೆಲ್ಸ್ ಅವು ಪ್ರೈವೇಟ್ ಇರಬಹುದು. ಅಥವಾ ಗೌರ್ನಮೆಂಟ್ ಇರಬಹುದು ೬೭೫ ಪ್ರೀ ಮೆಟ್ರಿಕ್‌ಹಾಸ್ಟೆಲ್ಸ್ ಇವೆ, ಸುಮಾರು ೩೯ ಸಾವಿರ ಮಕ್ಕಳು ಓದುತ್ತಿದ್ದಾರೆ. ಅವರಿಗೆ ಬೋರ್ಡಿಂಗ್ ಚಾರ್ಜ್‌ಸ್ ೧೦೦ ರೂಪಾಯಿ ಕೊಡುತ್ತಿದ್ದೇವೆ. ಖಾಸಗಿ ೨೪೫ ಇವೆ ಅಲ್ಲಿಯೂ ಸಹ ಬೋರ್ಡಿಂಗ್ ಚಾರ್ಜ್‌ಸ್ ೧೦೦ ರೂಪಾಯಿ ಕೊಡುತ್ತಿದ್ದೇವೆ. ಇದು ಈಗಿನ ದುಬಾರಿ ಕಾಲದಲ್ಲಿ ಸಾಲುವುದಿಲ್ಲ ಎನ್ನುವುದು ನನಗೂ ಗೊತ್ತಿದೆ. ಕೇಂದ್ರ ಸರ್ಕಾರ ಕಾಲೇಜು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ೧೫೦ ರೂಪಾಯಿ ಸಂಪೂರ್ಣ ಗ್ರ್ಯಾಂಟ್ಸ್ನ್ನು ಕೊಡುತ್ತೇದೆ. ಅದನ್ನು ೨೫೦ ರೂಪಾಯಿ ಮಾಡಲಿಕ್ಕೆ ನಾವು ಶಿಫಾರಸು ಮಾಡಿದ್ದೇವೆ. ಯೋಜನಾ ಆಯೋಗದವರು ಶಿಫಾರಸು ಮಾಡಿದ್ದಾರೆ, ಸೆಂಟ್ರಲ್ ಕ್ಯಾಬಿನೆಟ್ ಸಬ್ ಕಮಿಟಿಯವರೂ ಸಹ ತೀರ್ಮಾನ ಮಾಡಿ, ಅದನ್ನು ೨೫೦ ರೂಪಾಯಿಗೆ ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಜೊತೆಗೆ ಒಬ್ಬ ವಿದ್ಯಾರ್ಥಿಗೆ ೧೨ ಸಾವಿರ ರೂಪಾಯಿ ಇನಾಕಮ್ ಏನಿದೆ ಅದನ್ನು ೨೦ ಸಾವಿರ ರೂಪಾಯಿಗೆ ಮಾಡಬೇಕೆಂದು ಕ್ಯಾಬಿನೆಟ್ ಸಬ್‌ಕಮಿಟಿ ಹೇಳಿದೆ. ನಾವೂ ಸಹ ಅದನ್ನು ರೆಕಮೆಂಡ್ ಮಾಡಿದ್ದೇವೆ. ಅದು ಯಾವಾಗ "ಅಸ್ತು" ಆಗಿ ಬರುತ್ತದೆ ಆಗ ನಾವೂ ಸಹ ಗ್ರ್ಯಾಂಟ್ ಜಾಸ್ತಿ ಮಾಡುವುದಕ್ಕೆ ಈಗಾಗಲೇ ಸಚಿವ ಸಂಪುಟದ ಮುಂದೆ ರಿಪೋರ್ಟ್‌ನ್ನು ತರಿಸಿದ್ದೇನೆ.......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಈಗಲೇ ಡಿಕ್ಲೇರ್ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ತಾವು ಇದ್ದೀರಿ. ಇವೊತ್ತು ಬೆಲೆಗಳು ಗಗನಕ್ಕೇರಿರುವುದರಿಂದ ತಾವೇ ಡಿಕ್ಲೇರ್ ಮಾಡಿ. ಇದಕ್ಕೆ ಪ್ರಿಸ್ಟೀಜ್ ಇಷ್ಯೂ ಮಾಡಿಕೊಳ್ಳಬೇಡಿ. ಇದು ಎಲ್ಲರಿಗೂ ಅನುಕೂಲ ವಾಗತಕ್ಕದ್ದು ಇದೆ. ಇವೊತ್ತು ಪ್ರೀ ಮೆಟ್ರಿಕ್ ಮತ್ತು ಪೋಸ್ಟ್ ಮೆಟ್ರಿಕ್‌ಗೆ ಜಾಸ್ತಿ ಮಾಡುವುದು ಅವಶ್ಯ ಇದೆ. ಆದ್ದರಿಂದ, ತಾವೇ ಅನೌನ್ಸ್ ಮಾಡಿಬಿಡಿ ೧೫೦–೩೦೦ ರೂಪಾಯಿ ಎಂದು ಹೇಳಿಬಿಡಿ...

ಶ್ರೀ ಜಿ. ಬಸವಣ್ಣಪ್ಪ.— ಆದಷ್ಟು ಬೇಗ ಒತ್ತಡ ತರುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅಧ್ಯಕ್ಷರೆ, ಅವರು ಇಬ್ಬರೂ ಒಂದು ಆದರೆ ಸರಿ, ಏಕೆ ಅಂದರೆ ಇದು ಬಹಳ ಮುಖ್ಯ ಇದೆ, ಆದ್ದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ತಾವೇ ಅನೌನ್ಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಸವಲಿಂಗಪ್ಪನವರು ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್‌ನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಸರ್ಕಾರದವರು ಇದರ ಬಗ್ಗೆ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಜಾತಿ ಸರ್ಟಿಫಿಕೇಟ್‌ಗಳನ್ನು ಕೊಡುವಾಗ ತಹಸೀಲ್ದಾರರವರ ಆಫೀಸಿನಲ್ಲಿ ಒಂದು ದೊಡ್ಡ ಕೋಲಾಹಲ, ಗೊಂದಲ ಉಂಟಾಗುತ್ತಿತ್ತು. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ನನಗೆ ಒಂದು ಸಾರಿ ಹೇಳಿದರು, ಒಂದುಸಾರಿ ಕ್ಯಾಸ್ಟ್ ಸರ್ಟಿಫಿಕೇಟ್‌ನ್ನು ಕೊಟ್ಟ ಮೇಲೆ ಪದೇ ಪದೇ ಕ್ಯಾಸ್ಟ್ ಸರ್ಟಿಫಿಕೇಟ್‌ಗಳನು

ಕೇಳಬಾರದು, ಆರೀತಿ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದರು. ಇದರ ಬಗ್ಗೆ ನಾವು ಬಹಳ ಆಲೋಚನೆ ಮಾಡಿ ಒಂದು ಕ್ರಮವನ್ನು ತೆಗೆದುಕೊಂಡು ಇದಕ್ಕೆ ಸಂಬಂಧಪಟ್ಟಂತೆ ಒಂದು ಸರ್ಕಾರೀ ಆದೇಶವನ್ನೂ ಕೂಡ ಮಾಡಿದೆವು. ಅದು ಏನೆಂದರೆ ಒಂದು ಪಾಸ್‌ಪೋರ್ಟ್ ಸೈಜಿನ ಫೋಟೋವನ್ನು ಹಾಕಿದಂಥ ಒಂದು ಕ್ಯಾಸ್ಟ್ ಸರ್ಟಿಫಿಕೇಟ್‌ನ್ನು ಕೊಟ್ಟಮೇಲೆ ಪದೇ ಪದೇ ಕ್ಯಾಸ್ಟ್ ಸರ್ಟಿಫಿಕೇಟ್‌ಗೆ ಹಾಕದಂತೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ಇದರಲ್ಲಿ ಬೋಗಸ್ ಸರ್ಟಿಫಿಕೇಟ್‌ಗಳಿವೆ. ಅಷ್ಟೇ ಅಲ್ಲ ಮಾನ್ಯ ಸದಸ್ಯರಾದ ಕಾನಡೆಯವರೂ, ಮಾನ್ಯ ಖರ್ಗೆಯವರೂ ಕೂಡ ಈ ಪ್ರಶ್ನೆಯನ್ನು ಎತ್ತಿ ಸವಿಸ್ತಾರವಾಗಿ ಹೇಳಿದ್ದಾರೆ. ಅದಕ್ಕೆ ನಾನೂ ಕೂಡ ಉತ್ತರವನ್ನು ಕೊಟ್ಟಿದ್ದೇನೆ. ೧೧೦೨೮ ಪ್ರಕರಣಗಳು ಬೆಳಕಿಗೆ ಬಂದಿವೆ. ಅದರಲ್ಲಿ ೮೦೨೩ ಪ್ರಕರಣಗಳಲ್ಲಿ ಸತ್ಯಾಂಶವಿದೆಯೆಂದು ಕಂಡುಬಂದಿದೆ. ನಾವು ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನತಕ್ಕ ಬಗ್ಗೆ ಉತ್ತರವನ್ನು ಈಗಾಗಲೇ ನಾನು ಕೊಟ್ಟಿರುವುದರಿಂದ ಮತ್ತೆ ಇದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಎರಡನೆಯದಾಗಿ ಸಮಾಜ ಕಲ್ಯಾಣ ಇಲಾಖೆ, ಬ್ಯಾಕ್‌ವರ್ಡ್‌ಕ್ಲಾಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಕೆಲಸಗಳನ್ನು ನಾವು ಜಿಲ್ಲಾ ಪರಿಷತ್ತುಗಳಿಗೆ ವರ್ಗಾವಣೆ ಮಾಡಿದಮೇಲೆ ಮಂತ್ರಿಗಳಿಗೆ, ನಿರ್ದೇಶಕರಿಗೆ ಏನು ಕೆಲಸವಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಿಜ. ಆಡಳಿತ ವಿಕೇಂದ್ರೀಕರಣವನ್ನು ಮಾಡಿ ನಾವು ನಮ್ಮ ಮಾತಿನಂತೆ ನಡೆದುಕೊಂಡು ಅವರಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ನಿರ್ದೇಶಕರಿಗೆ ಏನು ಕೆಲಸ ಎಂದರೆ, ನಿರ್ದೇಶಕರು ಸರ್ಕಾರದ ಪಾಲಿಸಿ ಮತ್ತು ಜಿಲ್ಲಾ ಪರಿಷತ್ತುಗಳು ಹಾಗೂ ಸರ್ಕಾರದ ನಡುವೆ ಒಂದು ಸೇತುವೆಯಾಗಿ ಕೆಲಸ ಮಾಡುವುದಕ್ಕೆ ಅಷ್ಟೇ ಅಲ್ಲ ಜಿಲ್ಲಾ ಪರಿಷತ್ತುಗಳಲ್ಲಿ ಏನಾದರೂ ಲೋಪದೋಷಗಳಾದರೆ ಅದನ್ನು ಸರಿಪಡಿಸುವುದಕ್ಕೆ ನಿರ್ದೇಶಕರು ಮತ್ತು ನಿರ್ದೇಶನಾಲಯ ಇರಬೇಕಾದ್ದು ಅವಶ್ಯಕ. ಆದ್ದರಿಂದ ನಿರ್ದೇಶನಾಲಯದ ಅವಶ್ಯಕತೆ ಇಲ್ಲವೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ ಎಂದು ನಾನು ತಮ್ಮ ಮುಖೇನ ಅವರಿಗೆ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಮಾತನಾಡಿದ್ದರಲ್ಲಿ ವಿಶೇಷ ಘಟಕ ಯೋಜನೆ ಜಿಲ್ಲಾ ಪರಿಷತ್ತುಗಳಿಗೆ ವರ್ಗಾವಣೆ ಆದಮೇಲೆ ಹೆಚ್ಚಿನ ಪ್ರಮಾಣದಲ್ಲಿ ಹಣ ಲ್ಯಾಪ್ಸ್ ಆಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ೧೯೮೭-೮೮ ರಲ್ಲಿ ರಾಜ್ಯಸರ್ಕಾರ ಒದಗಿಸಿದ ಹಣ ೮೫.೨೧ ಕೋಟಿ ರೂಪಾಯಿಗಳು. ಇದವರೆಗೆ ಖರ್ಚಾದುದು ೭೨ ಕೋಟಿ ರೂಪಾಯಿಗಳು. ಸ್ಪೆಷಲ್ ಸೆಂಟ್ರಲ್ ಅಸಿಸ್ಟೆನ್ಸ್ ೧೦.೫೬ ಕೋಟಿ ರೂಪಾಯಿಗಳನ್ನು ನಾವು ರಿಸೀವ್ ಮಾಡಿದ್ದೇವೆ. ಇದನ್ನು ಸಂಪೂರ್ಣವಾಗಿ ನಾವು ಖರ್ಚು ಮಾಡಿದ್ದೇವೆ. ಮೊದಲು ೮೨ ಪರ್ಸೆಂಟ್ ಖರ್ಚು ಮಾಡುವುದಕ್ಕೆ ತೊಂದರೆ ಏತಕ್ಕೆ ಆಯಿತೆಂದರೆ, ಫಲಾನುಭವಿಗಳನ್ನು ಗುರ್ತುಮಾಡುವುದರಲ್ಲಿ ನಿಧಾನವಾಯಿತು. ಈ ಫಲಾನುಭವಿಗಳನ್ನು ಗುರ್ತು ಮಾಡುವ ಕೆಲಸವನ್ನು ಮಂಡಲ ಪಂಚಾಯಿತಿಗಳಿಗೆ ವಹಿಸಿದ್ದೆವು. ಅವು ಗ್ರಾಮ ಸಭೆಗಳನ್ನು ಕರೆದು ಫಲಾನುಭವಿಗಳನ್ನು ಗುರ್ತುಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ತಡವಾಯಿತು ನಂತರ ಜಿಲ್ಲಾಪರಿಷತ್ತಿನಿಂದ ಹಣವನ್ನು ಈ ಸ್ಕೀಂಗಳಿಗೆ ರಿಲೀಸ್ ಮಾಡುವುದರಲ್ಲಿ ತಡವಾಯಿತು. ಇದನ್ನು ನಾವು ಪರಿಶೀಲಿಸುವಾಗ ಸಮಗ್ರವಾಗಿ ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಜೊತೆ ಚರ್ಚೆಮಾಡಿ ಒಂದು ಕ್ರಮವನ್ನು ತೆಗೆದುಕೊಂಡಿದ್ದೇನೆ. ನಮ್ಮ ಸಮಾಜ ಇಲಾಖೆಯ ಅಧಿಕಾರಿಗಳಿಗೆ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಈ ವಿಶೇಷ ಘಟಕ ಯೋಜನೆಯ ಹಣ ಯಾವರೀತಿಯಲ್ಲೂ ಲ್ಯಾಪ್ಸ್ ಆಗಬಾರದು. ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಒಂದು ಅಥವಾ ಎರಡು ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಅದರ ಇಂಪ್ಲಿಮೆಂಟೇಷನ್ ಬಗ್ಗೆ ಗಮನಹರಿಸಬೇಕು, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ರಾಜ್ಯದಾದ್ಯಂತ ಪ್ರವಾಸ ಮಾಡಿ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಆದ್ಯತೆಯನ್ನು ಕೊಡಬೇಕು, ವಿಭಾಗಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರತಕ್ಕ ಜಿಲ್ಲಾಪರಿಷತ್ತುಗಳಲ್ಲಿ ರಿವ್ಯೂ ಮಾಡಿ ವಿಶೇಷ ಘಟಕ ಯೋಜನೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈ ಹಣವನ್ನು ಏನಾದರೂ ಲ್ಯಾಪ್ಸ್ ಮಾಡಿದರೆ ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಯೇ ಇದಕ್ಕೆ ಸಂಪೂರ್ಣವಾಗಿ ಜವಾಬ್ದಾರ ಎನ್ನತಕ್ಕ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಈ ರೀತಿ ಕ್ರಮವನ್ನು ತೆಗೆದುಕೊಂಡ ಮೇಲೆ ಜಿಲ್ಲಾಪರಿಷತ್ತುಗಳಲ್ಲಿ ಚುರುಕಾಗಿ ಕೆಲಸ ನಡೆಯುತ್ತಿದೆ. ದುರ್ಬಲವರ್ಗದವರ ಹಣ ದುರುಪಯೋಗ ಆಗದಂತೆ

ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳು ಕೆಲಸ ಮಾಡುತ್ತಾರೆ ಎನ್ನತಕ್ಕ ಭರವಸೆಯನ್ನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ ತಮ್ಮ ಮುಖಾಂತರ ನಾನು ಹೇಳಬಯಸುತ್ತೇನೆ.

ಇನ್ನು ಮೂರನೆಯ ಹಿಂದುಳಿದ ಆಯೋಗದವರಿಗೆ ಮಾನ್ಯ ಬಸವಲಿಂಗಪ್ಪನವರು ಬಹಳ ಕಟುವಾಗಿ ಮಾತನಾಡಿದ್ದಾರೆ. ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಈ ಮನೆಯ ೩ ಜನ ಹೆಣ್ಣುಮಕ್ಕಳು ಅಂದರೆ ಶ್ರೀಮತಿ ಮನೋರಮ ಮಧ್ವರಾಜ್‌ರವರು, ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಮತ್ತು ಶ್ರೀಮತಿ ಮುಕ್ತರುನ್ನಿಸಾರವರು ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದಕ್ಕಾಗಿ ನಾನು ಅವರನ್ನು ಖಂಡಿತವಾಗಿ ಅಭಿನಂದಿಸುತ್ತೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ

೧೧-೦೦ ಎ. ಎಂ.

ಇಲಾಖೆಯ ಬಗ್ಗೆ ನಾನು ಮೊದಲೇ ಹೇಳಿದಹಾಗೆ ಇದು ೧೯೫೫ನೇ ಇಸವಿಯಲ್ಲಿ ಪ್ರಾರಂಭವಾಯಿತು. ೧೯೫೫ರಿಂದ ೧೯೭೬ರವರೆಗೆ ಕೇವಲ ೩ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿತ್ತು. ೧೯೮೪-೮೫ ರಲ್ಲಿ ೧೮ ಕೋಟಿ ರೂಪಾಯಿ ೧೯೮೫-೮೬ ರಲ್ಲಿ ೨೮ ಕೋಟಿ ರೂ. ಗಳನ್ನು ಮಕ್ಕಳ ಮತ್ತು ಅಂಗವಿಕಲರಿಗೆ ಖರ್ಚುಮಾಡಿತ್ತು. ೧೯೮೫-೮೬ ರಲ್ಲಿ ೨೮ ಕೋಟಿ ರೂಪಾಯಿಗಳನ್ನು ಮಕ್ಕಳ ಮತ್ತು ಅಂಗವಿಕಲರಿಗಾಗಿ ಖರ್ಚುಮಾಡಲಾಯಿತು. ೧೯೮೫-೮೬ ರಲ್ಲಿ ೩೮ ಕೋಟಿ ರೂಪಾಯಿಗಳು, ೧೯೮೬-೮೭ ರಲ್ಲಿ ೬೫ ಕೋಟಿ ರೂಪಾಯಿಗಳು, ೧೯೮೭-೮೮ ರಲ್ಲಿ ೬೫.೩೪ ಕೋಟಿ ರೂಪಾಯಿಗಳು, ಪ್ರಸ್ತುತ ವರ್ಷದಲ್ಲಿ ೮೮.೯೧ ಕೋಟಿ ರೂಪಾಯಿಗಳನ್ನು ಒದಗಿಸಿದೆ. ಅಂದರೆ ಮಹಿಳಾ ಮತ್ತು ಮಕ್ಕಳ, ಹಾಗೂ ಅಂಗವಿಕಲರ ಕಲ್ಯಾಣಕ್ಕಾಗಿ ಎಷ್ಟರಮಟ್ಟಿಗೆ ವಿಸ್ತರಿಸಲಾಗಿದೆ ಎಂಬುದನ್ನು ಗಮನಿಸಿದರೆ ಸುಮಾರು ೧೫೯ ರಷ್ಟು ಹಣವನ್ನು ಒದಗಿಸಿದೆ. ಈ ರೀತಿ ಇಲಾಖೆಯ ಕೆಲಸ ಬೆಳೆದಿದೆ. ವಿಧವೆಯರಿಗೆ ಮಾಸಾಶನವನ್ನು ಕೊಡುತ್ತಿದ್ದೇವೆ. ಪರಿಶಿಷ್ಟ ಜಾತಿ ಮಹಿಳೆಯರಿಗೆ ಕುಶಲ ಕಲೆಗಳಲ್ಲಿ ತರಬೇತಿ ನೀಡುವ ಸಲುವಾಗಿ ೬೦ ಹೊಲಿಗೆ ತರಬೇತಿ ಕೇಂದ್ರಗಳನ್ನು ಮತ್ತು ೭ ತೆಂಗಿನನಾರಿನ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ ಇದರಲ್ಲಿ ೧,೫೮೦ ಹೆಣ್ಣು ಮಕ್ಕಳು ತರಬೇತಿಯನ್ನು ಪಡೆಯುತ್ತಿದ್ದಾರೆ. ಮಾಸಿಕ ೭೫ ರೂಪಾಯಿಗಳನ್ನು ವೇತನವಾಗಿ ಕೊಡಲಾಗುತ್ತಿದೆ. ಗೌರಿಬಿದನೂರಿನಲ್ಲಿ ಒಂದು ಮಹಿಳಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅಲ್ಲಿ ಹೊಲಿಗೆ ತರಬೇತಿಯನ್ನೂ ನೀಡಲಾಗುತ್ತಿದೆ. ಪ್ರತಿ ವರ್ಷ ೧೦೦ ರಿಂದ ೧೫೦ ಹೆಣ್ಣುಮಕ್ಕಳು ಬರುತ್ತಿದ್ದಾರೆ. ಹೆಣ್ಣುಮಕ್ಕಳು ಸಲುವಾಗಿ ಮೆಟ್ರಿಕ್ ಮತ್ತು ಪದವಿ ಪೂರ್ವ ತರಬೇತಿ ಕೇಂದ್ರಗಳನ್ನು ಪ್ರಸಕ್ತ ಸಾಲಿನಲ್ಲಿ ಮುಂದುವರಿಸಲಾಗಿದೆ. ಇದರಲ್ಲಿ ೧೦,೧೭೦ ಹೆಣ್ಣು ಮಕ್ಕಳು ಓದುತ್ತಿದ್ದಾರೆ. ೩ ಹೆಣ್ಣು ಮಕ್ಕಳು ಕಾಲೇಜುಗಳನ್ನು ನಡೆಸುತ್ತಿದ್ದೇವೆ, ಇದರಲ್ಲಿ ೧೦೨ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಹಿಂದುಳಿದ ವರ್ಗದ ಇಲಾಖೆಯ ವತಿಯಿಂದ ೪೦ ಮೆಟ್ರಿಕ್ ಪೂರ್ವ ತರಬೇತಿ ಕೇಂದ್ರಗಳನ್ನು ತೆರೆದಿದ್ದು ೧೮೪೦ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ೨೦ ಕಾಲೇಜುಗಳಲ್ಲಿ ಹೆಣ್ಣುಮಕ್ಕಳು ವ್ಯಾಸಂಗ ಮಾಡುತ್ತಿರುವವರ ಸಲುವಾಗಿ ೯೭೫ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದ್ದೇವೆ. ಈ ರೀತಿಯಾಗಿ ಹೆಣ್ಣುಮಕ್ಕಳ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇನೆ. ಇದರಲ್ಲಿ ಅತಿ ಮುಖ್ಯವಾದದ್ದು ಸಮಗ್ರ ಬಾಲ ವಿಕಾಸ ಯೋಜನೆ. ಸನ್ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದ ಮಕ್ಕಳ ಕಲ್ಯಾಣಕ್ಕಾಗಿ ಇದು ಒಂದು ವರಪ್ರಸಾದವಾಗಿದೆ ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಒಂದು ಸಾವಿರ ಮಕ್ಕಳು ಪ್ರತಿದಿವಸ ಹುಟ್ಟಿದರೆ ಪ್ರತಿದಿವಸ ೧೬೦ ಮಕ್ಕಳು ಸಾಯುತ್ತಿದ್ದಾರೆ. ಇದಕ್ಕೆ ಕಾರಣ ಮುಖ್ಯವಾಗಿ ಪೌಷ್ಟಿಕ ಆಹಾರದ ಕೊರತೆಯಾಗಿರುವುದು ಇದನ್ನು ನಿಯಂತ್ರಿಸುವ ಸಲುವಾಗಿ ವಿಶೇಷ ಘಟಕ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಿಂದಾಗಿ ಡೆತ್‌ರೇಟ್ ೧೬೦ ರಿಂದ ೫೦ಕ್ಕೆ ಇಳಿಸಲು ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಆದರೆ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಕರ್ನಾಟಕ ರಾಜ್ಯವು ಇದರಲ್ಲಿ ಬಹಳ ಮುಂದಿದೆ. ಸಮಗ್ರ ಬಾಲ ವಿಕಾಸ ಯೋಜನೆಯನ್ನು ಜಾರಿಗೆ ತಂದು ೫೦ಕ್ಕೆ ಇಳಿಸಬೇಕೆಂಬ ಗುರಿಯನ್ನು ಇಟ್ಟುಕೊಂಡು ಈಗಾಗಲೇ ಇಲಾಖೆಯು ರಮ್ಮು ತೆಗೆದುಕೊಂಡು ಹೆಲ್ತ್ ಡಿಪಾರ್ಟ್‌ಮೆಂಟ್ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಒಂದು ಕೋ ಆರ್ಡಿನೇಷನ್‌ನಿಂದ ಎಸ್ಟಾಬ್ಲಿಷ್ ಮಾಡಬೇಕೆಂಬ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಆರೋಗ್ಯ ಇಲಾಖೆ, ಮಹಿಳಾ ಇಲಾಖೆಯಿಂದ ಪೌಷ್ಟಿಕ ಆಹಾರವನ್ನು ಕೊಡುವ ಇವೇ ಮೊದಲಾದ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದರಿಂದ ನಮ್ಮ

ರಾಜ್ಯದಲ್ಲಿ ೧೦ ಲಕ್ಷ ಮಕ್ಕಳು ಇದರ ಲಾಭವನ್ನು ಪಡೆಯುತ್ತಿದ್ದಾರೆ. ಇದಲ್ಲದೆ ಸಮಗ್ರ ಬಾಲವಿಕಾಸ ಯೋಜನೆಯನ್ನು ಕೈಗೊಂಡಿದ್ದು ಇದರಲ್ಲಿ ೬೪ ಕೇಂದ್ರದ ಯೋಜನೆಯಾಗಿದ್ದು ೩೦ ರಾಜ್ಯದ ಯೋಜನೆಯಾಗಿದೆ. ಇದರಿಂದ ಪೂರಕ ಪೌಷ್ಟಿಕ ಆಹಾರ, ರೋಗ ನಿರೋಧಕ ಚುಚ್ಚುಮದ್ದು, ಶಾಲಾ ಪೂರ್ವ ತರಬೇತಿ ಈ ಎಲ್ಲ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡಲಾಗುತ್ತಿದೆ. ಪ್ರತಿವರ್ಷ ಕೇಂದ್ರ ಸರ್ಕಾರದವರು ೧೦-೧೨ ಸಮಗ್ರ ಬಾಲವಿಕಾಸ ಯೋಜನೆಗೆ ಮಂಜೂರಾತಿ ನೀಡುತ್ತಿದೆ. ಕಳೆದ ವರ್ಷ ಬಾಲವಿಕಾಸ ಯೋಜನೆಗೆ ಮಂಜೂರು ಮಾಡಿದ್ದು ಮೂರನೇ ಎರಡುಭಾಗ, ರಾಜ್ಯ ಸರ್ಕಾರದ್ದು ಮೂರನೇ ಒಂದುಭಾಗ i.e. adminitrative and training expeuditure is met by the Central Government. The entire project cost is met by the State Govt. ಮೂರನೇ ಎರಡು ಭಾಗ ರಾಜ್ಯ ಸರ್ಕಾರದ್ದು ಇದೆ. ಇಷ್ಟು ಖರ್ಚುಮಾಡಲು ಸಮಗ್ರ ಬಾಲವಿಕಾಸ ಕೇಂದ್ರಗಳನ್ನು ಪ್ರತಿವರ್ಷ ಯಾವ ಯಾವ ಸ್ಥಳಗಳಲ್ಲಿ ವಿಸ್ತರಿಸಬೇಕೆಂದು ಅವರೇ ಹೇಳಿದ್ದಾರೆ. ನಾವು ಅದಕ್ಕೆ ಒಪ್ಪಿದ್ದೇವೆ. ನಮ್ಮ ದೃಷ್ಟಿಯಿಂದ ಕೇಂದ್ರ ಸರ್ಕಾರದ್ದು ೧೪ ಯೋಜನೆಗಳು ಮಂಜೂರಾತಿಯಾಗಿದೆ. ಅದು ಯಾವ ಯಾವ ಸ್ಥಳಗಳಲ್ಲಿ ಎನ್ನುವುದನ್ನು ಗುರುತಿಸಬೇಕಾಗಿದೆ. ನಾವು ಈಗಾಗಲೇ ರೆಕಮೆಂಡೇಷನ್ ಮಾಡಿದ್ದೇವೆ. ಅದು ಬಂದಮೇಲೆ ೧೪ ಭಾಗಗಳಲ್ಲಿ ಸಮಗ್ರ ಬಾಲವಿಕಾಸ ಯೋಜನೆ ಜಾರಿಗೆ ಬರುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಂಗನವಾಡಿಯಲ್ಲಿ ಸಿಡಿಪಿಓ.ಗಳ ಸಂಬಂಧದ ಬಗ್ಗೆ ಕೆಲವು ಘಟನೆಗಳನ್ನು ಕಂಡು ಚೆನ್ನಾಗಿ ಹೇಳಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಂಥ ಪ್ರಕರಣಗಳನ್ನು ನನ್ನ ಗಮನಕ್ಕೆ ತಂದರೆ, ಯಾರೇ ಇರಲಿ ಅವರನ್ನು ಬಲಿ ಹಾಕುತ್ತೇನೆ. ಸಿಡಿಪಿಓಗಳು ಹೆಣ್ಣುಮಕ್ಕಳು ಇರಬೇಕೆಂದು ಹೇಳಿದಿರಿ. ಕೆಲವರು ಡೈರೆಕ್ಟರ್‌ಗಳು ಗಂಡುಮಕ್ಕಳು ಆಗಬೇಕೆಂದು ಹೇಳುತ್ತಾರೆ. ಹೆಣ್ಣು ಗಂಡು ಎಂಬ ವ್ಯತ್ಯಾಸ ಬೇಡ. ಕೆಲಸ ತೆಗೆದುಕೊಳ್ಳುವುದು ಮುಖ್ಯ. ಆದರೂ ತಾವು ಹೇಳಿದ ಹಾಗೆ ಹೆಚ್ಚು ಮಕ್ಕಳು ಸಿಡಿಪಿಓ.ಗಳಾಗಿ ಕೆಲಸ ಮಾಡುವುದನ್ನು ಒಪ್ಪುತ್ತೇನೆ ಮತ್ತು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ. ವಿಶೇಷ ಪೌಷ್ಟಿಕ ಆಹಾರದ ಬಗ್ಗೆ ಲೋಪ ದೋಷ ಏನಿದೆ ಅದನ್ನು ಒಪ್ಪಿದ್ದೇನೆ. ಅಂಗನವಾಡಿಯಾಗಿ ಕನ್‌ವರ್ಟ್ ಮಾಡುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ ಮತ್ತು ಆ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಕೂಡ ಚರ್ಚೆ ಮಾಡಿದ್ದೇನೆ. ಹಣ ದುರುಪಯೋಗವಾಗಿದೆ, ಅವ್ಯವಹಾರ ಆಗಿದೆ ಎಂಬ ಬಗ್ಗೆ ಅನೇಕ ಸಾರಿ ಚರ್ಚೆ ಮಾಡಿದ್ದೇನೆ. ಆಗ್ರೋದವರು ಕೊಡತಕ್ಕ ಆಹಾರದಲ್ಲಿ ಲೋಪದೋಷ ಇದೆ ಎಂದು ಕಟುವಾಗಿ ಟೀಕಿಸಿದ್ದೇವೆ ಮತ್ತು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಂಗನವಾಡಿಗಳನ್ನು ಪ್ರೋತ್ಸಾಹಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಧವಾ ವೇತನ ಹೆಚ್ಚಿಸುವುದಕ್ಕೆ ಹೇಳಿದ್ದೀರಿ. ಅದನ್ನು ಪರಿಶೀಲನೆ ಮಾಡುತ್ತೇನೆ. ಆ ಬಗ್ಗೆ ನಮಗೆ ಅನುಕಂಪ ಇದೆ. ಬೆಳಗಾಂನಲ್ಲಿ ನಡೆದ ಬಾಲ್ಯ ವಿವಾಹದ ಬಗ್ಗೆ ಹೇಳಿದ್ದೀರಿ. ಆ ಬಗ್ಗೆ ಕ್ರಮ ತೆಗೆದುಕೊಂಡು ಕೆಲವರನ್ನು ಅರೆಸ್ಟ್ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್. — ಲಗ್ನಕ್ಕೆ ಹಾಜರಾದವರನ್ನು ಅರೆಸ್ಟ್ ಮಾಡಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ — ತಂದೆ ತಾಯಿಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್ ಬಗ್ಗೆ ಹೇಳಿದ್ದೀರಿ. ಸರ್ಕಾರ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್‌ಗಳನ್ನು ನಡೆಸುವುದಿಲ್ಲ. ವಾಲಂಟರಿ ಆರ್ಗನೈಸೇಷನ್‌ನವರು ನಡೆಸಬೇಕು. ಅದಕ್ಕೆ ಕೇಂದ್ರ ಸರ್ಕಾರ ೭೫ ಪರ್ಸೆಂಟ್, ರಾಜ್ಯ ಸರ್ಕಾರ $12\frac{1}{2}$ ಪರ್ಸೆಂಟ್ ಮತ್ತು ಉಳಿದ $12\frac{1}{2}$ ಪರ್ಸೆಂಟ್ ಹಣವನ್ನು ವಾಲಂಟರಿ ಆರ್ಗನೈಸೇಷನ್‌ರವರು ಹಾಕಿಕೊಳ್ಳಬೇಕು. ನಿವೇಶನಕ್ಕೆ ಕೇಂದ್ರ ಸರ್ಕಾರ ಹಣ ಕೊಡುತ್ತದೆ. ಎಷ್ಟೇ ಪ್ರೊಪೋಸಲ್ ತಂದರೂ ಅದನ್ನು ಪ್ರೊಸೆಸ್ ಮಾಡಿ ಕೇಂದ್ರ ಸರ್ಕಾರಕ್ಕೆ ರೆಕಮೆಂಡ್ ಮಾಡುವುದಕ್ಕೆ ತಯಾರಿದ್ದೇವೆ. ತಮ್ಮ ಮುಖಾಂತರ ಸದಸ್ಯರಿಗೆ ಮತ್ತು ಸಾರ್ವಜನಿಕರಿಗೆ ಹೇಳುತ್ತೇನೆ, ವರ್ಕಿಂಗ್ ವಿಮೆನ್ ಹಾಸ್ಟೆಲ್ ನಡೆಸುತ್ತೇವೆಂದು ನಿವೇಶನ ಇಟ್ಟುಕೊಂಡು ಯಾರೇ ಮುಂದೆ ಬಂದರೂ ಮಂಜೂರು ಮಾಡುವುದಕ್ಕೆ ತಯಾರಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ತಮ್ಮದೇ ಆದ ಶೈಲಿಯಲ್ಲಿ ಬಹಳ ಚೆನ್ನಾಗಿ ಮಾತನಾಡಿ ಸಭೆಯ ಗಮನವನ್ನು ಸೆಳೆದರು. ಅವರಿಗೆ ಇಲಾಖೆಯ ಬಗ್ಗೆ ಅಪಾರವಾದ ಕಳಕಳಿ ಇದೆ, ಅಭಿಮಾನ ಇದೆ. ಅವರ

ನಾನು ಸಮಾಜ ಕಲ್ಯಾಣ ಮಂತ್ರಿಯಾಗಿ ಅಭಿನಂದನೆ ಸಲ್ಲಿಸಬೇಕು. ಅವರು ನಿರ್ದೇಶಕರ ಪ್ರವಾಸದ ಬಗ್ಗೆ ಮಾತನಾಡಿದ್ದಾರೆ. ಅದಕ್ಕೆ ಈಗಾಗಲೇ ಉತ್ತರಿಸಿದ್ದೇನೆ. ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ ಇಲಾಖೆ ಕಡೆಗಣ್ಣಿನಿಂದ ನೋಡುತ್ತಿದೆ ಎಂದು ಹೇಳಿದರು. ಸ್ವಯಂ ಸೇವಾ ಸಂಸ್ಥೆಗಳ ಸಮ್ಮೇಳನ ಗಾಂಧಿಭವನದಲ್ಲಿ ನಡೆಯಿತು. ನಾನು ಆ ಸಭೆಯಲ್ಲಿ ಭಾಗವಹಿಸಿದ್ದೆ. ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಬಹಳ ಗುರುತರವಾದದ್ದು. ಶಿಕ್ಷಣ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳಿಗೆ ಬೆಂಬಲ ಕೊಡಬೇಕಾದುದು ನಮ್ಮ ಕರ್ತವ್ಯ. ಆ ಬಗ್ಗೆ ಇಲಾಖೆಯ ನಿರ್ದೇಶಕರಿಗೆ ಹೇಳಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಾಗಲಿ ಸಮಾಜ ಕಲ್ಯಾಣ ಇಲಾಖೆಯಾಗಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಾಯವಿಲ್ಲದೆ ನಡೆಯುವ ಹಾಗೆ ಇಲ್ಲ. ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಎಷ್ಟು ಗುರುತರವಾದುದು ಎಂಬುದನ್ನು ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಸ್ವಯಂ ಸೇವಾ ಸಂಸ್ಥೆಗಳವರು ಮನೆ ಮಠ ಬಿಟ್ಟು ಬಡವರ, ಅಂಗವಿಕಲರ, ಹಿಂದುಳಿದವರ ಕಲ್ಯಾಣಕ್ಕೋಸ್ಕರ ದುಡಿಯುತಕ್ಕವರು. ಅವರು ಬಂದ ತಕ್ಷಣ ಕುರ್ಚಿ ಕೊಟ್ಟು ಕೂರಿಸಿ ಗೌರವದಿಂದ ಕಾಣಬೇಕು ಮತ್ತು ಅವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಹೇಳಿದ್ದೇನೆ. ಯಾವುದಾದರೂ ಸಂಸ್ಥೆಗಳಲ್ಲಿ ಅಲ್ಪ ಸ್ವಲ್ಪ ಲೋಪದೋಷ ವಿದ್ದರೆ ಅದನ್ನೇ ದೊಡ್ಡದು ಮಾಡಿ ಬಲಿ ಹಾಕತಕ್ಕ ಪ್ರಯತ್ನ ಮಾಡುವುದು ಸರಿಯಲ್ಲ ಎಂದು ಎಚ್ಚರಿಕೆ ಕೊಟ್ಟಿದ್ದೇನೆ. ಗ್ರ್ಯಾಂಟ್ ಕೊಡುವುದನ್ನು ನಿಲ್ಲಿಸಿದ್ದೀರಿ ಎಂದು ಹೇಳಿದ್ದಾರೆ, ನಿಲ್ಲಿಸಿದ್ದನ್ನು ಈಗ ಕೊಟ್ಟಿದ್ದೇವೆಂದು ಹೇಳುತ್ತೇನೆ, ಗ್ರ್ಯಾಂಟನ್ನು ಸಮಯಕ್ಕೆ ಸರಿಯಾಗಿ ಕೊಡಬೇಕು, ಮಾರ್ಚ್ ೩೧ಕ್ಕೆ ಕೊಡುತ್ತಿದ್ದಾರೆ, ಹೀಗಾಗಿ ಸಾಲ ತಂದು ನಡೆಸುವುದು ಕಷ್ಟವಾಗುತ್ತದೆನ್ನುವ ಮಾತನ್ನು ಹೇಳಿದ್ದಾರೆ, ಅದು ಒಳ್ಳೆಯ ಸಲಹೆ. ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಗ್ರ್ಯಾಂಟ್ ಇನ್ ಏಡ್ ಸಂಸ್ಥೆಗಳು ಏನಿವೆ ಅವಕ್ಕೆ ಎಷ್ಟು ಸಹಾಯ ಸಹಕಾರ ನೀಡಿ ಪ್ರೋತ್ಸಾಹಿಸಬೇಕೋ ಅಷ್ಟನ್ನೂ ಮಾಡುತ್ತೇವೆ ಸ್ವಯಂ ಸೇವಾ ಸಂಸ್ಥೆಗಳು ನಮ್ಮ ಇಲಾಖೆಯ ವರಪ್ರಸಾದ ಎಂದು ತಿಳಿದುಕೊಂಡಿದ್ದೇನೆ ಅವುಗಳನ್ನು ನಾಶ ಮಾಡತಕ್ಕ ಮನೋಭಾವನೆ ನನಗಾಗಲಿ, ಇಲಾಖೆಯವರಿಗಾಗಲಿ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಎಸ್.ಎನ್.ಪಿ. ಪ್ರಾಜೆಕ್ಟನ್ನು ವೈಂಡಪ್ ಮಾಡಿ ಅಂಗನವಾಡಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ಸ್ ಬಗ್ಗೆ ಅದರಲ್ಲೂ ಬೆಂಗಳೂರಿನಲ್ಲಿ ಇರತಕ್ಕ ಹಾಸ್ಟೆಲ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ಒಂದು ಸೊಸೈಟಿಯವರು ನಡೆಸುತ್ತಿದ್ದರು. ೧೯೮೩ರಲ್ಲಿ ೩೫ ಲಕ್ಷ ರೂಪಾಯಿ ಹಣವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನೀಡಿವೆ. ಏಳು ಅಂತಸ್ತಿನ ಬಿಲ್ಡಿಂಗನ್ನು ಮಿಲ್ಲರ್ ಟ್ಯಾಂಕ್‌ನಲ್ಲಿ ಕಟ್ಟಿದ್ದಾರೆ. ೪೦೦ ಹೆಣ್ಣುಮಕ್ಕಳಿಗೆ ಅಲ್ಲಿ ಅವಕಾಶ ಮಾಡಿ ಕೊಟ್ಟಿದೆ. ಅಲ್ಲಿನ ಕಟ್ಟಡ ನಾದುರಸ್ತಿಯಾಗಿದ್ದು ಎಲೆಕ್ಟ್ರಿಸಿಟಿ, ಡ್ರೈನೇಜ್ ಸರಿಯಿರಲಿಲ್ಲ. ನಾನು ಬಂದಮೇಲೆ, ಇನ್‌ಸ್ಪೆಕ್ಷನ್ ಮಾಡಿದಮೇಲೆ, ಪಿ ಡಬ್ಲ್ಯೂ. ಡಿ. ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರು ಎರಡು ಲಕ್ಷ ರೂಪಾಯಿನ ಡ್ರೈನೇಜ್ ಕೆಲಸವನ್ನು ಅಲ್ಲಿ ತೆಗೆದುಕೊಂಡಿದ್ದಾರೆ. ಕಾರ್ಪೊರೇಷನ್‌ನವರೂ ಕ್ರಮ ತೆಗೆದುಕೊಂಡಿದ್ದಾರೆ, ಎಲೆಕ್ಟ್ರಿಸಿಟಿ ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳಲು ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಅದನ್ನು ಸರಿಪಡಿಸಿ ವಾಲಂಟರಿ ಆರ್ಗನೈಸೇಷನ್‌ಗೆ ಕೊಡುವ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಶ್ರೀಮತಿ ಲೀಲಾದೇವಿ ಪ್ರಸಾದ್ ಅವರಿಗೆ ಹೇಳುತ್ತೇನೆ. ಅದೇರೀತಿ ಮೂರನೇ ಹಿಂದುಳಿದ ಆಯೋಗದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕೊನೆಯದಾಗಿ ಅದರ ಬಗ್ಗೆ ಹೇಳುತ್ತೇನೆ. ಮುಕ್ತರುನ್ನೀಸಾ ಬೇಗಂ ಅವರು ಹೆಣ್ಣುಮಕ್ಕಳ ಇಲಾಖೆಯಲ್ಲಿ ಸೂಪರ್‌ವೈಸರ್ಸ್ ಇದ್ದಾರೆ, ಅವರಿಗೆ ಪ್ರೊಮೋಷನ್ ಕೊಟ್ಟು ಸಿ.ಡಿ.ಪಿ.ಒ. ಮಾಡಬೇಕು, ಸಿ.ಡಿ.ಪಿ.ಒ. ಆಗಿರುವವರನ್ನು ಅಸಿಸ್ಟೆಂಟ್ ಡೈರೆಕ್ಟರನ್ನಾಗಿ ಮಾಡಬೇಕು, ಪ್ರೊಮೋಷನ್ ಕೊಡುವುದರಿಂದ ಇನ್‌ಸೆಂಟೀವ್ ಕೊಡುವುದರಿಂದ ಅವರಿಗೆ ಆಸಕ್ತಿ ಬರುತ್ತದೆ ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಬದಲಾವಣೆ ಮಾಡುವ ಸಂದರ್ಭ ಬಂದರೆ ಅದನ್ನು ಮಾಡಿ ಆ ಇಲಾಖೆಯ ಅಧಿಕಾರಿಗಳಿಗೆ ಉತ್ತೇಜನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ವಾಲಂಟರಿ ಆರ್ಗನೈಸೇಷನ್ಸ್‌ಗೆ ಟ್ರೈಮಿಲಿ ಗ್ರ್ಯಾಂಟ್ ಕೊಡುವ ಬಗ್ಗೆ ಹೇಳಿದ್ದಾರೆ. ಸ್ಟೆಪ್ ಯೋಜನೆ ಬಗ್ಗೆ ಹೇಳಿದ್ದಾರೆ. ಅತಿ ಮುಖ್ಯವಾದ ಕಾರ್ಯಕ್ರಮ ಅದು. ನಮ್ಮ ಇಲಾಖೆಯವರಿಗೆ ತಿಳಿಸಿ ಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕೆ ೯೦ ಪರ್ಸೆಂಟ್ ಗ್ರ್ಯಾಂಟ್ ಭಾರತ ಸರ್ಕಾರದಿಂದ ದೊರಕುತ್ತದೆ. ಅದಷ್ಟು ಜನಾನುರಾಗಿಯಾದ ಈ ಕಾರ್ಯಕ್ರಮದ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮಧುಗಿರಿಯಲ್ಲಿ ಮಕ್ಕಳು ಸತ್ತಿರುವ ಬಗ್ಗೆ ನಮ್ಮ ಗಮನ ಸೆಳೆದಿದ್ದಾರೆ. ಅದರ ಬಗ್ಗೆ ಆರೋಗ್ಯ ಇಲಾಖೆಯವರು ಕ್ರಮ ತೆಗೆದುಕೊಂಡಿದ್ದಾರೆ. ನಾವು ಸಂಬಂಧಪಟ್ಟ ಸಿ.ಡಿ.ಪಿ.ಓ. ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಘಟನೆ ನಡೆದಿರುವುದು ಅನ್ಯಾಯ. ಮನೋರಮ ಮಧ್ವರಾಜ್ ಅವರು ಮತ್ತು ಮರುಕ್ತರುನ್ನೀಸಾ ಬೇಗಂ ಅವರು ಈ ಬಗ್ಗೆ ಗಮನ ಸೆಳೆದಿದ್ದಾರೆ. ಮುಕ್ತರುನ್ನೀಸಾ ಬೇಗಂ ಅವರು ಮಹಿಳಾ ಅಭಿವೃದ್ಧಿ ನಿಗಮವನ್ನು ಮಾಡಿದ್ದೀರಿ, ಅದಕ್ಕಾಗಿ ಅಭಿನಂದನೆಗಳು, ಅದೇರೀತಿ ಅಂಗವಿಕಲರ ನಿರ್ದೇಶನಾಲಯ ವನ್ನು ಆದಷ್ಟು ಬೇಗ ಮಾಡಬೇಕು ಎಂದು ಹೇಳಿದ್ದಾರೆ. ಈ ವರ್ಷ ಅದನ್ನು ಮಾಡಿದ್ದೇವೆ. ಅದಕ್ಕಾಗಿ ಬಜೆಟ್‌ನಲ್ಲಿ ೨೫ ಲಕ್ಷ ರೂಪಾಯಿ ಹಣವನ್ನು ಕೊಡುತ್ತಿದ್ದೇವೆ. ಸಚಿವಸಂಪುಟ ಅದಕ್ಕೆ ಒಪ್ಪಿದೆ. ಅದರ ಬಗ್ಗೆ ಆಜ್ಞೆಯೂ ಹೊರಟಿದೆ. ಅಂಗವಿಕಲರ ನಿರ್ದೇಶನಾಲಯ ವನ್ನು ಆದಷ್ಟು ಬೇಗ ಅಸ್ತಿತ್ವಕ್ಕೆ ತರುತ್ತೇವೆ. ಮಹಿಳಾ ಅಭಿವೃದ್ಧಿ ನಿಗಮಕ್ಕೆ ಕೇಂದ್ರ ಸರ್ಕಾರ ೫೦ ಪರ್ಸೆಂಟ್, ರಾಜ್ಯ ಸರ್ಕಾರ ೫೦ ಪರ್ಸೆಂಟ್ ಹಣವನ್ನು ಕೊಡುತ್ತದೆ. ಶ್ರೀಮತಿ ಪದ್ಮ ಶ್ರೀನಿವಾಸನ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಕೇಂದ್ರ ಸರ್ಕಾರ ನಾಮಿನೇಟ್ ಮಾಡುವುದಕ್ಕೆ ಇಬ್ಬರ ಹೆಸರನ್ನು ಕಳುಹಿಸಿಕೊಡಬೇಕು. ಅವರಿನ್ನೂ ಕಳುಹಿಸಿಲ್ಲ. ಅದು ಬಂದ ತಕ್ಷಣ, ಫುಲ್‌ಬೋರ್ಡ್ ಆದತಕ್ಷಣ ಕೆಲಸ ಶುರು ಆಗುತ್ತದೆ. ಅದಕ್ಕೆ ೧೦ ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಗ್ರಾಂಟ್–ಇನ್–ಏಡ್ ಸ್ಕೀಮುಗಳನ್ನು ಮಹಿಳಾ ಅಭಿವೃದ್ಧಿ ನಿಗಮಕ್ಕೆ ಟ್ರಾನ್ಸ್‌ಫರ್ ಮಾಡಬೇಕೆಂದು ಮುಕ್ತರುನ್ನೀಸಾ ಬೇಗಂ ಅವರು, ಮನೋರಮ ಮಧ್ವರಾಜ್ ಅವರು ಮತ್ತು ಲೀಲಾದೇವಿ ಪ್ರಸಾದ್ ಅವರು ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಬಯಸು ತ್ತೇನೆ. ಪಂಪಾಪತಿಯವರು ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗಳನ್ನು ಸರ್ಕಾರವೇ ನಡೆಸಬೇಕೆಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರ ನಡೆಸುವುದಿಲ್ಲ. ಸ್ವಯಂ ಸೇವಾ ಸಂಸ್ಥೆಗಳು ನಡೆಸಬೇಕು. ಅಂಗನವಾಡಿ ಕಾರ್ಯಕರ್ತರಿಗೆ ಗೌರವಧನ ಹೆಚ್ಚು ಮಾಡಿ ಸರ್ಕಾರಿ ನೌಕರರಂತೆ ಅವರನ್ನು ಟ್ರೀಟ್ ಮಾಡಬೇಕೆಂದು ಹೇಳಿದ್ದಾರೆ, ಅದು ಐ.ಸಿ.ಡಿ.ಎಸ್. ಕಾರ್ಯಕ್ರಮದಲ್ಲಿ ಬರುತ್ತದೆ. ಅದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯೋಜನೆ. ಅಂಗನವಾಡಿ ಕಾರ್ಯಕರ್ತೆಯರಾಗಿ ಆ ಗ್ರಾಮದ ವರನ್ನೇ ತೆಗೆದುಕೊಳ್ಳುತ್ತೇವೆ. ಏಕೆಂದರೆ ನಮ್ಮ ಗ್ರಾಮದ ಮಕ್ಕಳು. ಅವರಿಗೆ ಚಿಕಿತ್ಸೆ ಮಾಡಬೇಕು. ಚುಚ್ಚುಮದ್ದು ಕೊಡಬೇಕು, ಪೌಷ್ಟಿಕ ಆಹಾರ ಕೊಡಬೇಕು, ಶಾಲಾ ಪೂರ್ವ ತರಬೇತಿ ಕೊಡಬೇಕು ಎಂಬ ಅಭಿಮಾನ ಅವರಿಗೆ ಇರುತ್ತದೆ. ಅವರ ಮನೆಯಲ್ಲೇ ಊಟ ಮಾಡಿ ಅವರ ಊರಿನ ಯೋಗ ಕ್ಷೇಮವನ್ನು ಮಾಡತಕ್ಕ ಕಾರ್ಯಕರ್ತರನ್ನು ಸರ್ಕಾರಿ ನೌಕರರಂತೆ ಟ್ರೀಟ್ ಮಾಡಬಾರದು. ಅವರನ್ನು ಆನರರಿಯಾಗಿ ಟ್ರೀಟ್ ಮಾಡಬೇಕೆಂದು ಸರ್ಕಾರದ ನೀತಿ ಇದೆ. ಸರ್ಕಾರಿ ನೌಕರರಂತೆ ಟ್ರೀಟ್ ಮಾಡುವುದು ನಿಯಮಕ್ಕೆ ವಿರುದ್ಧವಾದುದು. ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರದ ನೀತಿ ಇದು. ಆನರೇರಿಯಂ ಜಾಸ್ತಿ ಮಾಡುವ ಬಗ್ಗೆ ಹೇಳಿದ್ದಾರೆ. ೨೫ ರೂಪಾಯಿ ಜಾಸ್ತಿ ಈಗಾಗಲೇ ಮಾಡಿದ್ದೇವೆ. ಇನ್ನೂ ೫೦ ರೂಪಾಯಿ ಜಾಸ್ತಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಇದನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ದಾವಣಗೆರೆಯಲ್ಲಿ ಸರ್ಟಿಫೈಡ್ ಸ್ಕೂಲ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದೇರೀತಿ ಪ್ರತಿ ತಾಲ್ಲೂಕಿನಲ್ಲಿ ಮಾಡಬೇಕೆಂದು ಹೇಳಿದ್ದಾರೆ. ತಂದೆತಾಯಿಗಳಿಂದ ದೂರವಾದ ಮಕ್ಕಳು, ಅನಾಥ ಮಕ್ಕಳು ಮತ್ತು ಕೋರ್ಟ್ ವ್ಯಾಪ್ತಿಗೆ ಒಳಪಟ್ಟ ಮಕ್ಕಳನ್ನು ರಿಮ್ಯಾಂಡ್ ಹೋಮಿನಲ್ಲಿ ಇಟ್ಟಿರುತ್ತಾರೆ. ಆ ಮಕ್ಕಳು ಸರ್ಟಿಫೈಡ್ ಸ್ಕೂಲಿಗೆ ಬರುತ್ತಾರೆ.

ಈಗ ರಾಜ್ಯದೊಳಗೆ ಇಂತಹ ೧೮ ಸರ್ಟಿಫೈಡ್ ಸ್ಕೂಲುಗಳು ಇವೆ. ಈ ಸ್ಕೂಲುಗಳು ಇರುವುದು ಸರ್ಟಿಫೈಡ್ ಮಕ್ಕಳಿಗೋಸ್ಕರ ಇದನ್ನು ಎಲ್ಲ ಮಕ್ಕಳಿಗೂ ಅಳವಡಿಸುವುದಕ್ಕಾಗುವುದಿಲ್ಲ. ಒಳ್ಳೆಯ ಶಿಕ್ಷಣ, ಅವರಿಗೆ ಒಳ್ಳೆಯ ಊಟ ಕೊಡುವಂತಹ ವ್ಯವಸ್ಥೆ ಮಾಡಿದ್ದೇವೆ. ಅದೇ ರೀತಿ ವೃತ್ತಿಪರ ತರಬೇತಿ ಯನ್ನು ಕೊಡತಕ್ಕಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ ಶ್ರೀಮಾನ್ ವೆಂಕಟರಾಮಯ್ಯನವರು ವಿದ್ಯಾರ್ಥಿನಿಲಯಗಳು ಪ್ರತಿ ಹೈಸ್ಕೂಲಿಗೊಂದರಂತೆ ಇರಬೇಕು ಅದೇ ರೀತಿ ಪ್ರತಿ ಮಂಡಲ ಕ್ಕೊಂದು ವಿದ್ಯಾರ್ಥಿ ನಿಲಯ ಇರಬೇಕೆಂದು ಹೇಳಿದ್ದಾರೆ. ಅದೇ ರೀತಿ ಅಂಗನವಾಡಿಗಳನ್ನು ಕೂಡ ಮಾಡಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಅದೇ ರೀತಿ ಹರಿಜನ–ಗಿರಿಜನರ ಬಗ್ಗೆ ನಡೆಯುತ್ತಿರು ವಂತಹ ದೌರ್ಜನ್ಯದ ಬಗ್ಗೆಯೂ ಹೇಳಿದ್ದಾರೆ. ಒಂದು ಕೇಸ್ ಕೂಡ ಕನ್ವಿಕ್ಟ್ ಆಗಲಿಲ್ಲ ಎಷ್ಟು ಕೇಸುಗಳನ್ನು ಹಾಕಲಾಗಿದೆ ಎಂಬುದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ದೌರ್ಜನ್ಯದ ಬಗ್ಗೆ ಹೇಳುವುದಾದರೆ, ಈಗ ಸಂವಿಧಾನದ ೧೭ನೇ ಕಲಮಿನ ಪ್ರಕಾರ ಅಸ್ಪೃಶ್ಯತೆ ಕೂಡ ಒಂದ್ಯ

ಅಪರಾಧ. ಇದನ್ನು ಯಾರು ಆಚರಣೆ ಮಾಡುತ್ತಾರೆ, ಅವರು ಶಿಕ್ಷಾರ್ಹರು ಎಂಬುದಾಗಿ ಕರೆಯುತ್ತೇವೆ. ಇಂತಹವರಿಗೆ ದಂಡವನ್ನು ಹಾಕುತ್ತೇವೆ. ಇದರ ಬಗ್ಗೆಯೇ ಅನ್‌ಟಚಬಿಲಿಟಿ ಆಕ್ಟ್ ಇದೆ. ಅದೇ ರೀತಿ ಪಿ. ಸಿ. ಆರ್. ಆಕ್ಟ್ ಕೂಡ ಇದೆ. ಆದರೂ ಸಹ ಕೊನೆಯ ಪಕ್ಷ ಈ ಸಮಾಜದಲ್ಲಿ ಕೆಲವು ಭಾಗದಲ್ಲಿ ಈ ರೀತಿಯ ಕೃತ್ಯಗಳು ನಡೆಯುತ್ತಿವೆ. ಇದನ್ನು ಹೋಗಲಾಡಿಸಲು ಸರ್ಕಾರ ಹಾಕಿಕೊಂಡಿರುವಂತಹ ಕಾರ್ಯಕ್ರಮ ಅಂದರೆ ಅಂತರ್‌ಜಾತಿಯ ವಿವಾಹ. ದೌರ್ಜನ್ಯಕ್ಕೆ ಒಳಗಾದವರಿಗೆ ಧನ ಸಹಾಯ ಮಾಡತಕ್ಕಂತಹದ್ದು. ಅಂತರ್‌ಜಾತಿಯ ವಿವಾಹ ಮಾಡಿಕೊಂಡವರಿಗೆ ೫ ಸಾವಿರ ರೂಪಾಯಿಗಳನ್ನು ಕೊಡಲಾಗುತ್ತಿದ್ದು ಈ ದಿಸೆಯಲ್ಲಿ ೫೪೫ ಕುಟುಂಬಗಳಿಗೆ ಸಹಾಯವನ್ನು ಒದಗಿಸಲಾಗಿದೆ. ದೌರ್ಜನ್ಯಕ್ಕೆ ಒಳಗಾದವರಿಗೆ ಇದುವರೆವಿಗೂ ೧ ಸಾವಿರದಿಂದ ೫ ಸಾವಿರ ರೂಪಾಯಿಗಳ ವರೆಗೂ ಪರಿಹಾರವನ್ನು ಕೊಡಲಾಗುತ್ತಿತ್ತು. ಈಗ ಅದನ್ನು ೧೦ ಸಾವಿರ ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದೇವೆ. ದೌರ್ಜನ್ಯದ ಪ್ರಕರಣಗಳಲ್ಲಿ ಕನ್ವಿಕ್ಟ್ ಆದ ಕೇಸುಗಳ ಬಗ್ಗೆ ನಮ್ಮ ಗಮನವನ್ನು ಮಾನ್ಯ ವೆಂಕಟರಾಮಯ್ಯನವರು ಏನು ಸೆಳೆದಿದ್ದಾರೆ, ಅದರ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಟವಾಕ್ಕಿ ರತ್ನಾಕರ್.—ಅಧ್ಯಕ್ಷರೇ, ದೌರ್ಜನ್ಯಕ್ಕೆ ಒಳಗಾದವರಿಗೆ ೧೦ ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಯಾವ ಸ್ವರೂಪದ ದೌರ್ಜನ್ಯಗಳು ? ಯಾವ ರೀತಿಯ ದೌರ್ಜನ್ಯಕ್ಕೆ ಎಷ್ಟೆಷ್ಟು ಪರಿಹಾರ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು,

ಶ್ರೀ ಜಿ. ಬಸವಣ್ಣಪ್ಪ.—ದೌರ್ಜನ್ಯ ಅಂದರೆ, ಕೊಲೆ, ಭಯವನ್ನುಂಟುಮಾಡುವುದು, ಮಾನಭಂಗ, ಬೆಂಕಿ ಪ್ರಕರಣ ಮತ್ತಿತರೆ ದೌರ್ಜನ್ಯಗಳು. ಇವುಗಳನ್ನು ದೌರ್ಜನ್ಯವೆಂದು ಹೇಳುತ್ತಾರೆ. ೧೯೮೪ರಲ್ಲಿ ೧೭೪ ದೌರ್ಜನ್ಯಗಳ ನಡೆದಿವೆ. ಅದೇ ರೀತಿ ೧೯೮೫ರಲ್ಲಿ ೨೫೫ ದೌರ್ಜನ್ಯ ಪ್ರಕರಣಗಳು ನಡೆದಿವೆ. ೧೯೮೬ರಲ್ಲಿ ೨೨೯ ದೌರ್ಜನ್ಯ ಪ್ರಕರಣಗಳು ನಡೆದಿವೆ. ೧೯೮೭ರಲ್ಲಿ ೨೬೬ ದೌರ್ಜನ್ಯಗಳು ನಡೆದಿವೆ. ೧೯೮೮ರಲ್ಲಿ ಇವತ್ತಿನವರೆಗೂ ೮೯ ದೌರ್ಜನ್ಯ ಪ್ರಕರಣಗಳು ನಡೆದಿವೆ. ಇದರಲ್ಲಿ ಕನ್ವಿಕ್ಟ್ ಆದಂತಹವುಗಳು ಎಷ್ಟು ಎಂದರೆ, ೧೯೮೪ರಲ್ಲಿ ೪ ಕೇಸುಗಳು ಕನ್ವಿಕ್ಟ್ ಆಗಿವೆ. ಮತ್ತೆ ೧೯ ಬೆಂಕಿ ಪ್ರಕರಣಗಳು ನಡೆದಿವೆ.

ಶ್ರೀ ಪಟವಾಕ್ಕಿ ರತ್ನಾಕರ್.—ದೌರ್ಜನ್ಯ ಅಂದರೆ ಏನು ? ಬೆಂಕಿ ಪ್ರಕರಣಗಳು ಎಂದು ಹೇಳಿದ್ದಾರೆ. ಆ ರೀತಿ ಹೇಳಿದರೆ ಏನೆಂಬುದನ್ನು ತಿಳಿಸಬೇಕು ?

ಅಧ್ಯಕ್ಷರು.—ಈಗ ತಾವು ಮಧ್ಯೆ ಪ್ರವೇಶಮಾಡಬಾರದು. ನಿಮಗೆ ನಂತರ ಅವಕಾಶ ನೀಡಲಾಗುವುದು. ಈಗ ದಯಮಾಡಿ ಕುಳಿತುಕೊಳ್ಳಿ. ಮಂತ್ರಿಗಳ ಉತ್ತರ ಆದಮೇಲೆ ವಿವರಣೆಯನ್ನು ಕೇಳಿ. ಈಗ ಬೇಡ,

ಶ್ರೀ ಪಟವಾಕ್ಕಿ ರತ್ನಾಕರ್.—ಇದು ಮೂಲಭೂತವಾದುದು. ವಿಷಯ ಬಂದಾಗ ಕೇಳಿದರೆ ಅದಕ್ಕೆ ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳುವುದಕ್ಕೆ ಸಹಾಯಕವಾಗುತ್ತದೆ.

ಅಧ್ಯಕ್ಷರು.—ಈಗ ಬೇಡ ಆ ಮೇಲೆ ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಬಸವಣ್ಣಪ್ಪ.—ಅಪರಾಧಿಗಳ ಬಗ್ಗೆ ಕೈಗೊಂಡಂತಹ ಕ್ರಮಗಳೇನು ಎಂದಾಗಿ ಕೂಡ ಕೇಳಿದ್ದಾರೆ. ಬೆಂಡಿಗೇರಿ ಪ್ರಕರಣ ಏನು ನಡೆಯಿತು, ಅದರ ಬಗ್ಗೆ ಈ ಮನೆಯಲ್ಲೇ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ಪುನಃ ನಾನು ಮಾತನಾಡಬೇಕಾಗಿಲ್ಲ. ಅದರ ಬಗ್ಗೆ ಸರಿಯಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ರಾಯಚೂರು ಜಿಲ್ಲೆಯ ಗಿಣಗೇರ, ಮೆದಕಿನಾಳ್, ನೆಲಸೋಗಿ ಅದೇ ರೀತಿ ಗುಲ್ಬರ್ಗ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಕುಮ್ಮಣಸಿರಸಗಿ, ಬಿದರಹಳ್ಳಿ, ಈ ಗ್ರಾಮಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಗೂ ದೌರ್ಜನ್ಯ ಪ್ರಕರಣಗಳು ನಡೆದಿದ್ದು, ಇದರ ಬಗ್ಗೆ ಸಿ. ಆರ್. ಇ. ಸೆಲ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ, ಆ ಗ್ರಾಮಗಳಿಗೆ ನಾನೂ ಕೂಡ ಸ್ವತಃ ಭೇಟಿ ಕೊಟ್ಟಿದ್ದೇನೆ. ಅವರಿಗೆ ಏನೇನು ಸಹಾಯ ಮಾಡಬೇಕೋ ಅದನ್ನು ನಮ್ಮ ಇಲಾಖೆಯ ಅಧಿಕಾರಿಗಳು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು ೪೦ ವರ್ಷಗಳಾದರೂ ಈ ರೀತಿಯ ಘಟನೆಗಳು ನಡೆಯಬಾರದು, ಇದರ ಬಗ್ಗೆ ಎಲ್ಲರೂ ಹೆಚ್ಚಿನ ಆಸಕ್ತಿ ವಹಿಸಿ ಅವರಿಗೆ ಸಹಾಯ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಈ ದಿಸೆಯಲ್ಲಿ

ಸಾರ್ವಜನಿಕರ ಸಹಕಾರವನ್ನೂ ಕೂಡ ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಶ್ರೀಮಾನ್ ಪ್ರತಾಪಚಂದ್ರ ಶೆಟ್ಟಿಯವರು ಈ ಇಲಾಖೆಯ ಬಗ್ಗೆ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ ಟೀಕೆ ಮಾಡುವುದೇ ಅವರ ಉದ್ದೇಶವಾಗಿತ್ತೆಂದು ನಾನು ಭಾವಿಸುತ್ತೇನೆ. ಇಲಾಖೆಯಲ್ಲಿ ಕೆಲವು "ಸಿ" ಹಾಗೂ "ಡಿ" ದರ್ಜೆಯ ಹುದ್ದೆಗಳನ್ನು ನೇಮಕ ಮಾಡಿಲ್ಲವೆಂದು ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿದ್ದಾರೆ. ಇದರಿಂದ ಮಂತ್ರಿಗಳ ಅದಕ್ಷತೆ ಇಲ್ಲಿ ತೋರಿಸುತ್ತದೆ ಎಂದು ಹೇಳಿದ್ದಾರೆ ಈಗಾಗಲೇ ನಾವು ಜಾಹಿರಾತನ್ನು ಕರೆದು ಸೆಲೆಕ್ಷನ್ ಕೂಡಾ ಮಾಡಿದ್ದೇವೆ. ಸದ್ಯದಲ್ಲೇ ಅಪಾಯಿಂಟ್‌ಮೆಂಟ್ ಆರ್ಡರ್ ಕೊಡಲಾಗುತ್ತದೆ. ಇನ್ನು ಸೂಪರಿಂಟೆಂಡೆಂಟ್ ಹಾಗೂ ಇನ್ನಿತರ ಪೋಸ್ಟ್‌ಗಳ ಬಗ್ಗೆ ಅರ್ಜಿ ಕರೆದು ಭರ್ತಿ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಈ ಇಲಾಖೆಯಲ್ಲಿ ಸಮನ್ವಯತೆ ಇಲ್ಲ, ಹೊಂದಾಣಿಕೆ ಇಲ್ಲ, ಡೈರೆಕ್ಟರನ್ನು ಕಂಡರೆ ಇತರೆ ಅಧಿಕಾರಿಗಳಿಗೆ ಆಗುವುದಿಲ್ಲ, ಅವರ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ ಎಂದು ಹೇಳಿದ್ದಾರೆ. ಅದು ಅವರ ಭಾವನೆ ಇವತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಇಲಾಖೆಯಲ್ಲಿ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಾಗಲೀ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಇಲಾಖೆಯಲ್ಲಾಗಲೀ ಸಮನ್ವಯತೆ ಇದೆ. ಇಲ್ಲಿ ಕೆಲಸ ಪರಿಣಾಮಕಾರಿಯಾಗಿ ನಡೆಯುತ್ತಿವೆ. ಇನ್ನು ಹರಿಜನ ಗಿರಿಜನ ನಿಗಮದಲ್ಲಿ ಅರ್ಹ ಫಲಾನುಭವಿಗಳನ್ನು ಸರಿಯಾಗಿ ಗುರುತಿಸುವುದಿಲ್ಲ ಎಂದು ಹೇಳಿದ್ದಾರೆ. ಮತ್ತೆ ಭದ್ರಾವತಿಯಲ್ಲಿ ಅಂಗನವಾಡಿ ಕಾರ್ಯಕರ್ತೆ ನಾಗವೇಣಿ ಎನ್ನುವಾಕೆಯನ್ನು ಕೊಲೆ ಮಾಡಿದ್ದಾರೆಂದು ಹೇಳಿದ್ದಾರೆ. ಈ ಬಗ್ಗೆ ನಾನು ನೋಡಿದ್ದೇನೆ. ಮೆಂಟಲಿ ರಿಟಾರ್ಟೆಡ್ ಆದ ಕೆಲವು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾಳೆಯೇ ಹೊರತು ಆಕೆಯ ಕೊಲೆ ಆಗಿರುವುದಿಲ್ಲ. ಮತ್ತೆ ಶ್ರೀ ಕಂಶಾಲಿ ಅವರು ಮಾತನಾಡಿ ವಿಶೇಷ ಘಟಕ ಯೋಜನೆ ಬಗ್ಗೆ, ಟ್ರೈಬಲ್ ಸಬ್ ಪ್ಲಾನ್ ಬಗ್ಗೆ ಮಾತನಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗ ಜನಾಂಗದವರು ಹೆಚ್ಚು ಮಂದಿ ಇದ್ದು ಅವರಿಗೆ ಹೆಚ್ಚಿನ ಸಹಾಯ ಸಹಕಾರ ಸರ್ಕಾರದಿಂದ ಸಿಕ್ಕಿಲ್ಲವೆಂದು ಹೇಳಿದ್ದಾರೆ, ಮಾನ್ಯ ಅಧ್ಯಕ್ಷರೇ, ಹುಣಸೂರಿನ ಕಾಡು ಕುರುಬರು ಹಾಗೂ ಜೇನು ಕುರುಬರನ್ನು ಪ್ರಿಮಿಟಿವ್ ಟ್ರೈಬ್ ಎಂದು ಮಾಡಿ ಶಿಕ್ಷಣ ಕ್ಷೇತ್ರದಲ್ಲಿ, ಔದ್ಯಮಿಕ ಕ್ಷೇತ್ರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಶೇಷ ರೀತಿಯ ಸಹಾಯವನ್ನು ಮಾಡುತ್ತಾ ಬಂದಿವೆ. ಇದು ಇನ್ನೂ ಪರಿಣಾಮಕಾರಿಯಾಗಿ ಮಾಡಿ ಬರುವ ಬಗ್ಗೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯು ಜನರ ದೈನಂದಿನ ಸಮಸ್ಯೆಗಳೊಂದಿಗೆ ಸ್ಪಂದಿಸುವ ಇಲಾಖೆಯಾಗಿರುವುದರಿಂದ ಈ ಇಲಾಖೆ ಬಗ್ಗೆ ಟೀಕೆ ಟಿಪ್ಪಣಿಗಳು ಬರುವುದು ಸಹಜ. ಈ ಟೀಕೆ ಟಿಪ್ಪಣಿಗಳನ್ನು ನಾನು ದೂರು ಎಂದು ತಿಳಿದುಕೊಂಡಿಲ್ಲ. ಇವುಗಳನ್ನು ನಾನು ಸ್ಪರ್ಧಾತ್ಮಕ ಮನೋಭಾವದಿಂದ ತೆಗೆದುಕೊಂಡು ಈ ಮೂರೂ ಇಲಾಖೆಗಳು ಹೋದ ವರ್ಷಕ್ಕಿಂತಲೂ ಈ ವರ್ಷ ಇನ್ನೂ ವ್ಯಾಪಕವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಜೂನ್ ೧೯೮೩ರಲ್ಲಿ ನಾನು ಅಧಿಕಾರ ವಹಿಸಿಕೊಂಡಿದ್ದು ಇಲ್ಲಿಗೆ ೨ ವರ್ಷಗಳು ಆಯಿತು. ಅಲ್ಲಿಂದ ಮಾನ್ಯ ಮುಖ್ಯಮಂತ್ರಿಯವರ ಸಹಕಾರ, ಆಶೀರ್ವಾದ, ಪ್ರೋತ್ಸಾಹದಿಂದ ಇಲಾಖೆಯನ್ನು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಪ್ರಸ್ತುತ ವರ್ಷದಲ್ಲೂ ಕೂಡಾ ಒಳ್ಳೆಯ ಕೆಲಸ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇನೆ ಎಂದು ಹೇಳಿ, ಅಲ್ಪಸಂಖ್ಯಾತರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾದುದು ನನ್ನ ಕರ್ತವ್ಯವೆಂದು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದ ತಕ್ಷಣ ಗೂಢವಾಲ ಅವರ ನೇತೃತ್ವದಲ್ಲಿ ಅಲ್ಪಸಂಖ್ಯಾತರ ಆಯೋಗ ರಚಿಸಿದ್ದು ಅವರು ೩೧ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕೊಟ್ಟರು. ಅದರಲ್ಲಿ ೧೪ ಶಿಫಾರಸುಗಳನ್ನು, ಈಗಾಗಲೇ ಜಾರಿಗೆ ತಂದಿದ್ದೇವೆ. ಅವುಗಳಲ್ಲಿ ಮುಖ್ಯವಾದವುಗಳು ಉರ್ದು ನಿರ್ದೇಶನಾಲಯವನ್ನು ಸ್ಥಾಪನೆ ಮಾಡುವುದು, ಅಲ್ಪಸಂಖ್ಯಾತರಿಗೆ ಸರ್ಕಾರಿ ಸೇವೆಯಲ್ಲಿ ಆದ್ಯತೆ ಕೊಡುವುದು ಹಾಗೂ ಅಲ್ಪಸಂಖ್ಯಾತರ ನಿಗಮ ಮಾಡುವುದು ಇವೆ. ನಾವು ಈಗಾಗಲೇ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಪ್ರಾರಂಭ ಮಾಡಿದ್ದೇವೆ. ಮತ್ತೆ ಇನ್ನು ಉಳಿದ ಅವರ ಶಿಫಾರಸ್ಸುಗಳು ವಿವಿಧ ಇಲಾಖೆಗಳಲ್ಲಿ ಪರಿಶೀಲನಾ ಹಂತದಲ್ಲಿ ಇವೆ. ಅಲ್ಪಸಂಖ್ಯಾತರ ನಿಗಮದಿಂದ ಸ್ವಾವಲಂಬನೆ ಯೋಜನೆಗೆ ಕೆಳಗೆ ಮೋಟರ್ ವೆಹಿಕಲ್ ತರಬೇತಿ ಯೋಜನೆಯ ಅಡಿಯಲ್ಲಿ ಈಗಾಗಲೇ ೧೮೯೦ ಜನರು ಲಾಭ ಪಡೆದಿದ್ದು ಇದಕ್ಕೆ ೧೭೪ ಲಕ್ಷ ರೂಪಾಯಿ ಖರ್ಚುಮಾಡಲಾಗಿದೆ. ಈ ಸಾಲಿನಲ್ಲಿ ಮೋಟಾರ್ ವೆಹಿಕಲ್ ತರಬೇತಿ ಯೋಜನೆ ಅಡಿಯಲ್ಲಿ ೬೬೭ ಜನರಿಗೆ ತರಬೇತಿ ಕೊಟ್ಟಿದ್ದೇವೆ. ಇದಕ್ಕೆ ೮,೭೫,೦೦೦ ರೂಪಾಯಿಗಳನ್ನು ಖರ್ಚು

ಮಾಡಿದ್ದೇವೆಂದು ಹೇಳುತ್ತೇನೆ. ನಮ್ಮ ಇಲಾಖೆ ಬಗ್ಗೆ ಇವತ್ತು ೨-೩ ಗಂಟೆಗಳ ಕಾಲ ಮಾತನಾಡಿದರೂ ಸಾಲದು ಇದು ಬಹಳ ದೊಡ್ಡ ಇಲಾಖೆ ಇದೆ, ಮಾನ್ಯ ಸದಸ್ಯರು ಏನೇನು ಕೇಳಿದ್ದಾರೋ ಅದಕ್ಕೆ ಸೀಮಿತವಾಗಿ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮತ್ತೆ ನಮ್ಮ ಇಲಾಖೆಯ ಬಗ್ಗೆ ಕೆಲವು ಘೋಷಣೆಗಳನ್ನು ನಾನು ಈಗ ಮಾಡಲಿದ್ದೇನೆ. ಪ್ರಸಕ್ತ ವರ್ಷದಲ್ಲಿ ಕೈಗೊಳ್ಳಲಿರುವ ಕಾರ್ಯಕ್ರಮಗಳು ಈ ರೀತಿ ಇದೆ.

೧. ೧೯೮೭–೮೮ರ ಅವಧಿಯಲ್ಲಿ ೧೧೫ ವಿದ್ಯಾರ್ಥಿ ನಿಲಯಗಳ ಹಾಗೂ ವಸತಿ ಶಾಲೆಗಳ ನಿರ್ಮಾಣಕ್ಕೆ ಪ್ರಸಕ್ತ ಸಾಲಿನಲ್ಲಿ ೩ ಕೋಟಿ ರೂ.ಗಳ ಬಿಡುಗಡೆ.

ಸಮಾಜ ಕಲ್ಯಾಣ ಇಲಾಖೆ ಅಸ್ತಿತ್ವಕ್ಕೆ ಬಂದಲಾಗಾಯ್ತು ೧೯೪೫–೪೬ನೇ ಸಾಲಿನ ಅಂತ್ಯದವರೆಗೆ ಅಂದರೆ ಸುಮಾರು ೩೦ ವರ್ಷಗಳ ಅವಧಿಯಲ್ಲಿ ಕೇವಲ ೧೪೪ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಆದರೆ ೧೯೮೭–೮೭ನೇ ಸಾಲಿನಲ್ಲಿ ಮುಖ್ಯ ಮಂತ್ರಿಗಳು ವಿಧಾನ ಸಭೆಯಲ್ಲಿ ಪ್ರಕಟಿಸಿದಂತೆ ವಿದ್ಯಾರ್ಥಿ ನಿಲಯಗಳ ಹಾಗೂ ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣದ ವಿಶೇಷ ಕಾರ್ಯಕ್ರಮದಡಿಯಲ್ಲಿ ಸುಮಾರು ೧೧೫ ಕಟ್ಟಡಗಳನ್ನು ಮುಂದಿನ ಆರ್ಥಿಕ ಸಾಲಿನ ಅಂತ್ಯದೊಳಗಾಗಿ ನಿರ್ಮಿಸಲಾಗುವುದು.

ಈ ಕಾರ್ಯಕ್ರಮಕ್ಕೆ ಈಗಾಗಲೇ ೫ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಪ್ರಸಕ್ತ ಸಾಲಿನಲ್ಲಿ, ೩ ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದು.

೨. ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಗೆ ಪರಿಹಾರ ನೀಡಿಕೆಯ ಕಾರ್ಯವಿಧಾನದಲ್ಲಿ ಸರಳೀಕರಣ:

ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾ: ಪರಿಶಿಷ್ಟ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ತನಿಖೆ ಮಾಡಿ ಪರಿಹಾರ ನೀಡಲು ಜಿಲ್ಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಅಧಿಕಾರ ಬೆಂಗಳೂರಿನಲ್ಲಿರುವ ನಾಗರೀಕ ಸಮಾಚಾರಣಾ ಘಟಕದ ಆರಕ್ಷಕ ಉಪ ಮಹಾನಿರೀಕ್ಷಕರಿಗೆ ಇತ್ತು. ದೌರ್ಜನ್ಯಕ್ಕೊಳಗಾದ ವ್ಯಕ್ತಿಗಳಿಗೆ ಕೂಡಲೇ ಪರಿಹಾರವನ್ನು ಒದಗಿಸುವ ದೃಷ್ಟಿಯಿಂದ ಆರಕ್ಷಕ ಮಹಾ ನಿರೀಕ್ಷಕರಿಗೆ ಇದ್ದ ಅಧಿಕಾರವನ್ನು ದಿನಾಂಕ ೭–೪–೧೯೮೮ರ ಸರ್ಕಾರಿ ಆದೇಶದ ನ್ವಯ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳಿಗೆ ನೀಡಲಾಗಿದೆ.

೩. ೨೫೦ ವಿದ್ಯಾರ್ಥಿ ನಿಲಯಗಳು ಹಾಗೂ ವಸತಿ ನಿಲಯಗಳ ಮಂಜೂರಾತಿ.

ಈಗಾಗಲೇ ಮುಖ್ಯ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಪ್ರಕಟಿಸಿರುವಂತೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ೧೦೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ೧೦೦ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಮತ್ತು ೫೦ ವಸತಿ ಶಾಲೆಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು. ಈ ೫೦ ವಸತಿ ಶಾಲೆಗಳು ಪ್ರಾರಂಭವಾದಲ್ಲಿ, ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ವಸತಿ ಶಾಲೆಗಳು ಇದ್ದಂತಾಗುತ್ತದೆ.

೪. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನಲ್ಲಿ ಒಂದು ವಿದ್ಯಾರ್ಥಿ ನಿಲಯ ಪ್ರಾರಂಭಿಸುವುದು.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳಿಗೆ ಸೇರಿದ ವೈದ್ಯಕೀಯ ಮತ್ತು ಇಂಜಿನೀಯರಿಂಗ್ ವಿದ್ಯಾರ್ಥಿಗಳಿಗಾಗಿ ಬೆಂಗಳೂರಿನಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಈ ವೆಚ್ಚವನ್ನು ಬೆಂಗಳೂರು ಜಿಲ್ಲೆಗೆ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಈಗಾಗಲೇ ಬಿಡುಗಡೆ ಮಾಡಿರುವ ಹಣದಲ್ಲಿ ಭರಿಸಲಾಗುವುದು.

೫. ನಾಗರೀಕ ಸಂರಕ್ಷಣಾ ಘಟಕವನ್ನು ಬಲಪಡಿಸುವ ದಿಸೆಯಲ್ಲಿ ಎರಡು ಹೆಚ್ಚುವರಿ ಘಟಕಗಳ ಮಂಜೂರಾತಿ.

ಈಗ ಹಾಲಿ ಅಸ್ತಿತ್ವದಲ್ಲಿರುವ ನಾಗರೀಕ ಸಂರಕ್ಷಣಾ ಘಟಕದ ೫ ಘಟಕಗಳ ಜೊತೆಗೆ ದಾವಣಗೆರೆ ಮತ್ತು ಮಂಗಳೂರಿನಲ್ಲಿ ಎರಡು ಘಟಕಗಳನ್ನು ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಈ ಬಾಬಿಗಾಗಿ ಆಯುವ್ಯಯದಲ್ಲಿ ೧೬.೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

೬. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ತರಬೇತಿ ಕೇಂದ್ರ ಸ್ಥಾಪನೆ.

ಐ.ಎ.ಎಸ್. ಮತ್ತು ಐ.ಪಿ.ಎಸ್. ಹಾಗೂ ಇತರ ಕೇಂದ್ರೀಯ ಸೇವೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಇಚ್ಛಿಸುವ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಒಂದು ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗುವುದು.

ಈ ವೆಚ್ಚವನ್ನು ೪ ಬೋಧನಾ ಕೇಂದ್ರಗಳ ನಿರ್ವಹಣೆಗಾಗಿ ನಿಗಧಿಪಡಿಸಿರುವ ೧೬.೦೦ ಲಕ್ಷ ರೂ.ಗಳಲ್ಲಿ ಭರಿಸಲಾಗುವುದು.

೭. ಹೆಚ್ಚುವರಿ ೭ ತಾಲ್ಲೂಕು ಅಧಿಕಾರಿಗಳ ಹುದ್ದೆಗಳ ಮಂಜೂರಾತಿ.

ಇತ್ತೀಚೆಗೆ ಮಂಜೂರು ಮಾಡಿದ ೩೫ ತಾಲ್ಲೂಕು ಮಟ್ಟದ ಅಧಿಕಾರಿಗಳ ಹುದ್ದೆಗಳ ಜೊತೆಗೆ ಇನ್ನೂ ೭ ತಾಲ್ಲೂಕುಗಳಿಗೆ ಅಧಿಕಾರಿಗಳ ಹುದ್ದೆಗಳನ್ನು ಮಂಜೂರು ಮಾಡಲಾಗುವುದು. ಇದರಿಂದ ತಾಲ್ಲೂಕು ಮಟ್ಟದಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮವನ್ನು ಪರಿಣಾಮ ಕಾರಿಯಾಗಿ ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ.

ಈ ವೆಚ್ಚವನ್ನು ೩೫ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಗಳಿಗಾಗಿ ನಿಗದಿಪಡಿಸಿರುವ ೨೮.೦೦ ಲಕ್ಷ ರೂ.ಗಳನ್ನು ಭರಿಸಲಾಗುವುದು.

೮. ಔದ್ಯೋಗಿಕ ಮಹಿಳಾ ತರಬೇತಿ ಕೇಂದ್ರದಲ್ಲಿ ಹೊಸ ವೃತ್ತಿಗಳ ತರಬೇತಿ ಪ್ರಾರಂಭ

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ವತಿಯಿಂದ ಗೌರಿಬಿದನೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಔದ್ಯೋಗಿಕ ಮಹಿಳಾ ತರಭೇತಿ ಕೇಂದ್ರದಲ್ಲಿ ಈಗ ಹಾಲಿ ನೀಡುತ್ತಿರುವ ವಿವಿಧ ವೃತ್ತಿಗಳ ತರಬೇತಿಯ ಜೊತೆಗೆ ಇನ್ನೂ ಹೊಸದಾಗಿ ಕೆಲವು ವೃತ್ತಿಗಳನ್ನು ಪ್ರಾರಂಭಿಸಲಾಗುವುದು.

ಈ ವೆಚ್ಚವನ್ನು ತರಬೇತಿ ಕೇಂದ್ರದ ನಿರ್ವಹಣೆಗಾಗಿ ನಿಗಧಿಪಡಿಸಿರುವ ೧೦.೦೦ ಲಕ್ಷ ರೂ.ಗಳಲ್ಲಿ ಭರಿಸಲಾಗುವುದು.

೯. ಇತರ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಡಿಪ್ಲೊಮೊ ದಾರರಿಗೆ ಫೋರ್‌ಮನ್‌ಷಿಪ್ ತರಬೇತಿ ಸಂಸ್ಥೆಯಲ್ಲಿ ತರಬೇತಿ ಕೊಡಲಾಗುವುದು.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಇವುಗಳ ಮೂಲಕ ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ೪೦ ಡಿಪ್ಲೊಮೋದಾರರಿಗೆ ಕೇಂದ್ರ ಸರ್ಕಾರದ ಫೋರ್‌ಮನ್‌ಷಿಪ್ ತರಬೇತಿ ಸಂಸ್ಥೆಯಲ್ಲಿ ತರಬೇತಿಯನ್ನು ನೀಡಲಾಗುವುದು. ತರಬೇತಿ ನಂತರ ಈ ಅಭ್ಯರ್ಥಿಗಳು ಬೃಹತ್ ಕೈಗಾರಿಕೋದ್ಯಮಗಳಲ್ಲಿ ಅಧಿಕಾರಿಗಳ ಅಪ್ರೆಂಟೀಸ್ ಪಡೆಯಲು ಅರ್ಹರಾಗುತ್ತಾರೆ.

ಈ ಕಾರ್ಯಕ್ರಮಕ್ಕಾಗಿ ಪ್ರತಿ ನಿಗಮಕ್ಕೂ ತಲಾ ೧.೦೦ ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ.

೧೦. ಅಂಗವಿಕಲರು ಮಾಶಾಸನ ಪಡೆಯಲು ನಿಗಧಿಪಡಿಸಿರುವ ವಾರ್ಷಿಕ ವರಮಾನದಲ್ಲಿ ಸಡಲಿಕೆ.

ಅಂಗವಿಕಲರು ಮಾಶಾಸನ ಪಡೆಯಲು ಈವರೆವಿಗೂ ಜಾರಿಯಲ್ಲಿದ್ದ ೩,೬೦೦ ರೂಪಾಯಿಗಳ ವಾರ್ಷಿಕ ವರಮಾನವನ್ನು ಈಗ ೬,೦೦೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಇದರಿಂದ ಹೆಚ್ಚು ಅಂಗವಿಕಲರಿಗೆ ಅನುಕೂಲವಾಗುವುದು.

೧೧. ಪರಿಶಿಷ್ಟ ಜಾತಿಗಳಿಗೆ ಸೇರಿದ ಮಹಿಳೆಯರು ಮತ್ತು ಯುವಕರಿಗೆ ವಿಶೇಷ ತರಬೇತಿ.

ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ೧೨೫.೦೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದ ಮಹಿಳೆಯರು ಮತ್ತು ಯುವಕರಿಗೆ ಕೆಳಕಂಡ ವೃತ್ತಿಗಳಲ್ಲಿ ಪ್ರಸಕ್ತ ಸಾಲಿನಲ್ಲಿ ತರಬೇತಿ ನೀಡಲು ವ್ಯವಸ್ಥೆ ಮಾಡಿದೆ.

ಅ) ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯವರ ತರಬೇತಿ,

ಆ) ಗೃಹಪಾಲನೆಯಲ್ಲಿ ತರಬೇತಿ,

ಇ) ಭಾರಿ ವಾಹನಗಳ ಚಾಲಕರ ತರಬೇತಿ.

೧೨. ಹೊಸ ಸಮಗ್ರ ಬಾಲ ವಿಕಾಸ ಯೋಜನೆಗಳ ಮಂಜೂರಾತಿ:

ಪ್ರಸಕ್ತ ಸಾಲಿನಲ್ಲಿ ರಾಜ್ಯದ ೧೪ ತಾಲ್ಲೂಕುಗಳಲ್ಲಿ ಹೊಸ ಸಮಗ್ರ ಬಾಲವಿಕಾಸ ಯೋಜನೆಗಳನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದ್ದು ಸ್ಥಳಗಳ ಮಂಜೂರಾತಿಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.

೧೩. - ಅಂಗವಿಕಲರ ನಿರ್ದೇಶನಾಲಯದ ಪ್ರಾರಂಭ.

ಅಂಗವಿಕಲರ ನಿರ್ದೇಶನಾಲಯವನ್ನು ಸ್ಥಾಪಿಸಲು ಈಗಾಗಲೇ ಕೈಗೊಂಡಿರುವ ನಿರ್ಧಾರದಂತೆ ಪ್ರಸಕ್ತ ಸಾಲಿನಲ್ಲಿ ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ ಬಾಬಿಗಾಗಿ ಪ್ರಸಕ್ತ ಸಾಲಿಗೆ ೨೫.೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

೧೪. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಹಿಂದುಳಿದ ವರ್ಗದವರಿಗೆ ಮೀಸಲಾತಿ ವ್ಯವಸ್ಥೆ ಇದ್ದಾಗ್ಯೂ ಅವರಿಗೆ ಅದರ ಲಾಭ ನಿಗದಿಯಾದ ಪ್ರಮಾಣದಲ್ಲಿ ದೊರೆಯುತ್ತಾ ಇರಲಿಲ್ಲ, ಇದನ್ನು ಮನಗಂಡು ಸರ್ಕಾರವು ಮೀಸಲಾತಿ ನೀತಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಾಗೂ ಇತರೇ ಹಿಂದುಳಿದ ವರ್ಗಗಳವರಿಗೆ ಪರಿಣಾಮಕಾರಿಯಾಗಿ ಹಾಗೂ ಶಾಸನಬದ್ಧವಾಗಿ ಜಾರಿಗೆ ತರಲು ವಿಶೇಷ ಮಸೂದೆಯನ್ನು ಸದನದಲ್ಲಿ ಇಷ್ಟರಲ್ಲೇ ಮಂಡಿಸಲಾಗುವುದು.

ಇನ್ನು ಕೊನೆಯದಾಗಿ ಥರ್ಡ್ ಬ್ಯಾಕ್‌ವರ್ಡ್ ಕಮಿಷನ್ ಅವಾರ್ಡ್ ಬಗ್ಗೆ ಮಾನ್ಯ ಧರ್ಮಸಿಂಗ್, ಅವರು ಬಸವಲಿಂಗಪ್ಪ ಅವರು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ೧೯೭೨ರಲ್ಲಿ ಹಿಂದಿನ ಸರ್ಕಾರ ಹಾವನೂರ್ ಆಯೋಗವನ್ನು ರಚನೆ ಮಾಡಿತ್ತು. ಅದು ೧೯೭೫ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ೧೯೭೭ರಲ್ಲಿ ಮೀಸಲಾತಿ ಆಜ್ಞೆಯನ್ನು ಹೊರಡಿಸಿತು. ಈ ಮೀಸಲಾತಿ ಆಜ್ಞೆಯನ್ನು ಕರ್ನಾಟಕ ಹೈಕೋರ್ಟಿನಲ್ಲಿ ಮತ್ತು ಭಾರತದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು.

೧೧-೩೦ ಎ.ಎಂ.

ಅದರ ಬಗ್ಗೆ ಸುಪ್ರೀಂ ಕೋರ್ಟ್ ೧೯೮೨ನೇ ಇಸವಿಯಲ್ಲಿ ತನ್ನ ತೀರ್ಪನ್ನು ಹೊರಗೆಡೆಹುವುದರಲ್ಲಿತ್ತು ಆಗ ವಸಂತ್ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದರು ಅವರು ಎರಡನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡುತ್ತೇವೆಂದು ಹೇಳಿದ್ದರಿಂದ ತೀರ್ಪು ಹೊರಬೀಳಲಿಲ್ಲ. ಅವರು ವೈಜ್ಞಾನಿಕವಾದ ವಾಸ್ತವವಾದ ಎರಡನೇ ಹಿಂದುಳಿದ ಆಯೋಗವನ್ನು ರಚನೆ ಮಾಡುತ್ತೇನೆಂದು ಹೇಳಿದ್ದರಿಂದ ಸುಪ್ರೀಂ ಕೋರ್ಟ್ ತೀರ್ಪನ್ನು ತಡೆಹಿಡಿಯಲಾಯಿತು, ಅದು ತಮಗೆ ತಿಳಿದ ವಿಷಯ. ಮಾನ್ಯ ವೆಂಕಟಸ್ವಾಮಿಯವರ ಆಯೋಗವನ್ನು ೧೯೮೩ನೇ ಇಸವಿಯಲ್ಲಿ ರಚಿಸಲಾಯಿತು. ವೆಂಕಟಸ್ವಾಮಿಯವರ ಆಯೋಗ ೧೯೮೬ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದಾಗ ಅದು ಒಪ್ಪಿತದ ವರದಿಯಲ್ಲ, ಅದರಲ್ಲಿ ಅನೇಕ ಲೋಪದೋಷಗಳಿವೆಯೆಂದು ರಾಜ್ಯಾದ್ಯಂತ ಚಳುವಳಿ ನಡೆಯಿತು. ಆಯೋಗದ ಸದಸ್ಯರುಗಳು ಸಹ ಪತ್ರಿಕಾ ಹೇಳಿಕೆಗಳನ್ನು ಕೊಟ್ಟು ಇದು ಒಪ್ಪಿತದ ವರದಿಯಲ್ಲವೆಂದು ಹೇಳಿದರು. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಆಯೋಗದ ವರದಿಯನ್ನು ತಿರಸ್ಕರಿಸಬೇಕಾಯಿತು. ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಅನೇಕ ಸಂಘಸಂಸ್ಥೆಗಳ ಪ್ರಮುಖರನ್ನು ಲೋಕಸಭೆ ಹಾಗೂ ವಿಧಾನಸಭೆ ಸದಸ್ಯರುಗಳನ್ನೂ ಹಾಗೂ ತಜ್ಞರನ್ನೂ ಕರೆಯಿಸಿ ಚರ್ಚಿಸಲಾಯಿತು. ಇದರ ಬಗ್ಗೆ ಸಚಿವ ಸಂಪುಟದಲ್ಲಿ ೧೦-೧೨ ಸಲ ಚರ್ಚಿಸಿದ್ದೇವೆ. ಕಾನೂನು ತಜ್ಞರ ಜೊತೆ ಚರ್ಚಿಸಿದ್ದೇವೆ. ಅಡ್ವೋಕೇಟ್‌ಗಳ ಜೊತೆ ಚರ್ಚಿಸಿದ್ದೇವೆ. ದಿನಾಂಕ ೧೩-೧೦-೧೯೮೬ ರಂದು ಹಿಂದುಳಿದ ವರ್ಗಗಳ ವಿಷಸಲಾತಿಯ ಬಗ್ಗೆ ಮೂರು ತಾತ್ಕಾಲಿಕ ಆಜ್ಞೆ ಹೊರಡಿಸಿ ಮೂರನೇ ಹಿಂದುಳಿದ ವರ್ಗಗಳ ಆಯೋಗದ ರಚನೆಯ ಬಗ್ಗೆ ವಚನ ಕೊಟ್ಟಿದ್ದೇವೆ ಕೊಟ್ಟ ವಚನದಂತೆ ಮಾನ್ಯ ಓ. ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ಆಯೋಗವನ್ನು ರಚನೆ ಮಾಡಿದ್ದೇವೆ. ಓ. ಚಿನ್ನಪ್ಪರೆಡ್ಡಿಯವರ ಆಯೋಗವನ್ನು ದಿನಾಂಕ ೯-೩-೧೯೮೮ ರಂದು ರಚನೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಮಾನ್ಯ ಬಸವಲಿಂಗಪ್ಪನವರು ಜನತಾ ಸರ್ಕಾರಕ್ಕೆ ಹಿಂದುಳಿದವರ ಬಗ್ಗೆ ಅನುಕಂಪವಿಲ್ಲ ನಾಟಕ ಮಾಡುತ್ತಿದ್ದಾರೆಂದೂ ಇವರಿಗೆ ಹಿಂದುಳಿದವರ ಬಗ್ಗೆ ಯಾವುದೇ ಒಳ್ಳೆಯ ಉದ್ದೇಶವಿಲ್ಲವೆಂದು ಕಟುವಾಗಿ ಟೀಕಿಸಿದರು. ಕೆಲವರು ಒನ್‌ಮ್ಯಾನ್ ಕಮಿಷನ್ ಮಾಡಿದ್ದಾರೆ ಅದರಿಂದ ಹಿಂದುಳಿದ ವರ್ಗದವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಒನ್ ಮ್ಯಾನ್ ಕಮಿಷನ್ ಇದ್ದರೆ ನ್ಯಾಯ ಸಿಗುವುದಿಲ್ಲ ಇತರೆ ಜಾತಿಯ ಸದಸ್ಯರುಗಳು ಆಯೋಗದಲ್ಲಿರಬೇಕೆಂದು ಹೇಳಿದರು. ಕೆಲವರು ಹೊರ ರಾಜ್ಯದವರನ್ನು ತಂದು ಒನ್ ಮ್ಯಾನ್ ಕಮಿಷನ್ ನೇಮಕ ಮಾಡಿದ್ದಾರೆಂದು ಹೇಳಿದರು. ಈ ರಾಜ್ಯದಲ್ಲಿ ಅನೇಕ ಆಯೋಗಗಳನ್ನು ರಚನೆ ಮಾಡಿ ಅನುಭವವಿದೆ. ಹಿಂದುಳಿದವರ್ಗದವರ ಕಲ್ಯಾಣವಾಗಬೇಕು ನಿಜವಾಗಿಯೂ ಹಿಂದುಳಿದವರು ಯಾರು ಇದ್ದಾರೆ ಅವರಿಗೆ ಸಂವಿಧಾನಬದ್ಧವಾಗಿ ರಕ್ಷಣೆ ಸಿಗಬೇಕು ಎನ್ನುವ ಜನತಾ ಸರ್ಕಾರದ ಮೂಲ ಉದ್ದೇಶ ಕಳಕಳಿ ಏನಿತ್ತು ಅದು ಸಫಲವಾಗಬೇಕಾದರೆ ಏನು ಮಾಡಬೇಕೆಂದು ಸಚಿವಸಂಪುಟದಲ್ಲಿ ಅನೇಕ ಸಾರಿ ಚರ್ಚೆಮಾಡಿ ಹೊರರಾಜ್ಯದವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ಮಾಡುವುದು ಸೂಕ್ತವೆಂದು ಅದರಲ್ಲಿಯೂ ಒನ್ ಮ್ಯಾನ್ ಕಮಿಷನ್ ಮಾಡುವುದು ಸರಿಯೆಂದು ತೀರ್ಮಾನಿಸಿ ಅದರಂತೆ ಮುಖ್ಯಮಂತ್ರಿಗಳ ಜೊತೆ ಚರ್ಚೆಮಾಡಿ ಮಾನ್ಯ ಓ. ಚಿನ್ನಪ್ಪರೆಡ್ಡಿಯವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಓ. ಚಿನ್ನಪ್ಪರೆಡ್ಡಿಯವರ ಬಗ್ಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಮಾಡಲಿಲ್ಲ, ಅವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅವರಿಗೆ ಅಭಿನಂದನೆಗಳನ್ನೂ ಸಹ ಸಲ್ಲಿಸಿದ್ದಾರೆ. ಸರ್ಕಾರ ಒಳ್ಳೆಯ ವ್ಯಕ್ತಿಯನ್ನು ಆರಿಸಿ ಒನ್ ಮ್ಯಾನ್ ಕಮಿಷನ್ ನೇಮಕ ಮಾಡಿದೆ, ಮಾನ್ಯ ಬಸವಲಿಂಗಪ್ಪನವರಿಗೆ ನಾನೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಒನ್ ಮ್ಯಾನ್ ಕಮಿಷನ್ ನೇಮಕ ಮಾಡುವಾಗ ಹೊರ ರಾಜ್ಯದವರನ್ನು ಏತಕ್ಕೆ ನೇಮಕ ಮಾಡಿದರು ? ಈ ರಾಜ್ಯದಲ್ಲಿ ಯಾರೂ ಸಿಗಲಿಲ್ಲವೇ ? ಎಂದು ಕೇಳಿದರು. ನಮ್ಮ ರಾಜ್ಯದವರನ್ನು ನೇಮಕ ಮಾಡಿದರೆ He may be subjected to pulls and pressur-s. ಚಿನ್ನಪ್ಪರೆಡ್ಡಿಯವರಿಗೆ ಒತ್ತಡ ರಾಜಕೀಯ ಇರುವುದಿಲ್ಲವೆನ್ನುವ ಕಾರಣದಿಂದ ಅವರನ್ನು ನೇಮಕ ಮಾಡಿದ್ದೇವೆ ಇನ್ನಿತರೆ ಜಾತಿಯ ಹೆಚ್ಚಿನ ಸದಸ್ಯರುಗಳನ್ನು ಆಯೋಗದಲ್ಲಿ ಸೇರಿಸುವುದರಿಂದ when they represent certain communities they may establish vested interest. ಇದರಿಂದ ಹಿಂದುಳಿದವರ

ರಕ್ಷಣೆ ಆಗಲಾರದು ಎನ್ನುವ ಮೂಲ ಉದ್ದೇಶದಿಂದ ಆ ಒಂದು ಹಿನ್ನೆಲೆಯಲ್ಲಿ ಒನ್ ಮ್ಯಾನ್ ಕಮಿಷನ್ ನೇಮಕ ಮಾಡಿದ್ದೇವೆ. ಹಿಂದುಳಿದವರ ಕಲ್ಯಾಣವಾಗಬೇಕೆನ್ನುವ ಉದ್ದೇಶದಿಂದ ಮಾಡಿದ್ದೇವೆ. ಅದರ ಟರ್ಮ್ಸ್ ಆಫ್ ರೆಫರೆನ್ಸ್ ಏನು ಮಾಡಿದ್ದೇವೆಂದರೆ ಮೊದಲನೇ ಆಯೋಗದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಏಳು ಪಾಯಿಂಟ್ ಇತ್ತು. ಎರಡನೇ ಹಿಂದುಳಿದ ಆಯೋಗದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ಅಂದರೆ ವೆಂಕಟಸ್ವಾಮಿಯವರ ಆಯೋಗದಲ್ಲಿ ಎಂಟು ಪಾಯಿಂಟ್‌ಗಳು ಇದ್ದವು. ಮೂರನೇ ಆಯೋಗದಲ್ಲಿ ಟರ್ಮ್ಸ್ ಆಫ್ ರೆಫರೆನ್ಸ್ ೧೧ ಪಾಯಿಂಟ್‌ಗಳಿವೆ, ಪ್ರತಿಯೊಂದನ್ನೂ ಕೂಡ ಸುಪ್ರೀಂ ಕೋರ್ಟ್ ಗೈಡ್‌ಲೈನ್ಸ್ ಮೇಲೆ ಮಾಡಿದ್ದೇವೆ. ಅಷ್ಟು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದೇವೆ. ಹಿಂದುಳಿದ ವರ್ಗದವರ ರಕ್ಷಣೆಗೋಸ್ಕರ ಅವರ ಕಲ್ಯಾಣಕ್ಕೋಸ್ಕರ ಮೂರನೇ ಆಯೋಗವನ್ನು ರಚನೆ ಮಾಡಿದ್ದೇವೆ. ಇದರಲ್ಲಿ ಯಾವುದೇ ದುರುದ್ದೇಶವಿಲ್ಲ. ಜನತಾ ಪಕ್ಷ, ಜನತಾ ಸರ್ಕಾರ ಹಿಂದುಳಿದವರ ವಿರೋಧಿ ಇದು ಬಹಳ ನಾಟಕೀಯವಾಗಿದೆ ಎಂದು ಶ್ರೀ ಬಸವಲಿಂಗಪ್ಪನವರು ಹೇಳಿದ್ದು ದು ಸತ್ಯಕ್ಕೆ ದೂರವಾದ ಮಾತು. ಶ್ರೀ ಧರ್ಮಸಿಂಗ್, ಮತ್ತು ಶ್ರೀ ಖರ್ಗೆಯವರು ಈ ವಾದವನ್ನು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಏನು ಒಂಭತ್ತು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ, ಅವರು ಒಳ್ಳೆಯ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅವರ ಅಭಿಪ್ರಾಯಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು, ಸದನದಲ್ಲಿ ಕೆಲವು ವಿಷಯಗಳ ಬಗ್ಗೆ ಮಾತನಾಡಿ ನನ್ನ ಇಲಾಖೆಯ ಮೇಲೆ ಬೇಕು ಚೆಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಬೇಡಿಕೆಗಳನ್ನು ಸಭೆ ಒಪ್ಪಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೇ, ಬಹುಶಃ ಬೆಂಗಳೂರು ನಗರವನ್ನು ಬಿಟ್ಟರೆ ತಾಲ್ಲೂಕು ಮಟ್ಟದಲ್ಲಿ ಮತ್ತು ಬೇರೆ ಬೇರೆ ಸಣ್ಣ ಸಣ್ಣ ಪಟ್ಟಣಗಳಲ್ಲಿ ಈ ಭಿಕ್ಷುಕರ ಹಾವಳಿ ತುಂಬಾ ಜಾಸ್ತಿಯಾಗಿದೆ. ಕೈಕಾಲು ತುಂಡಾದವರೆಲ್ಲ, ಜೀವನದಲ್ಲಿ ಗಟ್ಟಿಯಾದವರೂ ಭಿಕ್ಷೆ ಬೇಡುತ್ತಿದ್ದಾರೆ, ಪ್ರತಿ ಶನಿವಾರ, ಸೋಮವಾರ ಅವರ ಹಾವಳಿ ತಪ್ಪಿದ್ದಲ್ಲ. ಈ ಭಿಕ್ಷುಕ ಕೇಂದ್ರಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡುತ್ತೀರಿ ? ಇದನ್ನು ತಾಲ್ಲೂಕು ಮಟ್ಟದಲ್ಲಿ ವಿಸ್ತರಿಸುತ್ತೀರಾ ಎಂದು ಕೇಳಿದ್ದೆ. ಇನ್ನು ಅವರ ಪುನರ್ ವಸತಿಯ ಬಗ್ಗೆ ಸರ್ಕಾರ ಗಮನ ಹರಿಸಿದೆಯೋ ಎಂದು ಪ್ರಶ್ನೆ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ, ೧೯೮೭–೮೮ರಲ್ಲಿ, ಈ ಸಮಗ್ರ ಬಾಲವಿಕಾಸ ಯೋಜನೆ ಕೇಂದ್ರ ಸರ್ಕಾರದ ಯೋಜನೆ. ಸಮಗ್ರ ಕುಟುಂಬ ಕಲ್ಯಾಣ ಯೋಜನೆ ರಾಜ್ಯದ ಬಜೆಟ್‌ನಲ್ಲಿ ಮಾಡುವಂಥ ಯೋಜನೆ. ನಮ್ಮ ಸರ್ಕಾರ ಇದ್ದಾಗ ಇದನ್ನು ಪ್ರಾರಂಭ ಮಾಡಿತ್ತು. ೧೯೮೬–೮೭ರಲ್ಲಿ ಮತ್ತು ೧೯೮೭–೮೮ ರಲ್ಲಿ ಎಷ್ಟು ಸಮಗ್ರ ಕುಟುಂಬ ಕಲ್ಯಾಣ ಯೋಜನೆಯನ್ನು ಮಾನ್ಯ ಸಚಿವರು ಪ್ರಾರಂಭಿಸಿದ್ದಾರೆ ಎಂದು ತಿಳಿಸಬೇಕು. ಅದೇರೀತಿ ನಮ್ಮ ಉಡುಪಿಯ ಬಾಲಭವನಕ್ಕೆ ಒಂದು ವಿಹಾರದೋಣಿಯನ್ನು ಒದಗಿಸಲಾಗಿತ್ತು. ನಾಲ್ಕು ವರ್ಷಗಳಿಂದ ಅದು ಮಳೆ, ಗಾಳಿ, ಬಿಸಿಲಿಗೆ ಹಾಗೆಯೇ ನಿಂತಿದ್ದು ನೀರಿಗೆ ಇಳಿಯಲಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸಮರ್ಪಕ ಉತ್ತರ ಕೊಡುತ್ತಾರೆ ಎಂದು ಭಾವಿಸಿದ್ದೇನೆ.

ಶ್ರೀ ಜಿ ಬಸವಣ್ಣೆಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಬೆಗ್ಗರ್‌ರಿಲೀಫ್ ಬಗ್ಗೆ ಕರ್ನಾಟಕ ಭಿಕ್ಷಾಟನಾ ನಿರ್ಮೂಲನಾ ಕಾಯಿದೆ ೧೯೭೫ ರಲ್ಲಿ ಜಾರಿಗೆ ಬಂದಿದೆ, ಈಗ ಐದು ನಗರಪಾಲಿಕೆಗಳಲ್ಲಿ ಮತ್ತು ಐದು ಪುರಸಭೆಗಳಲ್ಲಿ ಈ ಕೇಂದ್ರಗಳಿವೆ. ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮತ್ತು ಪುರಸಭೆಗಳಾದ ಶಿವಮೊಗ್ಗ, ದಾವಣಗೆರೆ, ಗುಲ್ಬರ್ಗಾ, ಬಿಜಾಪುರ ಮತ್ತು ಬಳ್ಳಾರಿ ಈ ಪ್ರದೇಶಗಳಲ್ಲಿದೆ. ಅಲ್ಲಿ ಕರ್ನಾಟಕ ಭಿಕ್ಷಾಟನಾ ನಿರ್ಮೂಲನಾ ಕಾಯಿದೆ ಪ್ರಕಾರ ಕಟ್ಟಡ, ಸರಕು ಸೇವೆ, ವಾಹನಗಳ ಮೇಲಿನ ತೆರಿಗೆ, ವೃತ್ತಿ ಮೇಲಿನ ತೆರಿಗೆ ಇದರಲ್ಲಿ ಮೂರು ಪೈಸೆಯನ್ನು ಅವರು ಕಲೆಕ್ಟ್ ಮಾಡಬೇಕು ಮತ್ತು ಅದು ರೆಮಿಟ್ ಆಗಬೇಕು ಎಂದಿದೆ, ಇದು ಸರಿಯಾಗಿ ಕಲೆಕ್ಷನ್ ಆಗುತ್ತಿಲ್ಲ. ತಾವು ಹೇಳುತ್ತೀರಿ, ತಾಲ್ಲೂಕು ಮಟ್ಟದಲ್ಲಿ ಭಿಕ್ಷಾಟನಾ, ನಿರ್ಮೂಲನಾ ಕೇಂದ್ರಗಳು ಆಗಬೇಕು ಎಂದು. ಪ್ರತಿ ತಾಲ್ಲೂಕಿನಲ್ಲಿಯೂ ಇದನ್ನು ಮಾಡುವುದು ಕಷ್ಟವಾಗುತ್ತದೆ. ಪುರಸಭೆ ಮತ್ತು ನಗರಸಭೆಗಳಲ್ಲಿ ಈ ನಿರ್ಮೂಲನಾ ಕೇಂದ್ರಗಳನ್ನು ಮಾಡುವುದಕ್ಕೆ ಅವಕಾಶ ಇದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಬಯಸುತ್ತೇನೆ. ಈ ಎಸ್. ಎಂ. ಪಿ. ಪ್ರಾಜೆಕ್ಟ್‌ಗೆ ಪ್ರತಿವರ್ಷ ನಾವು ೪–೫ ಕೋಟಿ ಖರ್ಚು ಮಾಡುತ್ತಿದ್ದೇವೆ......

ಶ್ರೀಮತಿ ಮನೋರಮಾ ಮಧ್ವರಾಜ್.—ನಾನು ಕೇಳಿದ್ದುದು ಸಮಗ್ರ ಕುಟುಂಬ ಕಲ್ಯಾಣ ಯೋಜನೆ, ಐ. ಎಸ್. ಡಬ್ಲ್ಯು. ಎಸ್.

ಶ್ರೀ ಜಿ. ಬಸವಣ್ಣಪ್ಪ.—ಸಮಗ್ರ ಕಲ್ಯಾಣ ಅಭಿವೃದ್ಧಿ ಯೋಜನೆಗೆ......

ಶ್ರೀಮತಿ ಮನೋರಮಾ ಮಧ್ವರಾಜ್.—ಇದು ಕೇಂದ್ರ ಸರ್ಕಾರದ್ದು. ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ೮೭–೮೮ ರಲ್ಲಿ ಎಷ್ಟು ಪ್ರಾರಂಭ ಮಾಡಿದ್ದೀರಿ ?

SRI G. BASAVANNEPPA.—We have taken a decision not to support this from the State. ಕಾರಣ ಹೇಳುತ್ತೇನೆ. ಏತಕ್ಕೆಂದರೆ ಸಮಗ್ರ ಬಾಲ ವಿಕಾಸ ಯೋಜನೆ ಕೇಂದ್ರ ಸರ್ಕಾರದ ಯೋಜನೆ, ಇದಕ್ಕೆ ಮೂರನೇ ಎರಡು ಭಾಗವನ್ನು ರಾಜ್ಯ ಸರ್ಕಾರ ಖರ್ಚು ಮಾಡುತ್ತದೆ. ಮೂರನೇ ಒಂದು ಭಾಗವನ್ನು ಕೇಂದ್ರ ಸರ್ಕಾರ ಖರ್ಚು ಮಾಡುತ್ತದೆ. ನಾವು ಹಿಂದೆ ರಾಜ್ಯ ಯೋಜನೆಗಳನ್ನು ಮಾಡಿದ್ದರಲ್ಲಿ ಅರ್ಥ ಇಲ್ಲ. ಏಕೆಂದರೆ ಅದರ ಪೂರ್ಣ ಖರ್ಚನ್ನು ನಾವು ಹಾಕಬೇಕಾಗುತ್ತದೆ, ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬದ್ಧವಾಗಿದೆ. ಹಂತ ಹಂತದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಇದನ್ನು ಮಾಡಬೇಕೆಂದು ಇದೆ. ಈಗ ೩೦ ತಾಲ್ಲೂಕುಗಳಲ್ಲಿ ರಾಜ್ಯ ಯೋಜನೆಗಳು ಇವೆ. ಅದು ಸಮರ್ಪಕವಾಗಿ ಆಗುತ್ತಿಲ್ಲ, ಅದನ್ನು ಸ್ಯಾಚುರೇಶನ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಒಂದು ಸಾವಿರ ಜನಸಂಖ್ಯೆಗೆ ಒಂದು ಅಂಗನವಾಡಿ ತೆರೆಯುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಹೊಸದಾಗಿ ಸ್ಟೇಟ್ ಪ್ರಾಜೆಕ್ಟ್ಸ್ ಇಲ್ಲ. ಇನ್ನು ಮೂರನೆಯದಾಗಿ, ಉಡುಪಿ ಬಾಲಭವನದಲ್ಲಿ ವಿಹಾರದೋಣಿ ಕೆಟ್ಟು ನಿಂತಿದೆ ಎಂದು ಹೇಳಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಸವಿಸ್ತಾರವಾಗಿ ಆ ಮೇಲೆ ಕೇಳಿ, ಈಗ ಬೇಡ ಎಂದು. ಅದಕ್ಕೆ ನಾನು ಈಗ ಕೇಳುತ್ತಿದ್ದೇನೆ. ೫೦ನೇ ಪುಟದಲ್ಲಿ ಏನು ಹೇಳಿದ್ದಾರೆ ಅದರ ಪ್ರಕಾರ ನೀವು ವರ್ಷ ವರ್ಷ ಏನು ಖರ್ಚು ಮಾಡುತ್ತಿದ್ದೀರಿ ಎನ್ನತಕ್ಕಂಥಾದ್ದು ಆನ್ಯುಯಲ್ ಪ್ಲಾನ್ ಔಟ್‌ಲೇ ಪ್ರಕಾರ ನಾವು ನೋಡಿದರೆ ಅದರಲ್ಲಿ ೮೬–೮೭, ೮೭–೮೮ ಮತ್ತು ೮೮–೮೯ ರಲ್ಲಿ ಕಡಿಮೆಯಾಗುತ್ತಿದೆ ಎನ್ನತಕ್ಕಂಥಾದ್ದು ಕಂಡುಬರುತ್ತದೆ ಪೇಜ್ ನಂಬರ್ ೨೬ ರಲ್ಲಿ ರೆವಿನ್ಯೂ ಎಕ್ಸ್‌ಪೆಂಡಿಚರ್‌ನಲ್ಲಿ ಕೂಡ ಸೋಶಿಯಲ್ ವೆಲ್‌ಫೇರ್‌ಗೆ ಸೋಷಿಯಲ್ ಸೆಕ್ಯೂರಿಟಿ ಅಂಡ್ ವೆಲ್‌ಫೇರ್‌ನಲ್ಲಿ Welfare of Scheduled Caste; Welfare of Backward Classes, Scheduled Tribe and Denotified tribes ಗಾಗಿ ಈ ೧೯೮೬–೮೭, ೧೯೮೭–೮೮, ೧೯೮೮–೮೯ ಸಾಲುಗಳಲ್ಲಿಯೂ ಕೂಡ ಖರ್ಚು ಇಳಿಮುಖವಾಗುತ್ತಾ ಬಂದಿರುವುದು ಸ್ಪಷ್ಟವಾಗಿ ಇದರಲ್ಲಿ ಕಾಣುತ್ತಿದೆ. ಇದಕ್ಕೆ ನಮಗೆ ತೃಪ್ತಿಕರವಾದ ಸಮರ್ಪಕವಾದ ಉತ್ತರ ಸಿಗಲಿಲ್ಲ. ಎರಡನೆಯದಾಗಿ, ಪ್ರಿಮೆಟ್ರಿಕ್ ಹೈಸ್ಕೂಲ್ಸ್ ಮತ್ತು ಪೋಸ್ಟ್ ಮೆಟ್ರಿಕ್ ಹಾಸ್ಟಲ್ಸ್‌ಗಳಿಗೆ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಹಣವನ್ನು ತಕ್ಷಣ ಹೆಚ್ಚು ಮಾಡಬೇಕು. ಈ ಅಧಿವೇಶನ ಮುಗಿಯುವುದಕ್ಕೆ ಮುಂಚೆ ಕ್ಯಾಬಿನೆಟ್ ಮುಂದೆ ಇಟ್ಟು ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಇದು ಅತ್ಯಂತ ಅವಶ್ಯ. ಈಗಾಗಲೇ ಹೈಸ್ಕೂಲುಗಳು ಮತ್ತು ಕಾಲೇಜುಗಳು ಪ್ರಾರಂಭವಾಗಿವೆ. ಹೈಸ್ಕೂಲು ಹಾಸ್ಟಲುಗಳಲ್ಲಿ ಕೊಡುತ್ತಿರುವ ೧೦೦ ರೂಪಾಯಿಗಳಿಗೆ ಏನೂ ಸಿಕ್ಕುವುದಿಲ್ಲ ಪ್ರತಿ ದಿನ ಒಂದು ಕಾಫಿ ಕೊಟ್ಟರೂ ಒಂದು ನೂರು ರೂಪಾಯಿಗಳ ಬಿಲ್ ಆಗುತ್ತದೆ. ಆದುದರಿಂದ ಹೈಸ್ಕೂಲು ಹುಡುಗರಿಗೆ ೧೫೦ ಮತ್ತು ಕಾಲೇಜ್ ಹಾಸ್ಟಲ್ ಹುಡುಗರಿಗೆ ೩೦೦ ರೂಪಾಯಿಗಳನ್ನು ಮಾಡಬೇಕು. ಈ ಬಗ್ಗೆ ಘೋಷಣೆಯನ್ನು ಈಗಲೇ ಮಾಡಬೇಕು. ನೀವು ಎಮ್ಮೆ ಕೋಳಿ ಕೊಡುವುದನ್ನು ಬೇಕಾದರೆ ನಿಲ್ಲಿಸಿಬಿಡಿ, ವಿದ್ಯಾರ್ಥಿಗಳಿಗೆ ಕೊಡುವ ಈ ಸ್ಕಾಲರ್‌ಷಿಪ್‌ನ್ನು ಹೆಚ್ಚು ಮಾಡಿ, ಬೋರ್ಡಿಂಗ್, ಲಾಡ್ಜಿಂಗ್ ಫೆಸಿಲಿಟಿ ಕೊಡುವುದು ಮುಖ್ಯ. ಆದ್ದರಿಂದ ಇದನ್ನು ಈಗಲೇ ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ೨ ನೆಯದು, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರಕ್ಕೆ ಬಂದ ಹಣದಲ್ಲಿ ಈ ಯೋಜನೆ ಕೆಳಗೆ ಎಷ್ಟು ಹಣವನ್ನು ಲ್ಯಾಪ್ಸ್ ಮಾಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಏನು ಹೇಳಿದರು, ಅದರ ಪ್ರಕಾರ, ನಮ್ಮ ಇಲಾಖೆಯಲ್ಲಿ ಪ್ರತಿ ವರ್ಷ ಖರ್ಚು ಮಾಡಿರುವ ಅಂಕಿ ಅಂಶಗಳನ್ನು ಆನ್ಯುಯಲ್

ಪ್ಲಾನ್ ಔಟ್‌ಲೇ ನಲ್ಲಿ ಕೊಡಲಾಗಿದೆ. He has given those figures based on the total income of the Government. We have increased our expenditure. I have already given the Table.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಯಾವು ಯಾವುದಕ್ಕೆ ಎಷ್ಟೆಷ್ಟು ಪ್ರಯಾರಿಟಿ ಕೊಟ್ಟಿದ್ದೀರಿ ? ನಿಮ್ಮ ಹಿಂದಿನ ಪೀರಿಯಡ್ ಅಂದರೆ ೧೯೮೩–೮೪ ಅಥವಾ ೧೯೮೫–೮೬ಕ್ಕೆ ಹೋಲಿಸಿದರೆ ಈ ಎರಡು ವರ್ಷಗಳಲ್ಲಿ ಕಡಿಮೆಯಾಗಿದೆ ಎಂದು ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ಕಡಿಮೆಯಾಗಿಲ್ಲ, ಇನ್ನೂ ಜಾಸ್ತಿ ಯಾಗಿದೆ. You have arrived the figure out of the total income of the Government.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆನ್ಯುಯಲ್ ಪ್ಲಾನ್ ಔಟ್‌ಲೇ ಪ್ರಕಾರ, ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಯಾವರೀತಿ ಖರ್ಚು ಮಾಡಿದ್ದೀರಿ. ಎಸ್.ಸಿ, ಎಸ್.ಟಿ.ಗಳಿಗೆ ಹೋದಸಲ ಎಷ್ಟು ಖರ್ಚುಮಾಡಿದ್ದೀರಿ, ಹಿಂದಿನ ವರ್ಷಕ್ಕೂ ಈ ವರ್ಷಕ್ಕೂ ಇನ್ನೂ ಹೆಚ್ಚಿಗೆ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಹೆಚ್ಚುವರಿ ಹಣವನ್ನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಪಡೆಯ ಬೇಕೆಂದು ಬೇಕಾದರೆ ಹೇಳಿ ನೀವು ಮೊದಲು ಏನು ಖರ್ಚುಮಾಡಿದ್ದೀರಿ ಎನ್ನುವುದಲ್ಲ, ಕೊಡುವಂತಹ ಹಣವನ್ನು ಸರಿಯಾದ ಉದ್ದೇಶಕ್ಕಾಗಿ ಖರ್ಚು ಮಾಡಬೇಕು.

ಶ್ರೀ ಜಿ.ಬಸವಣ್ಣಪ್ಪ.–ಬೋರ್ಡಿಂಗ್ ಚಾರ್ಜಸ್ ಜಾಸ್ತಿಮಾಡಬೇಕೆಂದು ಹೇಳಿದ್ದಾರೆ, ಈ ವಿಚಾರ ದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬರಬೇಕಾಗಿದೆ, ಇದು ನಮ್ಮಿಬ್ಬರಲ್ಲೂ ಸಮನ್ವಯ ಆಗಬೇಕು. Our Government is at it.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.–You do it. What is the harm to enhance it when you are convinced that the funds given are insufficient to the students, ಇವತ್ತು ನೀವು ಎಷ್ಟೋ ಯೋಜನೆಗಳನ್ನು ಮಾಡುತ್ತೀರಿ, ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡುತ್ತೀರಿ. ಇವುಗಳಿಗೆಲ್ಲ ವರ್ಲ್ಡ್ ಬ್ಯಾಂಕ್ ಲೋನ್ ಬರುವವರೆಗೂ ಕಾಯು ವುದಿಲ್ಲ. Are you going to wait till the World Bank loan. You execute it. ಇಲ್ಲಿ ವಿದ್ಯಾರ್ಥಿಗಳಿಗೆ ಕೊಡತಕ್ಕ ಹಣ ಕಡಿಮೆ ಇದೆ. ಕೇಂದ್ರ ಸರ್ಕಾರದಿಂದ ಬರುವವರೆಗೂ ಕಾಯುವುದು ಸರಿಯಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಈ ಬಗ್ಗೆ ಆದಷ್ಟು ಬೇಗ ಮಾಡುತ್ತೇವೆ. ಮತ್ತೆ ಕೇಂದ್ರ ಸರ್ಕಾರ ದಿಂದ ಬಂದ ಹಣದಲ್ಲಿ ಎಷ್ಟು ಲ್ಯಾಪ್ಸ್ ಮಾಡಿದ್ದೀರಿ ಎಂದು ಕೇಳಿದಿರಿ. ೧೯೮೫–೮೬, ೧೯೮೬–೮೭ ಮತ್ತು ೧೯೮೭–೮೮ರಲ್ಲಿ ಕೇಂದ್ರದಿಂದ ಬಂದಿರತಕ್ಕ ಹಣದ ಅಂಕಿಅಂಶಗಳನ್ನು ಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಗೆ ವಿವಿಧ ಕಾರ್ಯಕ್ರಮಗಳಿಗೋಸ್ಕರ ಕೇಂದ್ರ ಸರ್ಕಾರವು ೧೯೮೫–೮೬ರಲ್ಲಿ ೧ ಕೋಟಿ ೬೮ ಲಕ್ಷ ರೂಪಾಯಿ ಮತ್ತು ವಿಶೇಷ ಘಟಕ ಯೋಜನೆಗಳಿಗೆ ೯ ಕೋಟಿ ೨೭ ಲಕ್ಷ ರೂಪಾಯಿಗಳು ಕೊಟ್ಟಿದೆ. ೧೯೮೬–೮೭ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ೩ ಕೋಟಿ ೧ ಲಕ್ಷ ರೂಪಾಯಿಗಳು ಮತ್ತು ವಿಶೇಷ ಘಟಕ ಯೋಜನೆಗೆ ೧೨ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ೧೯೮೭–೮೮ರಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ೧ ಕೋಟಿ ೪೭ ಲಕ್ಷ ರೂಪಾಯಿಗಳು ಮತ್ತು ವಿಶೇಷ ಘಟಕ ಯೋಜನೆಗೆ ೧೦ ಕೋಟಿ ೫೬ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. I have got detailed break-up. There is no lapse.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳುತ್ತಿರುವುದೇನೆಂದರೆ. ಕೇಂದ್ರ ಸರ್ಕಾರದವರು ಕೊಟ್ಟಂತಹ ಹಣದಲ್ಲಿ ಎಷ್ಟು ಲ್ಯಾಪ್ಸ್ ಮಾಡಿದ್ದೀರಿ? ಖರ್ಚು ಮಾಡದೇ ಉಳಿದಿದ್ದ ಹಣ ಎಷ್ಟು? ಅದನ್ನು ಟೋಟಲ್ ಆಗಿ ಹೇಳಿ?

ಶ್ರೀ ಜಿ. ಬಸವಣ್ಣಪ್ಪ.—ರಾಜ್ಯ ಸರ್ಕಾರದ ಹಣದಲ್ಲಿ ಮಾತ್ರ ಸ್ವಲ್ಪ ಲ್ಯಾಪ್ಸ್ ಮಾಡಲಾಗಿದೆ, ಆದರೆ, ಕೇಂದ್ರ ಸರ್ಕಾರದವರು ಕೊಟ್ಟಂಥ ಹಣದಲ್ಲಿ ನಾವು ಲ್ಯಾಪ್ಸ್ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಓದತಕ್ಕಂಥ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕೆ ಹಣ ಇಲ್ಲವೆಂದು ಹೇಳುತ್ತೀರಿ? ಲ್ಯಾಪ್ಸ್ ಏಕೆ ಮಾಡುತ್ತೀರಿ? ಒಟ್ಟು ಎಷ್ಟು ಹಣ ಲ್ಯಾಪ್ಸ್ ಮಾಡಿದ್ದೀರಿ?

ಮಕ್ಕಳಿಗೆ ಸ್ಕಾಲರ್‌ಶಿಪ್ ಹಣ ಕೊಡುವುದಕ್ಕೆ ಹಣ ಇಲ್ಲವೆಂದು ಹೇಳುವುದು, ಪ್ರಾವಿಷನ್ ಮಾಡಿದ ಹಣವನ್ನು ಲ್ಯಾಪ್ಸ್ ಮಾಡುವುದು.

ಶ್ರೀ ಜಿ. ಬಸವಣ್ಣೆಪ್ಪ.—ಅದರ ಬಗ್ಗೆ ನಾನು ಎಲ್ಲಾ ಫಿಗರನ್ನು ಕೊಡುತ್ತೇನೆ. The percentage of lapse during our period is much less.

ಶ್ರೀ ಎಸ್. ಆರ್. ಬೊಮ್ಮಾಯಿ —ನಿಮ್ಮ ಪಿರಿಯಡ್‌ನಲ್ಲಿ ಕೇಂದ್ರ ಸರ್ಕಾರ ಕೊಟ್ಟಂಥ ಹಣದಲ್ಲಿ ೧೭ ಕೋಟಿ ರೂಪಾಯಿ ಲ್ಯಾಪ್ಸ್ ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ೪೦ ಕೋಟಿ ರೂಪಾಯಿಗಳಷ್ಟು ಹಣವನ್ನು ಲ್ಯಾಪ್ ಮಾಡಿದ್ದೀರಿ.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ಕೇಳಿ,

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.-ಮಾನ್ಯ ಅಧ್ಯಕ್ಷರೇ, ಇವರು ೪೦ ಕೋಟಿ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು. ಶಾಲೆಯಲ್ಲಿ ಓದತಕ್ಕ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಪ್ರಾವಿಷನ್ ಮಾಡಿರತಕ್ಕ ಹಣವನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿರುತ್ತಾರೆ ಆದ್ದರಿಂದ, ನಾನು ಕೇಳುವುದೇನೆಂದರೆ, ಸ್ಕಾಲರ್‌ಶಿಪ್ ಈಗ ಏನು ಕೊಡುತ್ತಿದ್ದೀರೋ ಅದನ್ನು ಹೆಚ್ಚು ಮಾಡಬೇಕು. ಅದರ ಬಗ್ಗೆ You must declare in this House. This is our request,

SRI G. BASAVANNEPPA.—Regarding payment of boarding charges, scholarships. ಯಾವ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ನಾವು ತೊಂದರೆ ಕೊಟ್ಟಿಲ್ಲ. ವಿದ್ಯಾರ್ಥಿಗಳಿಗೆ ಪ್ರಯಾರಿಟಿ ಕೊಟ್ಟು ಕೆಲಸ ಮಾಡಿ ಇರತಕ್ಕ ತೊಂದರೆಯನ್ನು ಸರಿಪಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ೧೫೦ ರೂಪಾಯಿಗಳ ಸ್ಕಾಲರ್‌ಶಿಪ್‌ನ್ನು ಕೊಡುತ್ತೀದ್ದೀರಿ. ಅದು ಏನೇನೂ ಸಾಲದು. ಆದ್ದರಿಂದ ೩೦೦ ರೂಪಾಯಿಗಳಿಗೆ ಅದನ್ನು ಏರಿಸಿ.

ಶ್ರೀ ಜಿ. ಬಸವಣ್ಣೆಪ್ಪ.—ಎನ್‌ಹ್ಯಾನ್ಸ್ ಮಾಡಬೇಕಾದರೆ, ಕೇಂದ್ರ ಸರ್ಕಾರದ ಒಪ್ಪಿಗೆಯೂ ಸಹ ಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಮೇಲೆ ಮಾನ್ಯ ಮುಖ್ಯ ಮಂತ್ರಿಯವರು ಹೋದಸಲ ಹರಿಜನರ ಮೇಲೆ ಅಟ್ರಾಸಿಟಿ ಮಾಡಿದವರ ಮೇಲೆ ಪ್ಯೂನಿಟಿ ಫೈನ್ (ದಂಡುಗಂದಾಯ) ಹಾಕುವುದಕ್ಕೆ ಒಂದು ಅಮೆಂಡ್‌ಮೆಂಟ್‌ನ್ನು ಈ ಸೆಷನ್‌ನಲ್ಲೇ ತರಲಾಗುತ್ತದೆಂದು ಹೇಳಿದ್ದರು. ಅದರ ಬಗ್ಗೆ ಏನಾಯಿತೆಂದು ತಾವು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.-ಅದರ ಬಗ್ಗೆ ಲಾ ಡಿಪಾರ್ಟ್‌ಮೆಂಟಿನಲ್ಲಿ ಚರ್ಚೆಯಾಗುತ್ತಿದೆ. ಪೋಲೀಸ್ ಮ್ಯಾನ್ಯುಯಲ್‌ನಲ್ಲಿ ಇದರ ಬಗ್ಗೆ ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಅನೇಕ ಪ್ರೋಗ್ರಾಮ್‌ಗಳನ್ನು ಜಿಲ್ಲಾ ಪರಿಷತ್ತುಗಳಿಗೆ ಟ್ರಾನ್ಸ್‌ಫರ್ ಮಾಡಿದ ಮೇಲೆ, ಏನಾದರೂ ವಸ್ತುಗಳನ್ನು ಕೊಂಡುಕೊಳ್ಳಬೇಕಾಗಿದ್ದರೆ ಹೋಲ್‌ಸೆಲ್ ಡೀಲರ್‌ಗಳ ಮುಖಾಂತರ ಕೊಂಡುಕೊಳ್ಳಬೇಕೆಂಬ ನಿಯಮವನ್ನು ಹಾಕಿದ್ದರೂ ಕೂಡ, ಜಿಲ್ಲಾಪರಿಷತ್ತಿನವರು ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ ಪ್ರೈವೇಟ್ ಪರ್ಸನ್‌ಗಳಿಂದ ಟೆಂಡರ್ ಕರೆದು ಕೊಂಡುಕೊಳ್ಳುತ್ತಿದ್ದಾರೆ. ಈ ವಿಷಯ ಮಾನ್ಯ ಮಂತ್ರಿಯವರ ಗಮನಕ್ಕೆ ಬಂದಿದೆಯೋ? ಇನ್ನು ಎರಡನೆಯದಾಗಿ ವುಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ? ಆಮೇಲೆ ಐ.ಸಿ.ಡಿ.ಎಸ್ ಪ್ರೋಗ್ರಾಮ್ ಮೂಲಕ ನಮ್ಮ ರಾಜ್ಯದ ೧೬ ಜಿಲ್ಲೆಗಳಲ್ಲಿ ಮಕ್ಕಳ ಆರೋಗ್ಯ ನೋಡಿಕೊಳ್ಳುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿರುವ ಪೋಲೆನಪಳ್ಳಿ ಗ್ರಾಮದಲ್ಲಿ ೧೮ ಮಕ್ಕಳು ಮೃತಪಟ್ಟವು. ಈ ಮಕ್ಕಳು ಮೃತಪಟ್ಟಿರುವುದಕ್ಕೆ ಕಾರಣ ಏನು? ಐ.ಸಿ.ಡಿ.ಎಸ್. ಪ್ರೋಗ್ರಾಮ್‌ನಲ್ಲಿ ಇಂಪ್ಲಿಮೆಂಟ್ ಮಾಡುವುದರಲ್ಲಿ ಏನಾದರೂ ವ್ಯತ್ಯಾಸ ಆಗಿದೆಯೇ? ಮಾಲ್ ನ್ಯೂಟ್ರಿಷನ್ ಕೊಟ್ಟಿರುವವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ ಸಮಗ್ರ ಬಾಲವಿಕಾಸ ಯೋಜನೆಯಲ್ಲಿ ಕೊಡುವ ಫುಡ್ ಗ್ರೈನ್ಸ್‌ನ್ನು ಸರಬರಾಜು ಮಾಡತಕ್ಕಂಥಾದ್ದು ಟಿ. ಎ. ಪಿ. ಎಂ. ಸಿ. ಮತ್ತು ಜನತಾ ಬಜಾರುಗಳ ಮುಖಾಂತರ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದರೂ ಸಹ ಕೆಲವು ಕಡೆ ಟೆಂಡರ್ ಕರೆದು ಪ್ರೈವೇಟ್ ಏಜೆನ್ಸಿಗಳನ್ನು ಫಿಕ್ಸ್ ಮಾಡಿರುವುದನ್ನು ಮಾನ್ಯ ಸದಸ್ಯಣೀಯವರು ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ತೆಗೆದುಕೊಂಡಿದೆ. ಎರಡನೆಯದಾಗಿ, ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸಂಬಂಧಪಟ್ಟಂತಹ ಸ್ಕೀಮ್ಸನ್ನು ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಮಾಡುವುದಕ್ಕೆ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ ಮತ್ತು ಮಧುಗಿರಿಯಲ್ಲಿ೧೪-೧೫ ಜನ ಮಕ್ಕಳು ಸತ್ತ ಬಗ್ಗೆ ಆರೋಗ್ಯ ಇಲಾಖೆಯವರು ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರುಏನು ಪ್ರಸ್ತಾಪ ಮಾಡಿದರೋ ಅದೇ ನನ್ನ ಅಭಿಪ್ರಾಯ ಕೂಡ. ನಾನು ಮಾತನಾಡುವಾಗಲೂ ಸಹ ಆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ತಾವು ಎಷ್ಟೆಷ್ಟು ಹಣ ಯಾವ ಯಾವ ವರ್ಷದಲ್ಲಿ ಒದಗಿಸಿದ್ದೀರಿ ಎನ್ನುವುದನ್ನೂ ಸಹ ನಾನು ಪ್ರಸ್ತಾಪ ಮಾಡಿದ್ದೇನೆ. ಆದರೆ ತಾವು ಉತ್ತರ ಕೊಡುವಾಗ ಅವುಗಳೆಲ್ಲವನ್ನೂ ಬಿಟ್ಟು ವೇಗ್ ಆಗಿ ಉತ್ತರ ಕೊಟ್ಟಿದ್ದೀರಿ. ಟೋಟಲ್ ಸ್ಟೇಟ್ ಎಕ್ಸ್‌ಪೆಂಡೀಚರ್ ಎಷ್ಟಾಗಿದೆಎಂದರೆ ೧೨೫೪ ಲಕ್ಷ ರೂಪಾಯಿಗಳು ಮಾತ್ರ ಒಟ್ಟು ಒದಗಿಸಿದ ಹಣ ೩೧೧೬ ಲಕ್ಷ ರೂಪಾಯಿಗಳು. ಇಲ್ಲಿ ಹಣ ಲ್ಯಾಪ್ಸ್ ಆಗಿದೆ. ತಾವು ಸೋಷಿಯಲ್ ಸರ್ವೀಸಸ್‌ಗೆ, ವೆಲ್‌ಫೇರ್ ಸರ್ವೀಸಸ್‌ಗೆ ವೆಲ್‌ಫೇರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ವೆಲ್‌ಫೇರ್ ಆಫ್ ಟ್ರೈಬ್ಸ್‌ಗೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎನ್ನುವುದನ್ನು ನಾನು ಹೇಳಿದ್ದೇನೆ ಮತ್ತು ತಾವು ೧೯೮೩-೮4ನೇ ಇಸವಿಯಲ್ಲಿ ನಾವೆಷ್ಟು ಖರ್ಚು ಮಾಡಿದ್ದೇವೆನ್ನುವ ಬಗ್ಗೆ ಮಾತ್ರ ಹೇಳುತ್ತಿದ್ದೀರಿ ತಾವು ಖರ್ಚು ಮಾಡಿದ್ದು ಹೇಳಲಿಲ್ಲ. ತಾವು ೧೯೮೮-೮೯ನೇ ಸಾಲಿನಲ್ಲಿ ೧೭೫೦ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ ಇದು ಶೇಕಡ ೩.೪೬ ಆಗುತ್ತದೆ. ಆಮೇಲೆ ವೆಲ್‌ಫೇರ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ೮೫೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ ಇದು ೦.೫೧ ಆಗುತ್ತದೆ ವೆಲ್‌ಫೇರ್ ಆಫ್ ಟ್ರೈಬ್ಸ್‌ಗೆ ೨೮೪ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ವರ್ಷ ತಾವೆಷ್ಟು ಖರ್ಚು ಮಾಡುತ್ತೀರಿ ಎನ್ನುವುದನ್ನು ತಾವು ಇಲ್ಲಿ ಹೇಳಬೇಕು. ತಾವು ಒಟ್ಟು ಈ ಸೋಷಿಯಲ್‌ವೆಲ್ ಫೇರ್‌ಗೆ ಇಟ್ಟಿರುವುದು ೧೭೫೦ ಲಕ್ಷ ರೂಪಾಯಿಗಳು ಮಾತ್ರ. ಇದರಲ್ಲಿ ನೇರವಾಗಿ ಬ್ಯಾಕ್‌ವರ್ಡ್ ಕ್ಲಾಸ್ಸ್‌ಗೆ ಎಷ್ಟು ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಎಷ್ಟೆಷ್ಟು ? ಇದನ್ನು ಹೇಳಿಲ್ಲ. ಮತ್ತು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗಿರುವಂತಹ ಡ್ರಾಪ್ ಔಟ್ಸ್ ಎಷ್ಟು ಎಂದು ಸಹ ನಾನು ಹೇಳಿದ್ದೇನೆ. ೬ ವರ್ಷದಿಂದ ೧೩ ವರ್ಷ ೧೩ ವರ್ಷದಿಂದ ೧೫ ವರ್ಷಗಳವರೆವಿಗೆ. ನಮ್ಮ ಒಟ್ಟು ಪಾಪ್ಯುಲೇಷನ್ ಪ್ರಕಾರ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರು ಸುಮಾರು ೨೭ ಲಕ್ಷ ಜನರಿದ್ದಾರೆ. ಇವರೆಲ್ಲಾ ಶಾಲೆಗಳಿಗೆ ಬರತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ಪ್ರೀ ಮೆಟ್ರಿಕ್ ಪೋಸ್ಟ್‌ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಲಭ್ಯ, ಸ್ಕಾಲರ್‌ಷಿಪ್ ಸೌಲಭ್ಯ ದೊರೆಯುತ್ತಿರುವುದು ಸುಮಾರು ನಾಲ್ಕೂವರೆ ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ. ಇನ್ನುಳಿದ ವಿದ್ಯಾರ್ಥಿ ಗಳ ಬಗ್ಗೆ ಸರ್ಕಾರ ಏನೇನು ಕಾರ್ಯಕ್ರಮ ಕೈಗೊಂಡಿದೆ ? ಒಟ್ಟು ಸುಮಾರು ೨೭ ಲಕ್ಷ ಜನರು ಶಾಲೆಗೆ ಹೋಗಲಾರದ ಪರಿಸ್ಥಿತಿಯಲ್ಲಿದ್ದಾರೆ. ಇವತ್ತು ಸರಿಯಾಗಿ ಹಾಸ್ಟಲ್ ಸೌಲಭ್ಯವಿಲ್ಲ ಸ್ಕಾಲರ್‌ಷಿಪ್ ಸೌಲಭ್ಯವಿಲ್ಲ ಇವೆಲ್ಲಾ ನಾವು ಪ್ರಸ್ತಾಪ ಮಾಡಿದ್ದೆವು, ಅದಕ್ಕೆ ತಾವು ಉತ್ತರ ಹೇಳಲಿಲ್ಲ ಮೂರನೇಯದಾಗಿ ಸ್ಕ್ಯಾವೆಂಜರ್ಸ್ ಬೆಳಗಾಂ, ಗೋಕಾಕ್, ಬಾಗಲಕೋಟ್ ಇಂತಹ ಕಡೆಗಳಲ್ಲಿ ಇನ್ನೂ ತಲೆಯ ಮೇಲೆ ಮಲ ಹೊತ್ತು ಹಾಕತಕ್ಕಂಥಾದ್ದು ಇದೆ ಇದರ ಬಗ್ಗೆ ತಾವೇನು ಕ್ರಮ ಕೈಗೊಂಡಿದ್ದೀರಿ ? ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಹಾಗೆ ಹರಿಜನ ಮತ್ತು ಗಿರಿಜನರ ಮೇಲೆ ನಡೆಯುವ ದೌರ್ಜನ್ಯಗಳ ಬಗ್ಗೆ ಒಂದು ಕಾನೂನು ತರುತ್ತೇವೆಂದು ಹೇಳಿದಿರಿ ಅದು ಏನಾಯಿತು ? ಈಗ ಡಿ ಐ. ಜಿ ಲೆವೆಲ್‌ನಲ್ಲಿ ಒಂದು ಸಂಸ್ಥೆ ಇದೆ, ಅವಕ್ಕೆ ಸುಮಾರು ೩೪-೩೫ ಲಕ್ಷ ರೂಪಾಯಿಗಳನ್ನು ತಾವು ಖರ್ಚು ಮಾಡುತ್ತಿದ್ದೀರಿ ? ಆದರೆ ಆ ಸಂಸ್ಥೆಯಿಂದ ಈ ವರ್ಗದ ಜನರಿಗೆ ಯಾವ ಅನುಕೂಲವೂ ಇಲ್ಲ. ಎಷ್ಟು ಕೇಸುಗಳನ್ನು ಪತ್ತೆ ಮಾಡಿದ್ದಾರೆ ? ಎಷ್ಟು ಜನರ ವಿರುದ್ಧ ಮೊಕದ್ದಮೆಗಳನ್ನು ಕೋರ್ಟಿನಲ್ಲಿ ಹಾಕಿದ್ದಾರೆ ? ಈ ಬಗ್ಗೆ ತಾವೇನನ್ನು ತಿಳಿಸಿಲ್ಲ. ಇನ್ನು ಹಾವನೂರು ನೇತೃತ್ವದಲ್ಲಿ ಒಂದು ಹಿಂದುಳಿದ ವರ್ಗಗಳ ಸಮಿತಿಯನ್ನು ನೇಮಕ ಮಾಡಿದ್ದು

ಅವರ ವರದಿ ಪ್ರಕಾರ ಈ ವರ್ಗದ ಜನರಿಗೆ ವಿದ್ಯಾ ಸೌಲಭ್ಯ ಇತ್ತು, ಹಾಸ್ಟಲ್ ಸೌಲಭ್ಯವಿತ್ತು, ಸೌಲಭ್ಯವಿತ್ತು ಸ್ಕಾಲರ್‌ಷಿಪ್ ಈ ಬಗ್ಗೆ ಸರ್ಕಾರ ಏನೇನು ಕ್ರಮ ತೆಗೆದುಕೊಂಡಿದೆ ? ಈಗ ಬ್ಯಾಕ್ ವರ್ಡ್ ಕ್ಲಾಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ನೇಮಕ ಮಾಡಿದ್ದೀರಿ. ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದೀರಿ. ಮತ್ತು ಈಗ ಮೂರನೇ ಹಿಂದುಳಿದ ವರ್ಗಗಳ ಆಯೋಗವನ್ನು ರಚನೆ ಮಾಡಿದ್ದೀರಿ. ಅವರಿಗೆ ಸರ್ಕಾರದವರು ಸರಿಯಾದ ಟರ್ಮ್ಸ್ ಆಫ್ ರೆಫರೆನ್ಸ್ ಕೊಡಬೇಕು. ಮೊದಲನೇ ಕಮಿಷನ್ ಆಯಿತು, ಎರಡನೇ ಕಮಿಷನ್ ಆಯಿತು ಈಗ ಮೂರನೇ ಕಮಿಷನ್ ನೇಮಕ ಮಾಡಿದ್ದೀರಿ ಅವರು ಸರಿಯಾದ ವರದಿಯನ್ನು ಸರ್ಕಾರಕ್ಕೆ ಕೊಡುವಂತಾಗಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು,

ಶ್ರೀ **ಜಿ.** ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ನಾನು ಉತ್ತರ ಕೊಡುವಾಗ ಇರಲಿಲ್ಲ. ನಾನು ಅವರ ಭಾಷಣದ ಮೇಲೆ ಮೊದಲು ಉತ್ತರ ಕೊಟ್ಟಿದುದ್ದು. ಅವರು ಕೊಟ್ಟ ಅಂಕಿ ಅಂಶಗಳ ಪ್ರಕಾರ ನಾನು ಡಿಪಾರ್ಟ್‌ಮೆಂಟ್ ವೈಸ್ ಫಿಗರ್ಸ್ ಕೊಟ್ಟಿದ್ದೇನೆ ಅವರ ಕಾಲಕ್ಕಿಂತ ನಾವೀಗ ಇನ್‌ಕ್ರೀಜ್ ಮಾಡಿದ್ದೇವೆ.

ಶ್ರೀ ಧರ್ಮಸಿಂಗ್.—ನಾವು ಸದನದಲ್ಲಿ ಹೇಳಬೇಕಾದರೆ ನೀವು ಕೊಟ್ಟಂಥ ಫಿಗರ್ಸ್‌ಗಳ ಆಧಾರ ಮೇಲೆಯೇ ಹೇಳುವುದು.

ಶ್ರೀ ಜಿ. ಬಸವಣ್ಣಪ್ಪ.—ಅದರ ಬಗ್ಗೆ ಆ್ಯಕ್ಚುಯಲ್ ಆಗಿ ನಾನು ಹೇಳುತ್ತೇನೆ. ಎರಡನೆಯದಾಗಿ ಇನ್ನೂ ಕೆಲವು ಭಾಗದಲ್ಲಿ ಮಲ ಹೊರುವ ಪದ್ಧತಿ ಇದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಎರ್‍ಯಾಡಿಕೇಟ್ ಮಾಡುವುದಕ್ಕೆ ಎಸ್. ಸಿ. ಎಸ್. ಟಿ. ಡೆವಲಪ್‌ಮೆಂಟ್ ಬೋರ್ಡ್ ಮೂಲಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಮೂರನೆಯದಾಗಿ ಬ್ಯಾಕ್‌ವರ್ಡ್ ಕಮೀಷನ್‌ನವರು ಮಾಡಿರುವ ರೆಕಮೆಂಡೇಷನ್ ಪ್ರಕಾರ ನಾವು ೧೧ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಮಾಡಿದ್ದೇವೆ. ಏನೇನು ಮಾಡಿದ್ದೇವೆ ಎಂಬುದನ್ನು ಓದಿ ಹೇಳಿ ಎಂದರೆ ಅದನ್ನು ಓದುತ್ತೇನೆ.

ಶ್ರೀ ಧರ್ಮಸಿಂಗ್.—ಆ ರೆಕಮೆಂಡೇಷನ್‌ಗಳು ನನಗೂ ಗೊತ್ತು. ಹಾವನೂರ್ ರೆಕಮೆಂಡೇಷನ್ ಮೇಲೆ ನೀವು ಏನೇನು ಮಾಡಿದ್ದೀರಿ ?

SRI G. BASAVANNEPPA.—Till 30th October 1986, the recommen dations of Havanur Commission were implemented.

ಶ್ರೀ ಧರ್ಮಸಿಂಗ್.—ಆಗಿನ ಮುಖ್ಯಮಂತ್ರಿಯಾಗಿದ್ದ ದೇವರಾಜ್ ಅರಸರು ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್‌ನ್ನು ಮಾಡಿದರು. ಈ ಕಾರ್ಪೊರೇಷನ್‌ಗೆ ನಿಮ್ಮ ಸರ್ಕಾರ ಬಂದ ಮೇಲೆ ಪ್ರತಿ ವರ್ಷ ಎಷ್ಟೆಷ್ಟು ಹಣವನ್ನು ಒದಗಿಸಿದ್ದೀರಿ ಎಂಬುದರ ಬಗ್ಗೆ ತಾವು ಹೇಳಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ನಾನು ಪ್ರತಿಯೊಂದರ ಬಗ್ಗೆಯೂ ಹೇಳಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರನ್ನು ಒಂದು ವಿಷಯ ಕೇಳುತ್ತೇನೆ. ಎಸ್. ಸಿ. ಎಸ್. ಟಿ.. ರಿಸರ್ವೇಷನ್ ಏನು ಇದೆಯೋ ಅದು ಬಹಳ ಇಂಪಾರ್ಟೆಂಟ್. ಬೇರೆ ಜನಾಂಗದವರನ್ನೂ ಎಸ್. ಸಿ.ಗಳ ಗುಂಪಿಗೆ ಸೇರಿಸುತ್ತಿರುವುದು ಸರಿಯಲ್ಲ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ "ಬೇಡ" "ಮತ್ತು" ಜಂಗಮ "ಜಾತಿಯವರೂ ಸಹ ಎಸ್. ಸಿ. ಜನಾಂಗಕ್ಕೆ ಸೇರಿದವರೆಂದು ಸರ್ಟಿಫಿಕೇಟ್‌ಗಳನ್ನು ಕೊಡಲಾಗುತ್ತಿದೆ. "ಬೇಡ" ಮತ್ತು "ಜಂಗಮ" ಜನಾಂಗದವರನ್ನು ಎಸ್. ಸಿ. ಯವರೆಂದು ತಾವು ಒಪ್ಪಿಕೊಳ್ಳುತ್ತೀರಾ ?

ಹೀಗೆ ಎಲ್ಲರೂ ನಾವು ಎಸ್.ಸಿ. ಜನಾಂಗಕ್ಕೆ ಸೇರಿದವರೆಂದು ಬಂದರೆ ನಿಜವಾದ ಎಸ್.ಸಿ.ಯವರು ಎಲ್ಲಿಗೆ ಹೋಗಬೇಕಾಗುತ್ತದೆ? ಮಾನ್ಯ ದೇವರಾಜ್ ಅರಸರ ಕಾಲದಲ್ಲಿ ಬೋವಿ ಮತ್ತು ಬಂಜಾರ ಜನಾಂಗದವರೂ ಕೂಡ ಎಸ್.ಸಿ.ಯವರೆಂದು ಹೇಳಿಕೊಂಡು ಎಸ್.ಸಿ. ಗುಂಪಿಗೆ ಬರುವ ಹಾಗೆ ಮಾಡಿಕೊಂಡುಬಿಟ್ಟರು. ಬೇರೆ ಬೇರೆ ಜನಾಂಗದವರು ಎಸ್.ಸಿ. ಯವರೆಂದು ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸಕ್ಕೆ ಸೇರಿರುವುದರಿಂದ ನಿಜವಾದ ಎಸ್ ಸಿ. ಜನಾಂಗದವರಿಗೆ ಕೆಲಸ ಸಿಗುವುದು ಕಡಿಮೆಯಾಗಿದೆ. ಪ್ರಮೋಷನ್‌ನಲ್ಲಿ ಕೂಡ ನಿಜವಾದ ಎಸ್.ಸಿ.ಯವರಿಗೆ ತೊಂದರೆಯಾಗುತ್ತಿದೆ. ಇದರ ಬಗ್ಗೆ

ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು, ಆಮೇಲೆ ಎಸ್.ಸಿ. ಜನಾಂಗದವರಿಗೆ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಸೆಂಟ್ರಲ್ ಗೌರ್ನಮೆಂಟ್‌ನವರು ಹಣ ಕೊಡುತ್ತಾರೆ. ನಮ್ಮ ಷಹಬಾದ್‌ನಲ್ಲಿ ಈ ತರಹ ಒಂದು ಹಾಸ್ಟೆಲ್‌ನ್ನು ಕಟ್ಟಲಾಗಿದೆ, ಫರೀದಾಬಾದ್‌ನಲ್ಲೂ ಒಂದು ಹಾಸ್ಟೆಲ್ ಕಟ್ಟುವ ಬಗ್ಗೆ ಒಂದು ಕಾರ್ಯಕ್ರಮ ಇತ್ತು. ಅದರ ಬಗ್ಗೆ ಏನಾಗಿದೆ ಎಂಬುದನ್ನು ಹೇಳಬೇಕು. ಆಮೇಲೆ ಮಾನ್ಯ ಖರ್ಗೆಯವರು ಹಾಸ್ಟೆಲ್‌ನಲ್ಲಿ ಓದತಕ್ಕ ಮಕ್ಕಳಿಗೆ ಹೆಚ್ಚು ಸ್ಕಾಲರ್‌ಷಿಪ್ ಕೊಡಬೇಕೆಂಬುದರ ಬಗ್ಗೆ ಹೇಳಿದ್ದಾರೆ, ನಾನೂ ಸಹ ಹೇಳುತ್ತಿದ್ದೇನೆ. ಓದತಕ್ಕ ಮಕ್ಕಳಿಗೆ ಸ್ಕಾಲರ್ ಶಿಪ್‌ನ್ನು ಹೆಚ್ಚು ಕೊಡಿ. ಆಮೇಲೆ ಈಗಾಗಲೇ ಪ್ರೈವೇಟ್‌ನವರು ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದಾರೆ, ಈ ಪ್ರೈವೇಟ್ ಹಾಸ್ಟೆಲ್‌ಗಳನ್ನು ಸರ್ಕಾರವೇ ತೆಗೆದುಕೊಂಡು ನಡೆಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ?

ಶ್ರೀ ಜಿ. ಬಸವಣ್ಣೆಪ್ಪ.— ಮಾನ್ಯ ಶಾಣಪ್ಪನವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸಿಕ್ಕುವ ಸೌಲಭ್ಯವನ್ನು ಇತರೆಯವರು ಪಡೆಯುತ್ತಿದ್ದಾರೆಂದು ಹೇಳಿದ್ದಾರೆ. ಆರ್ಟಿಕಲ್ ೩೪೧ ಮತ್ತು ೩೪೨ರ ಪ್ರಕಾರ ನಮ್ಮ ರಾಷ್ಟ್ರಾಧ್ಯಕ್ಷರು ಪರಿಶಿಷ್ಟ ಜಾತಿ ಮತ್ತು ವರ್ಗದವರ ಲಿಸ್ಟನ್ನು ಅನುಮೋದಿಸಿದ್ದಾರೆ. ಲಿಸ್ಟ್‌ನಲ್ಲಿ ಬರುವ ಜಾತಿಯವರ ಬಗ್ಗೆ ಯಾಗೂ ಪ್ರಶ್ನೆ ಮಾಡುವಂತಿಲ್ಲ, ರಾಜ ಸರ್ಕಾರವು ಇಷ್ಟ ಬಂದ ಹಾಗೆ ಈ ಲಿಸ್ಟ್‌ನಲ್ಲಿ ಬೇರೆ ಬೇರೆ ಜಾತಿಯವರನ್ನು ಸೇರಿಸುವುದಕ್ಕಾಗುವುದಿಲ್ಲ. ರಾಷ್ಟ್ರಾಧ್ಯಕ್ಷರ ಅನುಮೋದನೆ ಈ ಲಿಸ್ಟ್‌ಗೆ ದೊರಕಿರುವುದರಿಂದ ಆ ಲಿಸ್ಟ್‌ನಲ್ಲಿ ಯಾವ ಯಾವ ಜಾತಿಯವರು ಬರುತ್ತಾರೋ ಅವರೆಲ್ಲಾ ಸರ್ಕಾರದ ಅನುಕೂಲಗಳನ್ನು ಪಡೆಯುವುದಕ್ಕೆ ಅರ್ಹ ರಾಗಿರುತ್ತಾರೆ. ಪರಿಶಿಷ್ಟ ಜಾತಿಗೆ ೧೦೧ ಜನಾಂಗದವರು ಸೇರಿದ್ದಾರೆ. ಪರಿಶಿಷ್ಟ ವರ್ಗದಲ್ಲಿ ೪೯ ಜನಾಂಗದವರು ಸೇರಿದ್ದಾರೆ. ಈ ಜನಾಂಗದವರು ಲಿಸ್ಟ್‌ನಲ್ಲಿ ಸೇರಿರುವುದರಿಂದ ಅವರಿಗೆ ರೈಟ್ಸ್ ಇದೆ. ಯಾರಾದರೂ ಬೇರೆಜಾತಿಯವರು ಈ ಜಾತಿಯವರಿಗೆ ಕೊಡುವ ಸೌಲಭ್ಯವನ್ನು ದುರುಪಯೋಗಪಡಿ ಕೊಂಡರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ.ಬಿ. ಶಾಣಪ್ಪ.— ಬೇಡ ಜಂಗಮ ಎನ್ನುವವರನ್ನು ಈ ಲಿಸ್ಟ್‌ನಲ್ಲಿ ಆ್ಯಡ್ ಮಾಡುತ್ತೀರಾ? If he gets a certificate and if he contests from the Reserved Constituency, as Scheduled Caste, where we stand? If they are contesting from the entire areas in the State, then no Scheduled Caste candidate will contest from the Reserved Constituency tomarrow.

ಶ್ರೀ ಜಿ. ಬಸವಣ್ಣೆಪ್ಪ.— ಯಾವ ಜಾತಿಯವರನ್ನು ಎಸ್.ಸಿ. ಎಂದು ಅನುಮೋದಿಸ ಲಾಗಿದೆಯೋ ಅವರುಗಳಿಗೆ ಮಾತ್ರ ಅನುಕೂಲಗಳು ಸಿಗುತ್ತವೆ. ಇವರ ಹೆಸರನ್ನು ಹೇಳಿಕೊಂಡು ಬೇರೆಯವರು ದುರುಪಯೋಗ ಮಾಡಿಕೊಂಡರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನ್ಯಾಯಾಲಯಗಳು ಇವೆ.

ಶ್ರೀ ಕೆ. ಹೆಚ್. ಪಾಟೀಲ್.— ಇಂಥವರು ದುರುಪಯೋಗ ಮಾಡಿಕೊಂಡಿದ್ದಾರೆಂದು ಫ್ಯಾಕ್ಟ್ಸ್ ಇಟ್ಟಿದ್ದಾರೆ. ಅದರ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ. ಬಸವಣ್ಣೆಪ್ಪ.— ಜಾತಿಗಳ ಬಗ್ಗೆ ದುರುಪಯೋಗ ಹೇಗೆ ಆಗಿದೆ ಎಂಬ ಬಗ್ಗೆ ಸದನದಲ್ಲಿ ಸವಿಸ್ತಾರವಾಗಿ ಚರ್ಚೆಯಾಗಿದೆ. ಇಂಥ ಪ್ರಕರಣಗಳು ೧೧೦೦೦ ಇವೆ ಎಂದು ಗೊತ್ತಾಗಿದೆ. ಅವುಗಳಲ್ಲಿ ೮೩೦ ಜನರು ಬೋಗಸ್ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡು ಲಾಭ ಪಡೆದಿದ್ದಾರೆಂದು ಚರ್ಚೆ ಯಾಗಿದೆ. ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೇ ಹೊರತು ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಹೇಳಿದ ಈ ಬೇಡ ಮತ್ತೆ ಜಂಗಮ ಎಂಬ ಜಾತಿಗಳು ಎಸ್.ಟಿ. ಲಿಸ್ಟ್‌ನಲ್ಲಿವೆ.

SRI K.B. SHANAPPA.— He has contested as SC in Gulbarga for Z.P. and that fellow has won the election.

SRI G. BASAVANNAPPA.— Beda Jangama is in ST list.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಧ್ಯೆ ಪ್ರವೇಶ ಮಾಡುತ್ತಿರುವುದಕ್ಕೆ ಕ್ಷಮಿಸಬೇಕು. ಅಧ್ಯಕ್ಷರೆ. ನಾವು ಪದೇ ಪದೇ ಅಮೆಂಡ್‌ಮೆಂಟ್ ತಂದಾಗ, ನೀವು, ನಾವು ತರುತ್ತೇವೆ ನಾವೇ ತರುತ್ತೇವೆ ಎಂದು ಹೇಳಿದ್ದೀರಿ. ಈಗ ಜಿಲ್ಲಾ ಪರಿಷತ್ತಿನಲ್ಲಿ ಏನಿದೆ ಅಂದರೆ ಎಸ್.ಸಿ. ಅಥವಾ ಎಸ್.ಟಿ. ಎಂದು ಇದೆ. 35% can contest in 15% SC seats. That is anomaly. ವಿಷಯವನ್ನು ನಿಮ್ಮ ಮುಂದೆ ತಂದಿದ್ದಕ್ಕೆ ಏನೂ ಪ್ರಯೋಜನವಾಗಲಿಲ್ಲ. ಒಂದು ವರ್ಷ ಆಯಿತು. ತಾವುಗಳು ಆ ಬಗ್ಗೆ ಇನ್ನೂ ಅಮೆಂಡ್‌ಮೆಂಟ್ ತರುತ್ತಾ ಇಲ್ಲ. Basically you want to discourage the SC people.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಸದಸ್ಯರುಗಳಾದ ಖರ್ಗೆಯವರು ಮತ್ತು ಶಾಣಪ್ಪನವರು ಸರಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತಂದಿದ್ದಾರೆ. ಅವುಗಳ ಬಗ್ಗೆ ಸರಕಾರ ವಿಚಾರ ಮಾಡುತ್ತದೆ.

ಶ್ರೀ ಡಿ.ಟಿ. ಜಯಕುಮಾರ್.— ಮಾನ್ಯ ಅಧ್ಯಕ್ಷರೆ, ಯಾವುದೇ ಸರಕಾರ ಬರಲಿ, ಈ ನಮ್ಮ ಹಿಂದುಳಿದ ವರ್ಗಗಳ ಒಂದು ಪರಿಸ್ಥಿತಿಯು ಯಾವಾಗಲೂ ತ್ರಿಶಂಕು ಪರಿಸ್ಥಿತಿಯಾಗಿರುತ್ತದೆ. ಮೇಲ್ಜಾತಿಯವರಿಗೆ ತಮ್ಮದೇ ಆದಂಥ ಒಂದು ರಕ್ಷಣೆ ಇರುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಸಂವಿಧಾನಾತ್ಮಕ ರಕ್ಷಣೆ ಇದೆ, ಆದರೆ ಇವೆರಡರ ಮಧ್ಯೆ ಇರತಕ್ಕಂಥ ಹಿಂದುಳಿದ ವರ್ಗಗಳವರು ಏನಿದ್ದಾರೆ, ಅವರಿಗೆ ಮಾತ್ರ ಯಾವಾಗಲೂ ತ್ರಿಶಂಕು ಪರಿಸ್ಥಿತಿ ಇರುತ್ತದೆ. ನಮ್ಮ ಹಾವನೂರು ಮತ್ತು ವೆಂಕಟಸ್ವಾಮಿ ವರದಿಗಳು ಪಟ್ಟಭದ್ರ ಹಿತಾಸಕ್ತಿಗಳಿಗೆ ಸಿಕ್ಕಿ ಮೂಲೆಗುಂಪಾದುವು. ಅದೇ ರೀತಿಯಲ್ಲಿ ಇವೊತ್ತು ಇನ್ನೊಂದು ಏಕಸದಸ್ಯ ಆಯೋಗವನ್ನು ಮಾಡಿದ್ದೀರಿ. ಅದಕ್ಕೆ ತನ್ನ ವರದಿಯನ್ನು ಸಲ್ಲಿಸಲು ಎಲ್ಲಿಯವರೆಗೆ ವೇಳೆಯನ್ನು ಕೊಟ್ಟಿದ್ದೀರಿ, ಅವರ ಒಂದು ತೀರ್ಮಾನವು ಈ ಪಟ್ಟಭದ್ರಹಿತಾಸಕ್ತಿಗಳಿಗೆ ಹೊರತಾಗಿ ಕಾರ್ಯರೂಪಕ್ಕೆ ಬರುತ್ತದೆಯೋ? ನಿಜವಾಗಿಯೂ ಸರಕಾರಕ್ಕೆ ಈ ವರ್ಗಗಳ ಕಲ್ಯಾಣದ ಬಗ್ಗೆ ಮನಸ್ಸು ಇದೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವಲ್ಲಿ ಏಕೋ ಸ್ವಲ್ಪ ತೊಂದರೆಗಳು ಬರುತ್ತಿವೆ. ಅದನ್ನು ದಯವಿಟ್ಟು ಸೂಕ್ತ ರೀತಿಯಲ್ಲಿ ಜಾರಿಗೊಳಿಸಬೇಕು. ಇನ್ನು ಎರಡನೆಯದು ಇವೊತ್ತು ಸರಕಾರದವರು ಒಂದು ನಿರ್ದಿಷ್ಟವಾದ ಆದೇಶವನ್ನು ನೀಡಿದ್ದಾರೆ. ಈ ಕುರುಬ, ಬೇಡ, ನಾಯಕ, ವಾಲ್ಮೀಕಿ, ಪರಿವಾರ, ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿ, ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿ. ಅಲ್ಲಿಂದ ಒಂದು ತೀರ್ಮಾನ ಬರುವವರೆಗೆ ಇಲ್ಲಿ ಯಾವುದೇ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳಬಾರದು ಎಂದು ಹೇಳಿದ್ದರೂ ಕೂಡ ರಾಜ್ಯದ ಸಿ. ಆರ್. ಇ. ಸೆಲ್‌ನವರು ಈ ಕುರಿತಾಗಿ ಸರಕಾರದ ಆದೇಶ ಇದ್ದರೂ ಕೂಡ ಯಾರ್ಯಾರು ಈ ಒಂದು ಸರಕಾರದ ಸವಲತ್ತಿನ ಉಪಯೋಗವನ್ನು ಪಡೆದುಕೊಂಡು ಕೆಲಸದಲ್ಲಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಂಡು ಅಮಾನತ್ತಿನಲ್ಲಿಡುವುದು, ಸಸ್ಪೆಂಡ್ ಮಾಡುವುದು ಮುಂತಾಗಿ ತೊಂದರೆಯನ್ನು ಕೊಡುತ್ತಿದ್ದಾರೆ. ಕೇಂದ್ರ ಸರಕಾರದ ಒಂದು ತೀರ್ಮಾನ ಬರುವವರೆಗೆ ಇಂತಹ ಪ್ರಕರಣಗಳ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳಬಾರದು ಎಂದು ಆದೇಶಿಸಬೇಕು. ಆಕಸ್ಮಾತ್ತಾಗಿ ಹಾಗೇನಾದರೂ ಆಗಿದ್ದರೆ ಅದನ್ನು ವಾಪ್ಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ — ಶ್ರೀ ಚಿನ್ನಪ್ಪರೆಡ್ಡಿಯವರ ಏಕ ಸದಸ್ಯ ಆಯೋಗದವರಿಗೆ ತಮ್ಮ ವರದಿಯನ್ನು ಒಂದು ವರ್ಷದ ಒಳಗಾಗಿ ಕೊಡಬೇಕೆಂದು ತಿಳಿಸಿದ್ದೇವೆ. ಮಾನ್ಯ ಸದಸ್ಯರು ಹಿಂದುಳಿದ ವರ್ಗಗಳ ಹಿತವನ್ನು ಕಡೆಗಣಿಸಲಾಗುತ್ತಿದೆ ಎಂದು ಹೇಳಿದ್ದಾರೆ, ಆ ಮಾತುಗಳು ಸತ್ಯಕ್ಕೆ ದೂರವಾದುದು ಎಂದು ಹೇಳಬಯಸುತ್ತೇನೆ. ಆ ಬಗ್ಗೆ ನಾವು ತಾತ್ಕಾಲಿಕ ಮೀಸಲಾತಿ ಆಜ್ಞೆಯನ್ನು ಹೊರಡಿಸಿ, ರೋಸ್ಟರ್ ಸಿಸ್ಟಮ್ ಪ್ರಕಾರ ಜಾರಿಗೆ ಬರುವಂಥ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಅವರು ಹೇಳಿದ ನಾಯಕ ಎಂಬ ಜಾತಿ ಎಸ್. ಟಿ.ಯಲ್ಲಿದೆ. ಇನ್ನಿತರ ಜಾತಿಗಳು 'ಎ' ಗುಂಪಿನಲ್ಲಿ ಬರುತ್ತವೆ. ಈ ವಿಚಾರವು ಈಗ ಕೇಂದ್ರ ಸರಕಾರದ ಮುಂದೆ ಇದೆ, ಈ ವಿಚಾರದಲ್ಲಿ ಯಾವುದೇ ರೀತಿಯಲ್ಲಿ. any inclusion or exclusion or synonym clearance ಅದು ಕೇಂದ್ರ ಸರಕಾರದ ವ್ಯಾಪ್ತಿಗೆ ಒಳಪಡುತ್ತದೆ. ನಮ್ಮ ವ್ಯಾಪ್ತಿಯಲ್ಲಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೆ, ಸರಕಾರದವರು ಒಂದು ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿದ್ದರೂ ಕೂಡ ಸಿ. ಆರ್. ಇ. ಸೆಲ್‌ನವರು ಕೆಲವು ಪ್ರಕರಣಗಳಲ್ಲಿ ಈ ಜಾತಿಯ ಜನರಿಗೆ

ಕೆಲಸದಲ್ಲಿದ್ದವರಿಗೆ ಅವಮಾನಿಸುತ್ತಿದ್ದುದು ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಹಾಗಾದರೆ ಸಿ. ಆರ್. ಇ. ಸೆಲ್‌ನವರು ಸರಕಾರಕ್ಕಿಂತ ದೊಡ್ಡವರೆ ? ಆದುದರಿಂದ ಕೂಡಲೇ ಸರಕಾರದವರು ಈ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಜಿ. ಬಸವಣ್ಣಪ್ಪ.— ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಅಧ್ಯಕ್ಷರೆ, ರಾಜ್ಯದಲ್ಲಿ ಓಲ್ಡ್ ಏಜ್ ಪೆನ್‌ಷನ್, ಅಂಗವಿಕಲರ ಪೆನ್‌ಷನ್. ವಿಡೋ ಪೆನ್‌ಷನ್, ಮುಂತಾದವುಗಳಿಗೆ ೫೦ ರೂಪಾಯಿಗಳನ್ನು ಈಗ ಕೊಡುತ್ತಾ ಇದ್ದಾರೆ ಆದು ಕಡಿಮೆಯಾಗಿದ್ದು ಅದನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಹೀಗೆ ಕೊಡುವ ಹಣವನ್ನು ಟ್ರೆಜರಿ ಮುಖಾಂತರವಾಗಿ ತಾವು ಡಿಸ್ಟ್ರಿಬ್ಯುಟ್ ಮಾಡುವ ಹಾಗೆ ಮಂಡಲ್ ಪಂಚಾಯಿತಿಗೆ ವಹಿಸಿಕೊಡಬೇಕು. ಏಕೆಂದರೆ ಸರಕಾರದವರು ಇದಕ್ಕಾಗಿ ತಲಾ ಎರಡು ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದೆ. ಹಾಗೆಯೇ ಪೋಸ್ಟ್‌ಮನ್ ಬಡವಾಡೆ ಮಾಡುವಾಗ ಮಾಮೂಲು ಎಂದು ಎರಡು ರೂಪಾಯಿಗಳನ್ನು ಇಟ್ಟುಕೊಳ್ಳುತ್ತಾನೆ. ಹೀಗೆ ಇದನ್ನು ಮಂಡಲಪಂಚಾಯತಿ ಮೂಲಕ ಡಿಸ್ಟ್ರಿಬ್ಯೂಟ್ ಮಾಡಿದರೆ, ಸರಕಾರಕ್ಕೂ ತಲಾ ಎರಡು ರೂಪಾಯಿಗಳು ಉಳಿಯುವುದಲ್ಲದೆ, ಜನರಿಗೂ ಅನುಕೂಲವಾಗುತ್ತದೆ. ಆದುದರಿಂದ ದಯಮಾಡಿ ಈ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ ಬಸವಣ್ಣಪ್ಪ.— ಮಾನ್ಯ ಸದಸ್ಯರು, ಓಲ್ಡ್ ಏಜ್ ಪೆನ್‌ಷನ್ ವಿಡೋ ಪೆನ್‌ಷನ್, ಅಂಗವಿಕಲರ ಪೆನ್‌ಷನ್‌ಗಳಿಗೆ ಈಗ ಕೊಡಲಾಗುತ್ತಿರುವ ಮೊತ್ತವನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಆ ಮೊತ್ತವನ್ನು ಹೆಚ್ಚಿಸಲು ಸಾಧ್ಯವಾಗಲಾರದು. ಹಾಗೆಯೇ ಮಂಡಲಪಂಚಾಯಿತಿಯ ಮೂಲಕ ಪೆನ್‌ಷನ್ ವಿತರಣೆಯ ವ್ಯವಸ್ಥೆ ಮಾಡಿ ಎಂದು ಹೇಳಿದ್ದಾರೆ. ಸಧ್ಯಕ್ಕೆ ಅದನ್ನು ಸರಳೀಕರಿಸುವುದಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಬೀಳಗಿ — ಅಧ್ಯಕ್ಷರೆ, ಬಿಜಾಪುರದಲ್ಲಿ ಒಂದು ಪ್ರೈವೇಟ್ ಆರ್ಗನೈಸೇಷನವರು ಎಸ್.ಸಿ.ಎಸ್.ಟಿ. ಅಭ್ಯರ್ಥಿಗಳಿಗಾಗಿ ಐ.ಎ.ಎಸ್. ಪರೀಕ್ಷೆಗೆ ಹೋಗುವವರಿಗೆ ಕೋಚಿಂಗ್ ಕ್ಲಾಸ್‌ನ್ನು ನಡೆಸುತ್ತಾ ಇದ್ದರು. ಆದರೆ ಆ ಸಂಸ್ಥೆಯು ಈಗ ಬಂದ್ ಆಗಿದೆ ಎಂದು ತಿಳಿದು ಬಂದಿದೆ. ಅದನ್ನು ವಿಚಾರ ಮಾಡಿ ಪುನಃ ಪ್ರಾರಂಭಿಸುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಅಂತೆಯೇ ಬೀದರ್‌ನಲ್ಲಿ ಎಸ್ ಟಿ.ಯವರಿಗಾಗಿ ಒಂದು ಕಾಲೇಜು ಮತ್ತು ಹಾಸ್ಟೆಲ್ ಇತ್ತು. ಅದೂ ಕೂಡ ಈಗ ಬಂದ್ ಆಗಿದೆ ಎಂದು ತಿಳಿದು ಬಂದಿದೆ ಅದು ಬಂದ್ ಆಗಲಿಕ್ಕೆ ಕಾರಣ ಏನು ? ಆ ಕಾಲೇಜು ಮತ್ತು ಹಾಸ್ಟೆಲ್‌ನ್ನು ಪುನಃ ಪ್ರಾರಂಭಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಎಸ್. ಸಿ. ಎಸ್. ಟಿ.ಯವರಿಗೆ ಕೇಂದ್ರ ಸರ್ಕಾರದವರು ಬೋರ್‌ವೆಲ್‌ಗಳನ್ನು ಒದಗಿಸಿ ಕೊಡುವಂಥ ಒಂದು ಕಾರ್ಯಕ್ರಮ ಇದೆ, ಅದು ಮೊದಲು ಕುಂಠಿತವಾಗಿ ನಡೆದುಕೊಂಡು ಬಂದು ೧೯೮೩-೮೪ ರಿಂದ ಕಾರ್ಪೊರೇಷನ್‌ನವರು ಚೆನ್ನಾಗಿ ನಡೆಸಿಕೊಂಡು ಬಂದರು ಎಂದು ಅವರ ಆಡಳಿತಕ್ಕೆ ನಾಲ್ಕು ಜಿಲ್ಲೆಗಳನ್ನು ಕೊಟ್ಟರು. ಅವರು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಆ ಕಾರ್ಯಕ್ರಮ ಕುರಿತು ನಿಮ್ಮ ಅಂಕಿ ಅಂಶಗಳನ್ನು ನೋಡಿದರೆ ಕಾರ್ಪೊರೇಷನ್‌ನವರು ಬೋರ್‌ವೆಲ್ ಮತ್ತು ಪಂಪುಸೆಟ್ಟುಗಳನ್ನು ಹಾಕಿದ್ದಾರೆ ಆದರೆ ಅವರಿಗೆ ವಿದ್ಯುಚ್ಛಕ್ತಿಯು ಸರಬರಾಜು ಮಾಡಿಲ್ಲವಾದ ಕಾರಣದಿಂದಾಗಿ ತೊಂದರೆಯಾಗಿದೆ ಸರಕಾರದವರು ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಬೋರ್‌ವೆಲ್‌ಗಳಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಕೂಡಲೇ ಒದಗಿಸಿಕೊಡಬೇಕೆಂದು ಮತ್ತು ಆ ಮೂಲಕ ಜನರಿಗೆ ಅನುಕೂಲ ಮಾಡಿಕೊಡಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ರಾಜ್ಯದಲ್ಲಿನ ಮುನಿಸಿಪಾಲಿಟಿಗಳಿಗೆ ಕಾರ್ಪೊರೇಷನ್‌ಗಳಿಗೆ, ನಗರ ಸಭೆಗಳಿಗೆ ೧೮ ಪರ್ಸೆಂಟ್‌ನಷ್ಟು ಗ್ರಾಂಟನ್ನು ಎಸ್. ಸಿ. ಎಸ್ ಟಿ.ಯವರ ಕಲ್ಯಾಣಕ್ಕಾಗಿ ಕೊಟ್ಟಿರುತ್ತಾರೆ. ಅದನ್ನು ಯಾರೂ ಸರಿಯಾಗಿ ಉದ್ದೇಶಿತ ಕಾರ್ಯಕ್ಕಾಗಿ ಖರ್ಚು ಮಾಡುತ್ತಾ ಇಲ್ಲ. ಈ ವರ್ಗದ ಜನರ ಸಲುವಾಗಿ ಖರ್ಚು ಮಾಡುವ ಬದಲು ಆ ಹಣವನ್ನು ರಸ್ತೆಗಳನ್ನು ಮಾಡುವುದಕ್ಕೆ ಗಟಾರಗಳನ್ನು ಮಾಡುವುದಕ್ಕೆ ಖರ್ಚು ಮಾಡುತ್ತಿರುವ ಉದಾಹರಣೆಗಳು ಇವೆ. ಈ ಬಗ್ಗೆ ಅವುಗಳಿಗೆ ಉದ್ದೇಶಿತ

ಕಾರ್ಯಗಳಿಗೆ ಮಾತ್ರ ಖರ್ಚು ಮಾಡಬೇಕೆಂದು ಯಾವುದಾದರೂ ರೀತಿಯಲ್ಲಿ ಗೈಡ್‌ಲೈನ್ಸ್ ಕೊಟ್ಟಿದ್ದೀರಾ ? ಆ ಬಗ್ಗೆ ಮಾನ್ಯ ಸಚಿವರು ಹೇಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಸದಸ್ಯರು ಅತಿ ಮುಖ್ಯವಾದಂಥ ಪ್ರಶ್ನೆಗಳನ್ನು ಕೇಳಿದ್ದಾರೆ. ಬಿಜಾಪುರದಲ್ಲಿ ನಡೆಸುತ್ತಿದ್ದ ಪ್ರೈವೇಟ್ ಆರ್ಗನೈಸೇಷನ್‌ನವರು ಈಗ ಎಸ್. ಸಿ. ಎಸ್ ಟಿ.ಯವರಿಗೆ ಐ. ಎ. ಎಸ್. ಕೋಚಿಂಗ್ ಕ್ಲಾಸ್‌ಗಳನ್ನು ತೆಗೆದುಕೊಳ್ಳುತ್ತಾ ಇಲ್ಲ ಎಂದು ಹೇಳಿದ್ದಾರೆ. ಈಗ ಸರಕಾರವೇ ಆ ಕೋಚಿಂಗ್‌ಕ್ಲಾಸನ್ನು ಪ್ರಸ್ತುತ ವರ್ಷದಿಂದ ತೆಗೆಯುವುದರಿಂದ ಆ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲ ಆ ಬಗ್ಗೆ ಆತಂಕ ಪಡಬೇಕಾಗಿಲ್ಲ. ಇನ್ನು ಬೀದರ್‌ನಲ್ಲಿ ಹಾಸ್ಟೆಲ್ ಮತ್ತು ಕಾಲೇಜು ಬಂದ್ ಆದ ಬಗ್ಗೆ ಹೇಳಿದ್ದಾರೆ. ಅಲ್ಲಿಯ ಆಡಳಿತವರ್ಗದವರು ಮತ್ತಿತರರು ಸೇರಿ ಸುಮಾರು ೫೦-೬೦ ಲಕ್ಷ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಅಲ್ಲಿಯ ಪ್ರಿನ್ಸಿಪಾಲರು ನಮ್ಮ ಇಲಾಖೆಯ ಅಧಿಕಾರಿಗಳು, ಟ್ರೆಜರಿ ಆಫೀಸರ್, ಇವರೆಲ್ಲಾ ಸೇರಿ ಹಣ ದುರುಪಯೋಗ ಮಾಡಿದ್ದಾರೆ. ಬೋಗಸ್ ಮಕ್ಕಳ ಸಂಖ್ಯೆ ಕೊಟ್ಟು ಹಣ ತಿಂದು ಹಾಕಿದ್ದಾರೆ. I have introduce the cheque system. I have stopped the hostel and I have introduced the cheque system. ಈಗ ನೇರವಾಗಿ ವಿದ್ಯಾರ್ಥಿಗಳಿಗೆ ಉಪಯೋಗ ಆಗುವಂಥ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಮತ್ತು ಅಲ್ಲಿ ನಡೆದ ಅವ್ಯವಹಾರದ ಬಗ್ಗೆ ತಪ್ಪಿತಸ್ಥರ ಮೇಲೆ ಉಪಲೋಕಾಯುಕ್ತದಿಂದ ವಿಚಾರಣೆ ನಡೆಯುತ್ತಿದೆ. ಅದು ಸರಿಯಾಗಿ ಆಗುವವರಿಗೆ ಹೊಸದಾಗಿ ಹಾಸ್ಟೆಲ್, ಕಾಲೇಜನ್ನು ತೆಗೆಯುವುದಿಲ್ಲ. ಇನ್ನು ಬೋರ್‌ವೆಲ್ ಸ್ಕೀಮ್‌ಗೆ ವಿದ್ಯುಚ್ಛಕ್ತಿ ಒದಗಿಸಿಲ್ಲ ಎಂದು ಹೇಳಿದ್ದಾರೆ. ಆ ಕುರಿತು ಮಾನ್ಯ ಜೆ. ಎಚ್. ಪಟೇಲ್‌ರವರಿಗೆ ಮತ್ತು ಕೆ. ಇ. ಬಿ.ಯವರಿಗೆ ತಿಳಿಸಿದ್ದೇನೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್ ನಿಂದ ಎಸ್. ಸಿ. ಎಸ್. ಟಿ.ಯವರಿಗೆ ನಿಗಮದಿಂದ ಆದ್ಯತೆಯ ಮೇರೆಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಕೇಳಿಕೊಂಡಿದ್ದೇನೆ.

ಇನ್ನು ಮುನ್ಸಿಪಾಲಿಟಿಯವರಾಗಲಿ, ನಗರ ಸಭೆಗಳವರಾಗಲಿ, ಕಾರ್ಪೋರೇಷನ್‌ನವರಾಗಲಿ, ಸಂವಿಧಾನದ ಪ್ರಕಾರ, ಸರಕಾರದ ನೀತಿಯ ಪ್ರಕಾರ, ೧೮ ಪರ್ಸೆಂಟ್‌ನಷ್ಟು ಹಣವನ್ನು ರಿಸರ್ವ್ ಮಾಡಿ ಅದನ್ನು ಹರಿಜನ ಗಿರಿಜನರ ಕಲ್ಯಾಣ ಮಾಡಬೇಕೆಂದು ಇದೆ. ಅದರ ಬಗ್ಗೆ ಸಾಕಷ್ಟು ಗೈಡ್ ಲೈನ್ಸ್ ಕೊಟ್ಟಿದೆ, ಹಾಗೂ ತಿಳುವಳಿಕೆಯನ್ನು ಕೊಟ್ಟಿದೆ ಮತ್ತು ಸರ್ಕುಲರ್ಸ್ ಕೊಟ್ಟಿದೆ. ಆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೆತರುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಬೀಳಗಿ.— ಬೀದರ್‌ನಲ್ಲಿ ಯಾರೋ ತಪ್ಪು ಮಾಡಿದ್ದಕ್ಕಾಗಿ ಅಲ್ಲಿಯ ಮಕ್ಕಳು ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ಸರಕಾರದವರು ಕೂಡಲೇ ಅದನ್ನು ರನ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಜಿ. ಬಸವಣ್ಣಪ್ಪ.— ಅಲ್ಲಿ ಒದಗಿಸಿದ ಹಣವನ್ನು ಹುಡುಗರಿಗೆ ಸೂಕ್ತ ರೀತಿಯಲ್ಲಿ ತಲುಪಿ ಅಲ್ಲಿಯ ಪ್ರಿನ್ಸಿಪಾಲರು ಮತ್ತಿತರರು ಶಾಮೀಲಾಗಿ ಅವ್ಯವಹಾರ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ೯ ಜನರನ್ನು ಸಸ್ಪೆಂಡ್‌ನಲ್ಲಿಟ್ಟು ಅವರ ಮೇಲೆ ವಿಚಾರಣೆ ನಡೆಸಲಾಗಿದೆ.

† ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೆ, ನಮ್ಮ ವಿಭಾಗದಲ್ಲಿ ಗೋಸಂಗಿ ಹೆಸರಿನ ಜಾತೀಯ ಜನರು ಇದ್ದಾರೆ. ಅವರ ಸಂಖ್ಯೆಯು ರಾಜ್ಯದಲ್ಲಿ ಎಷ್ಟು ಎಂದು ನನಗೆ ಗೊತ್ತಿಲ್ಲ. ಒಟ್ಟು ಸಣ್ಣ ಪ್ರಮಾಣದಲ್ಲಿ ಆ ಜಾತಿಯ ಜನರಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ೫೦-೬೦ ಕುಟುಂಬಗಳು ಇವೆ. ಚಿಕ್ಕಮಗಳೂರಿನಲ್ಲಿರುವಂಥ ಈ ಜನರಿಗೆ ಒಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ.

From the Office of the Social Welfare in Karnataka ಅದರಲ್ಲಿ ಏನು ಕೊಟ್ಟಿದ್ದಾರೆಂದರೆ ಕೇಂದ್ರ ಸರಕಾರದ ಆಜ್ಞೆ ಪ್ರಕಾರ ಗೋಸಂಗಿ ಎನ್ನತಕ್ಕಂತಹ ಜಾತಿಯನ್ನು ಎಸ್.ಸಿ. ಎಂದು ಪರಿಗಣಿಸಲಾಗಿದೆ, ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಅವರಿಗೆ ಬೆನಿಫಿಟ್ ಅನ್ನೂ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿರತಕ್ಕಂತಹ ಕೆಲವು ಕುಟುಂಬದವರು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದೇ ರೀತಿಯಾದ ಸರ್ಟಿಫಿಕೇಟ್ ಅನ್ನು ತೆಗೆದುಕೊಳ್ಳಲು ತಹಸೀಲ್ದಾರ್‌ರವರ ಬಳಿಗೆ ಹೋದಾಗ ಪೋಲೀಸ್ ಕಂಪ್ಲೇಂಟ್ ಕೊಟ್ಟು ಅವರನ್ನು ಅರೆಸ್ಟ್ ಮಾಡಿಸಿದ್ದಾರೆ. ಅದನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ನಾನು ದಿನಾಂಕ ೩೦-೯-೧೯೮೭ರಲ್ಲಿ ಒಂದು ಕಾಗದವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಬರೆದೆ, ಅದಕ್ಕೆ ಅವರು ಉತ್ತರ ಬರೆದು ಈ ವಿಷಯವನ್ನು ತಕ್ಷಣ ಪರಿಶೀಲನೆ ಮಾಡಬೇಕೆಂದು ಸಮಾಜ ಕಲ್ಯಾಣ, ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಿಗೂ ಸೂಚಿಸಿದ್ದೇನೆಂದು ಹೇಳಿದ್ದಾರೆ. ಆದರೆ ಈವರೆಗೂ ಇದು ಪರಿಶೀಲನೆ ಆಗಿಲ್ಲ. ಪಕ್ಕದ ತಾಲ್ಲೂಕಿನಲ್ಲಿ ಬೆನಿಫಿಟ್ ಕೊಟ್ಟಿದ್ದೀರಿ ಈ ಕಡೆಯ ತಾಲ್ಲೂಕಿನಲ್ಲಿ ಬೆನಿಫಿಟ್ ಕೊಡದೇ ಅರೆಸ್ಟ್ ಮಾಡಿಸಿದ್ದೀರಿ. ಇದರ ಬಗ್ಗೆ ತಕ್ಷಣ ಏನಾದರೂ ಕ್ರಮ ತೆಗೆದುಕೊಂಡು ಸೂಕ್ತವಾದ ಪರಿಹಾರ ದೊರಕಿಸಿಕೊಡಬೇಕು, ಎಂದು ಒತ್ತಾಯ ಪಡಿಸುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಉದಾಹರಣೆಗೆ ಹೇಳುವುದಾದರೆ ಕಾಡು ಕುರುಬ, ಜೇನು ಕುರುಬ ಎಂದು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಲಿಸ್ಟ್ ಏನು ಇದೆ it is confined to Coorg District ಬೇರೆ ಕಡೆಯವರು ಇದರ ಉಪಯೋಗವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗೋಸಂಗಿ ಎನ್ನುವುದು ಚಿಕ್ಕಮಗಳೂರಿಗೆ ಮಾತ್ರ ಸೀಮಿತವಾಗಿರಬಹುದು. ನಾನು ಅದನ್ನು ವೆರಿಫೈ ಮಾಡಿಸುತ್ತೇನೆ. ಅಲ್ಲಿಗೆ ಸೀಮಿತವಾಗಿದ್ದರೆ ಮಾತ್ರ ಅದನ್ನು ಎಕ್ಸ್‌ಟೆನ್‌ಷನ್ ಕೊಡುವುದಕ್ಕೆ ಬರುವುದಿಲ್ಲ. ತಾವು ನನ್ನ ಗಮನವನ್ನು ಸೆಳೆದಿದ್ದೀರಿ ಅದನ್ನು ವೆರಿಫೈ ಮಾಡಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ರೆಫರೆನ್ಸ್‌ಗೆ ಕಳಿಸಿಕೊಡುತ್ತೇನೆ. ತಕ್ಷಣ ವೆರಿಫೈ ಮಾಡಿಸಿ. ಒಂದು ವರ್ಷದಿಂದ ಇಲ್ಲಿಯವರೆಗೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಪಂಪಾಪತಿ.—ಅಂಗನವಾಡಿ ಕಾರ್ಯಕರ್ತರು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಕೊಡತಕ್ಕಂತಹ ವೇತನ ಕಡಿಮೆ ಇದೆ, ಅದರಿಂದ ಅವರ ಜೀವನ ನಡೆಸುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಕನಿಷ್ಟ ಪಕ್ಷ ೫೦೦ ರೂಪಾಯಿಗಾದರೂ ಏರಿಸುತ್ತೀರಾ ? ಕೂಡ್ಲಿಗಿ ಭಾಗದಲ್ಲಿ ಆ ಗ್ರಾಮಾಂತರ ಪ್ರದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು ಹೆಚ್ಚು ಇದ್ದಾರೆ ಆ ತಾಲ್ಲೂಕಿನಲ್ಲಿ ಹಾಸ್ಟೆಲ್ ಇಲ್ಲ. ಪರಿಶಿಷ್ಟ ಜಾತಿ, ವರ್ಗದ ವಿದ್ಯಾರ್ಥಿಗಳು ಅಲ್ಲಿ ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ, ಇದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ ಕೂಡ್ಲಗಿಯಲ್ಲಿ ಹಾಸ್ಟೆಲ್ ಅನ್ನು ಪ್ರಾರಂಭ ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿ ಕೊಡುತ್ತೀರಾ ? ಇನ್ನು ೨೫ ಜನ ದುಡಿಯುವ ಮಹಿಳೆಯರು ಇರತಕ್ಕಂತಹ ಕಡೆಗಳಲ್ಲಿ ಹಾಸ್ಟೆಲ್ ಅನ್ನು ಪ್ರಾರಂಭ ಮಾಡುತ್ತೇವೆ ನಾವು ೭೫ ಪರ್ಸೆಂಟ್ ಕೊಡುತ್ತೇವೆ ಬೇರೆಯವರು ೨೫ ಪರ್ಸೆಂಟ್ ಹಣವನ್ನು ಒದಗಿಸಿ ಮಾಡಬೇಕೆಂದು ಏನು ಹೇಳುತ್ತೀರಿ ಅದು ಅಸಾಧ್ಯವಾದಂತಹ ಮಾತು. ಸರಕಾರವೇ ದುಡಿಯುವ ಮಹಿಳೆಯರ ಸಹಾಯಕ್ಕೆ ಬಂದು ಹಾಸ್ಟೆಲ್‌ಗಳನ್ನು ಪ್ರಾರಂಭಿಸಿ ಅನುಕೂಲವನ್ನು ಒದಗಿಸಿ ಕೊಡುತ್ತೀರಾ ?

ಶ್ರೀ ಜಿ. ಬಸವಣ್ಣೆಪ್ಪ.—ತಾವು ತಮ್ಮ ಭಾಷಣದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೀರಿ ನಾನು ಉತ್ತರ ಕೊಡುವಾಗ ಇದರ ಬಗ್ಗೆ ಹೇಳಿದ್ದೇನೆ ಆಗ ನೀವು ಇರಲಿಲ್ಲ. ಅಂಗನವಾಡಿ ಕಾರ್ಯಕರ್ತರಿಗೆ ನಾವು ಕೊಡುತ್ತಿರುವುದು ಗೌರವಧನ. ೨ ವರ್ಷದಿಂದ ೨೫ ರೂಪಾಯಿ ಜಾಸ್ತಿ ಮಾಡಿದ್ದೇವೆ ಇನ್ನು ೫೦ ರೂಪಾಯಿಗಳನ್ನು ಜಾಸ್ತಿ ಮಾಡಿ ಎಂದು ಕೇಂದ್ರ ಸರಕಾರಕ್ಕೆ ಬರೆದಿದ್ದೇವೆ, ಕೂಡ್ಲಗಿಯಲ್ಲಿ ಹಾಸ್ಟಲುಗಳನ್ನು ತೆರೆಯುವ ಬಗ್ಗೆ ಹೇಳಿದ್ದೀರಿ. ಈಗ ನಾವು ೨೦೦ ಹಾಸ್ಟೆಲ್‌ಗಳನು ತೆರೆಯಬೇಕೆಂದು ಮಾಡಿದ್ದೇವೆ. ಪ್ರೀ ಮೆಟ್ರಿಕ್ ಹಾಸ್ಟೆಲ್‌ಗಳು. ೧೦೦ ಎಸ್. ಸಿ. ಯವರಿಗೆ, ೧೦೦ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ತೆರೆಯಬೇಕೆಂದು ಮಾಡಿದ್ದೇವೆ. ನೀವು ಕಾಲೇಜ್ ಹಾಸ್ಟೆಲ್‌ಗಳ ಬಗ್ಗೆ ಕೇಳುತ್ತಿದ್ದೀರಿ. ಕೆಲವು ಕಡೆಗಳಲ್ಲಿ ಕಾಲೇಜ್ ಹಾಸ್ಟೆಲ್‌ಗಳನ್ನು ತೆರೆದು ಕ್ಲೋಸ್ ಮಾಡಿದ್ದೇವೆ; ಅಲ್ಲಿ ಅಡಿಗೆ ಮಾಡುವವರು, ವಾರ್ಡನ್‌ರವರು ಬಹಳ ತೊಂದರೆಗೆ ಒಳಗಾಗುತ್ತಾರೆ, ಕಾಲೇಜ್ ವಿದ್ಯಾರ್ಥಿಗಳು ಅವರಿಗೆ ಬಹಳ ತೊಂದರೆ ಕೊಡುತ್ತಾರೆ. ಎಸ್.ಸಿ. ಹಾಸ್ಟೆಲ್ ಇರಲಿ, ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್ ಇರಲಿ ಅವರುಗಳು ತೊಂದರೆ ಕೊಡುತ್ತಾರೆ. ಆದುದರಿಂದ ನಾವು ಆದಷ್ಟು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಏಕೆ ತೆರೆಯಬಾರದು ಎಂಬ ಬಗ್ಗೆ ಯೋಚನೆ ಇದೆ, ಕೂಡ್ಲಗಿಯಲ್ಲಿ ಕಾಲೇಜ್ ಹಾಸ್ಟೆಲ್ ತೆರೆಯಬೇಕೆಂದು ಹೇಳಿದ್ದೀರಿ. We have not made provision ಇದರ ಬಗ್ಗೆ ಗಮನ ಹರಿಸಿ, ಅವಶ್ಯಕತೆಯಿದ್ದರೆ ನಮ್ಮ ಇಲಾಖೆಯ ಅಧಿಕಾರಿಗಳೊಡನೆ ಚರ್ಚಿಸಿ ಕ್ರಮ

ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ. ಇನ್ನು ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್‌ಗಳನ್ನು ಸರಕಾರ ನಡೆಸುವುದಿಲ್ಲ. ವಾಲೆಂಟರಿ ಆರ್ಗನೈಸೇಷನ್ ಮುಖಾಂತರ ನಡೆಸಲಾಗುತ್ತಿದೆ. ಸರಕಾರ ಅದಕ್ಕೆ ಸಹಾಯ ಮಾಡುತ್ತದೆ. ನೀವು ಏನಾದರೂ ಮುಂದೆ ಬಂದರೆ ಸಹಾಯ ಮಾಡುತ್ತೇವೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಈಗ ತಾನೆ ಮಾನ್ಯ ಮಂತ್ರಿಗಳು ಹೇಳಿದರು. ಅಂಗನವಾಡಿಗಳಿಗೆ ಆಹಾರ ಪದಾರ್ಥ ವಿತರಣೆಯನ್ನು ಟಿ.ಎ.ಪಿ.ಎಂ.ಸಿ.ಎಸ್. ನಿಂದ ಮಾಡುತ್ತಿದ್ದೇವೆ ಎಂದು.

ಕೆಲವು ಜಿಲ್ಲೆಗಳಲ್ಲಿ ಇನ್ನೂ ಕೂಡ ಪ್ರೈವೇಟ್ ಏಜೆನ್ಸಿ ಮೂಲಕ ವಿತರಣೆಯಾಗುತ್ತಿದೆ. ಇದರಿಂದ ನಿಜವಾಗಿಯೂ ಮಿಸ್ ಅಪ್ರೊಪ್ರಿಯೇಷನ್ ಆಗುತ್ತಿದೆ ಮಿಸ್ ಅಪ್ಲಿಕೇಷನ್ ಆಗುತ್ತಿದೆ. ಅದನ್ನು ಮಾನ್ಯ ಮಂತ್ರಿಗಳು ಸರಿಪಡಿಸಬೇಕು ಎನ್ನತಕ್ಕಂಥದ್ದು ನನ್ನ ಆಸೆ ಮತ್ತೊಂದು ಈ ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ ಅದು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್ ಆಗಲೀ ಅಥವಾ ಪರಿಶಿಷ್ಟ ವರ್ಗಕ್ಕೆ ಸೇರಿದ ಹಾಸ್ಟೆಲ್ ಆಗಲೀ ಅವುಗಳಿಗೆ ಬಿಲ್ಡಿಂಗ್ ಇಲ್ಲದೇ ಮಕ್ಕಳಿಗೆ ಓದಲಿಕ್ಕೆ ರಾತ್ರಿ ಹೊತ್ತು ಬಹಳ ಕಷ್ಟವಾಗುತ್ತದೆ. ಅವರಿಗೆ ಸರಿಯಾದ ವಾತಾವರಣ ಇಲ್ಲ. ಆದ್ದರಿಂದ ಈ ಬಿಲ್ಡಿಂಗ್‌ಗಳನ್ನು ಮೊದಲು ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಈ ಅಂಗನವಾಡಿಗಳಿಗೆ ಆಹಾರವನ್ನು ಸಪ್ಲೈ ಮಾಡುವುದು ಪ್ರೈವೇಟ್‌ನಲ್ಲಿರುವವರು ಸಪ್ಲೈ ಮಾಡುವುದಕ್ಕೆ ಅವಕಾಶ ಇಲ್ಲ. There is no provision ಆ ರೀತಿ ಏನಾದರೂ ಖಾಸಗೀಯವರಿಗೆ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಹಾಸ್ಟೆಲ್ ಬಗ್ಗೆ ಹೇಳಿದ್ದೀರಿ, ಅದನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ದೌರ್ಜನ್ಯಕ್ಕೆ ಒಳಗಾದಾಗ ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಮತ್ತು ಉಪವಿಭಾಗ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ಮಾಡಿ ಈ ಸಮನ್ವಯ ಸಮಿತಿ ಪ್ರತಿ ಮೂರು ತಿಂಗಳಿಗೆ ಒಮ್ಮೆ ಸಭೆಯನ್ನು ಕರೆದು ನಡೆದಂಥ ದೌರ್ಜನ್ಯದ ಬಗ್ಗೆ ತನಿಖೆಯನ್ನು ನಡೆಸುವುದೋ ಅಥವಾ ವಿವರಣೆಯನ್ನು ಕೇಳುವಂಥ ಒಂದು ಕ್ರಮವನ್ನು ತಾವು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಆ ಕ್ರಮವನ್ನು ಕೈಗೊಂಡಿದ್ದೀರಾ ? ಇನ್ನು ಅಂಗನವಾಡಿಗಳಿಗೆ ಕೊಡತಕ್ಕಂಥ ಪೌಷ್ಟಿಕ ಆಹಾರದ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರದ ನಿರ್ದೇಶನದಂತೆ ಲೋಕಲ್ ಫುಡ್ ಕೊಡಬೇಕು ಎಂದು ಆದೇಶ ಮಾಡಿದೆ, ಅದೇ ರೀತಿ ಜಿಲ್ಲಾ ಪರಿಷತ್ತಿನ ಒಂದು ನಿರ್ಣಯದ ಪ್ರಕಾರ ಲೋಕಲ್ ಫುಡ್ ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡುತ್ತೀರಾ ?

ಶ್ರೀ ಜಿ ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಈ ಒಂದು ಹರಿಜನರಿಗೆ ಆಗತಕ್ಕಂಥ ದೌರ್ಜನ್ಯದ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಡಿ. ಸಿ. ಅವರಿಗೆ ರೆಕಮೆಂಡ್ ಮಾಡುತ್ತಿದ್ದೆವು. ಈಗ ಸ್ಥಳದಲ್ಲೇ ಜಿಲ್ಲಾ ಅಧಿಕಾರಿಗಳು ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರು ಶೀಘ್ರವಾಗಿ ತನಿಖೆ ಮಾಡಿ ದೌರ್ಜನ್ಯದ ಪ್ರಕರಣವನ್ನು ಬಗೆಹರಿಸಬೇಕು ಎಂದು ಹೇಳಿ ಅವರಿಗೆ ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ, ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಇನ್ನು ಸಮನ್ವಯ ಸಮಿತಿ ಮೂರು ತಿಂಗಳಿಗೆ ಒಮ್ಮೆ ಸೇರಿ ಅದನ್ನು ಮಾಡತಕ್ಕಂಥ
ಕೆಲಸ. ಅದು ಮಾಡದಿದ್ದರೆ ಅದರ ಬಗ್ಗೆ ವ್ಯವಸ್ಥೆಯನ್ನು ಮಾಡಲಾಗುವುದು. ಎರಡನೆಯದಾಗಿ ಈ ಪೌಷ್ಟಿಕ ಆಹಾರದ ಬಗ್ಗೆ ಈ ಲೋಕಲ್ ಫುಡ್ ಕೊಡಬೇಕು ಕೇರ್ ಫುಡ್‌ನ್ನು ಕೊಡಬಾರದು ಎಂದು ಹೇಳಿದ್ದಾರೆ. ಅಲ್ಲಿ ಒಂದು ನಿಯಮ ಇದೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಒಂದು ನೀತಿ ಪ್ರಕಾರ ನಿಯಮವೇ ಇದೆ. ಎರಡು ದಿವಸ ಲೋಕಲ್ ಫುಡ್‌ನ್ನು ಕೊಡಬೇಕು, ಎರಡು ದಿವಸ ಕೇರ್ ಫುಡ್‌ನ್ನು ಕೊಡಬೇಕು ಎಂದು ಈ ರೀತಿ ನಿಯಮ ಇದೆ, ಆ ನಿಯಮವನ್ನು ಪಾಲಿಸಿ ನಾವು ಕೊಡುತ್ತಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಈ ಹರಿಜನರನ್ನು ಹೊಲೆಯ ಮಾದಿಗ ಎಂದು ಹೇಳಿದರೆ ೫೦೦ ರೂಪಾಯಿ ದಂಡ ಇಲ್ಲವೇ ಆರು ತಿಂಗಳ ಸಜ ಎಂದು ಇದರ ಬಗ್ಗೆ ಸರ್ಕಾರದ ಅಮೆಂಡ್‌ಮೆಂಟ್ ಏನಾದರೂ ಇದೆಯೋ? ಆ ರೀತಿ ಇದ್ದರೆ ಎಷ್ಟು ಮಂದಿಗೆ ಈ ತರಹ ಶಿಕ್ಷೆಯಾಗಿದೆ? ಎರಡನೆಯದು ಈ ದೇವದಾಸಿಗಳ ಬಗ್ಗೆ ಈ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ? ಈ ವರ್ಷ ಎಷ್ಟು ಹಣವನ್ನು ಕೊಟ್ಟಿದೆ? ನಾವು ರಸ್ತೆಯಲ್ಲಿ ಹೋಗಬೇಕಾದರೆ ನಾವು ತಿಂದು ಉಗುಳಿದ

ಎಂಜಲನ್ನು ಕಾಗೆ ಮತ್ತು ನಾಯಿಯೊಂದಿಗೆ ಕಡಿದಾಡಿ ತಿನ್ನುತಾರಲ್ಲಾ ಆ ಜನರಿಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದೆ? ನಂತರ ಜೀತದಾಳು ಬಗ್ಗೆ ಈ ಸರ್ಕಾರ ಎಷ್ಟು ಖರ್ಚು ಮಾಡಿದೆ? ಕೇಂದ್ರ ಸರ್ಕಾರ ಎಷ್ಟು ಖರ್ಚು ಮಾಡಿದೆ. ಈ ಡಿಪಾರ್ಟ್‌ಮೆಂಟ್‌ನಿಂದ ಬರುವ ಹರಿಜನರಿಗೆಂದೇ ಬರುವ ಹಣವನ್ನು ಯಾವ ಯಾವ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದೆ? ಎಲ್ಲೆಲ್ಲಿ ಅದನ್ನು ಖರ್ಚು ಮಾಡಿದ್ದೀರಿ, ಅದು ಸರಿಯಾಗಿ ಖರ್ಚಾಗಿದೆಯೋ ಇಲ್ಲವೇ ಎನ್ನುವುದರ ಬಗ್ಗೆ ನನಗೆ ಮಾಹಿತಿ ಮಂತ್ರಿಗಳಿಂದ ಬೇಕು.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಅಸ್ಪೃಶ್ಯತೆಯನ್ನು ಹೋಗಲಾಡಿಸಿದೆ. There is no untoucaability Act....ಅದರ ಬಗ್ಗೆ ಪಿ. ಸಿ ಆರ್. ಆ್ಯಕ್ಟ್ ಇದೆ. ಎಲ್ಲಾ ಇದೆ ಹೊಲೆಯ ಮಾದಿಗ ಎಂದು ಹೇಳಿ ಬೈಯತಕ್ಕಂಥದ್ದು ಇವೆಲ್ಲಾ ಹಳ್ಳಿಗಳಲ್ಲಿ ಈಗಲೂ ಹೇಳತಕ್ಕಂಥ ವಾಡಿಕೆ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ಈ ಒಂದು ಅಸ್ಪೃಶ್ಯತೆಯನ್ನು ಆಚರಣೆ ಮಾಡುವುದು, ಹೊಲೆಯ ಮಾದಿಗ ಎನ್ನುವುದು ಹೋಟೆಲ್‌ಗಳಲ್ಲಿ ತಿಂಡಿ ಕೊಡದೇ ಅವರನ್ನು ಸೇರಿಸದೇ ಇರುವುದು, ಇವುಗಳ ಬಗ್ಗೆ ಇಮ್ಮಿಡಿಯೇಟ್ ಆಗಿ ಪೋಲೀಸ್ ಠಾಣೆಯಲ್ಲಿ ಕೇಸ್ ನೊಂದಾಯಿಸಿದರೆ ಪಿ. ಸಿ. ಆರ್. ಆ್ಯಕ್ಟ್ ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದಕ್ಕೆ ಶಿಕ್ಷೆ ಕೊಡತಕ್ಕ ವ್ಯವಸ್ಥೆ ಎಲ್ಲಾ ಇದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇದರ ಬಗ್ಗೆ ಒಂದೇ ಒಂದು ಶಿಕ್ಷೆ, ದಂಡ ಹಾಕಿರು ವುದನ್ನು ಉದಾಹರಣೆಗೆ ತಾವು ಕೊಡಿ.

ಶ್ರೀ ಜಿ. ಬಸವಣ್ಣೆಪ್ಪ. - ಮಾನ್ಯ ಅಧ್ಯಕ್ಷರೇ, ದೇವದಾಸಿಗಳು ನಮ್ಮ ರಾಜ್ಯದಲ್ಲಿ ೮೮೦೦೦ ಜನ ಇದ್ದಾರೆ. ದೇವದಾಸಿ ಪದ್ಧತಿ. ಒಂದು ಅನಿಷ್ಟ ಪದ್ಧತಿ ಇದನ್ನು ಹೋಗಲಾಡಿಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಇಲಾಖೆ ತೆಗೆದುಕೊಂಡಿದೆ. ಇವರ ಪುನರ್ ವಸತಿ ಬಗ್ಗೆ ಸ್ಟೇಟ್ ಹೋಂ ತೆರೆದಿದ್ದೇವೆ ಮತ್ತು ೫ ರಿಂದ ೧೪ ವರ್ಷದವರೆಗಿನ ಮಕ್ಕಳಿಗೆ ಸರ್ಟಿಫೈಡ್ ಸ್ಕೂಲ್ ತೆರೆದಿದ್ದೇವೆ. ಈಗ ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿದೆ. ದೇವದಾಸಿಗಳ ರೀಹ್ಯಾಬಿಲಿಟೇಷನ್ ಸಂಪೂರ್ಣ ಜವಾಬ್ದಾರಿ ಈ ಇಲಾಖೆಯದು ಜೀತದಾಳುಗಳ ಕೆಲಸದ ಬಗ್ಗೆ ಹೇಳುವುದಾದರೆ ಇದು ನಮ್ಮ ಇಲಾಖೆಗೆ ಸಂಬಂಧಪಟ್ಟದ್ದು ಅಲ್ಲ, ಇದು ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್ ರಾಜ್‌ಗೆ ಸೇರಿದ್ದು ಆಗಿದೆ.

ಅಧ್ಯಕ್ಷರು.—ನಾನು ೨ ಬೇಡಿಕೆಗಳನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

ಅಭಿಯಾಚನೆ ಕ್ರಮಾಂಕ 63–ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ.

೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫,೧೧,೦೧,೦೧೦ರೂ ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 64–ಮಹಿಳಾ ಮತ್ತು ಮಕ್ಕಳ ಕಲ್ಯಾಣ

೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೦೧,೦೦,೦೦೧ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

ಪ್ರಸ್ತಾವಗಳನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

ಅಧ್ಯಕ್ಷರು.—ಈಗ ಮಾನ್ಯ ಸಾರಿಗೆ ಮಂತ್ರಿಗಳವರಿಂದ ಉತ್ತರ,

(ಗೊಂದಲ)

(ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ೮-೧೦ ಜನ ಸದಸ್ಯರುಗಳು ಬೇಡಿಕೆಯ ಮೇಲಿನ ಚರ್ಚೆಗೆ ಇನ್ನೂ ಅವಕಾಶನ್ನು ಕೊಡಬೇಕೆಂದು ಕೇಳಿದರು)

ಅಧ್ಯಕ್ಷರು.—ಬೇಡಿಕೆ ಪಾಸ್ ಆಗಿ ಹೋಯಿತು, ಸಾರಿಗೆ ಮಂತ್ರಿಗಳು ಉತ್ತರ ಹೇಳುತ್ತಾರೆ, ಸಮಾಜ ಕಲ್ಯಾಣದ ಬಗ್ಗೆ ಚರ್ಚೆ ಮುಕ್ತಾಯವಾಯಿತು. ಸಾರಿಗೆ ಇಲಾಖೆಯ ಮೇಲೆ ಎಲ್ಲರಿಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ. ಬಿ. ಮಲ್ಲಪ್ಪ.—ನೀವು ಹೀಗೆ ಅವಕಾಶ ಕೊಡದೇ ಇದ್ದರೆ ನಾವು ಏಕೆ ಇಲ್ಲಿಗೆ ಬರಬೇಕು....

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಈಗ ಚರ್ಚೆ ಮುಗಿದುಹೋಗಿದೆ. ಸಾರಿಗೆ ಮಂತ್ರಿಗಳು ಇದ್ದಾರೆ, ಇದರಬಗ್ಗೆ ಅವಕಾಶ ಕೊಡುತ್ತೇನೆ. ಇನ್ನೂ ಬಹಳಷ್ಟು ಬೇಡಿಕೆಗಳು, ಇವೆ. ಇದರ ಬಗ್ಗೆ ಸಾಕಷ್ಟು ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಒಂದು...

(ಗೊಂದಲ)

ಅಧ್ಯಕ್ಷರು.—ಇದಕ್ಕೆ ಈಗಾಗಲೇ ಎರಡೂವರೆ ತಾಸು ಆಗಿದೆ. ಬೇಕಾದರೆ ಇದಕ್ಕೂ ಎರಡೂವರೆ ತಾಸು ಕೊಡುತ್ತೇನೆ. ಬಿಲ್ ಪಾಸ್ ಆಗಿದೆ, ಅಂಗೀಕಾರ ಆಗಿದೆ, ಬೇಡಿಕೆ ಪಾಸ್ ಆಗಿದೆ ಎಂದು ಡಿಕ್ಲೇರ್ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದೊಂದು ಮಿನಿಟ್ ಎಲ್ಲರಿಗೂ ಕಾಲಾವಕಾಶ ಕೊಡಿ.

ಅಧ್ಯಕ್ಷರು.—ನೋಡಿ ಎಲ್ಲಾ ವಿಷಯಗಳಲ್ಲೂ ಪಾರ್ಟಿ ಸ್ಟ್ರೆಂತ್ ಕನರಾದವರಿಗೆ ಅವಕಾಶ ಕೊಟ್ಟಿದ್ದೇನೆ. ಡಿಸ್ಕಷನ್‌ನಲ್ಲೂ ಅವರದೇ ಪ್ರಾಧಾನ್ಯತೆ. ಕ್ವೆಶ್ಚನ್ ಹವರ್‌ನಲ್ಲಿಯೂ ಅವರದ್ದೇ ಪ್ರಾಧಾನ್ಯತೆ. ಕ್ಲಾರಿಫಿಕೇಶನ್‌ನಲ್ಲೂ ಅವರಿಗೇ ಅವಕಾಶ ಕೊಟ್ಟಿದ್ದೇನೆ. ಎಲ್ಲಾ ಡಿಸ್ಟ್ರಿಕ್ಟ್‌ನವರಿಗೆ ನಾನು ಅವಕಾಶ ಕೊಟ್ಟಿದ್ದೇನೆ, ಶಿವಮೊಗ್ಗದ ಕೆ. ಹೆಚ್. ಶ್ರೀನಿವಾಸ್‌ರವರಿಗೆ ಅವಕಾಶ ಕೊಟ್ಟಿದ್ದೇನೆ, ತುಮಕೂರಿನ ಮೂಡಲಗಿರಿಯಪ್ಪನವರಿಗೆ ಅವಕಾಶ ಕೊಟ್ಟಿದ್ದೇನೆ. ದಕ್ಷಿಣ ಕನ್ನಡದಿಂದ ಶ್ರೀ ಪ್ರತಾಪಚಂದ್ರ ಶೆಟ್ಟಿಯವರಿಗೆ ಅವಕಾಶ ಕೊಟ್ಟಿದ್ದೇನೆ, ಚಿತ್ರದುರ್ಗ ಜಿಲ್ಲೆಯವರಿಗೂ ಅವಕಾಶ ಕೊಟ್ಟಿದ್ದೇನೆ. ಆದುದರಿಂದ ಚರ್ಚೆ ಮುಗಿದುಹೋಗಿದೆ.

(ಗೊಂದಲ)

ಅಧ್ಯಕ್ಷರು.—ಇನ್ನೂ ೩೦ ಬೇಡಿಕೆಗಳು ಇವೆ, ಇನ್ನೂ ೪-೫ ದಿವಸ ಮಾತ್ರ ಉಳಿದಿದೆ. ಸಾರಿಗೆ ಮಂತ್ರಿಗಳು ಈಗ ಉತ್ತರ ಕೊಡುತ್ತಾರೆ, ಇದರಲ್ಲಿ ಅವಕಾಶ ಕೊಡುತ್ತೇನೆ.

(ಕಾಂಗ್ರೆಸ್ ಸದಸ್ಯರುಗಳು ಚರ್ಚೆಗೆ ಅವಕಾಶ ಕೊಡಲೇ ಬೇಕೆಂದು ಒತ್ತಾಯ ಮಾಡುತ್ತಿದ್ದರು).

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಕುಳಿತುಕೊಳ್ಳಿ. ಈಗಾಗಲೇ ೧೧ರಿಂದ ೧೨½ ಗಂಟೆ ಆಯಿತು, ಇದೊಂದು ಬೇಡಿಕೆಯ ಚರ್ಚೆ ಆಗುತ್ತಿದ್ದರೆ ಹೇಗೆ ? ಸಾರಿಗೆ ಮಂತ್ರಿಗಳು ಉತ್ತರ ಕೊಡುತ್ತಾರೆ, ಇದರಲ್ಲಿ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ಈಗ ವಿಷಯ ಏನು ಅಂದರೆ ಈಗ ಬಿಲ್ ಪಾಸ್ ಆಗಿದೆ, ಎಂದು ತಾವು ಹೇಳಿದಿರಿ, ಅದು ತಪ್ಪು ತೀರ್ಮಾನವನ್ನು ಕೊಶ್ಚನ್ ಮಾಡುವುದು ಕಷ್ಟವಾಗುತ್ತದೆ.

ಇಲ್ಲಿ ಬುಡುಬುಡಿಕೆ ಮತ್ತು ಅಲೆಮಾರಿ ಜನಾಂಗದವರು ಏನಿದ್ದಾರೆ, ಅವರನ್ನು 'ಎ' ಪಟ್ಟಿಯಲ್ಲಿ ಸೇರಿಸುವುದು ಬಿಟ್ಟುಹೋಗಿದೆ. ಇದಕ್ಕೆ ಕಾರಣವೇನೆಂಬ ಪ್ರಮುಖ ಪ್ರಶ್ನೆಯನ್ನು ಮಾನ್ಯ ಲಕ್ಕಪ್ಪನವರು ಕೇಳಬೇಕಾಗಿತ್ತು. ಆದರೆ ತಾವು ಅವಕಾಶ ಕೊಡಲಿಲ್ಲ. ಬೇರೆ ಸಂದರ್ಭಗಳಲ್ಲಿ ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ ಇಲಾಖಾ ಬೇಡಿಕೆಗಳು ಬಂದಾಗ ವಿವರವಾಗಿ ಪ್ರಸ್ತಾಪ ಮಾಡಿ ಎಂದು ತಾವು ಸರ್ವೇಸಾಮಾನ್ಯವಾಗಿ ಹೇಳುತ್ತೀರಿ ? ಆದರೆ ಇವೊತ್ತು ಕೇಳಲು ತಾವು ಅವಕಾಶ ಕೊಡದಿದ್ದರೆ ಇನ್ನು ಯಾವಾಗ ಕೇಳಬೇಕು ? ಮಾನ್ಯ ಬೊಮ್ಮಾಯಿ ಅವರು ಈ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಇದು ಮಾನ್ಯ ಸದಸ್ಯರ ಹಕ್ಕಿನ ಪ್ರಶ್ನೆ ಆಗಿದೆ. ಹಾಗಿದ್ದರೆ ಇಲ್ಲಿ ಬುಡುಬುಡುಕೆ ಮತ್ತು ಅಲೆಮಾರಿ ಜನಾಂಗದವರ ಬಗ್ಗೆ ಚರ್ಚೆ ಮಾಡುವುದೇ ಬೇಡವೇ ?

ಅಧ್ಯಕ್ಷರು.—ನಾನು ಎಲ್ಲರಿಗೂ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಈಗ ಅವಕಾಶ ಸಿಗದಿದ್ದರೆ ಸಾರಿಗೆ ಇಲಾಖೆ ಮೇಲೆ ಪ್ರಶ್ನೆ ಕೇಳಲು ಅವಕಾಶ ಕೊಡುವುದಾಗಿ ತಾವು ಏನು ಹೇಳುತ್ತಿದ್ದೀರಿ, ಇದನ್ನು ಕೇಳಿದಾಗ ನನಗೆ ಶೆಟ್ಟರ ಅಂಗಡಿ ಜ್ಞಾಪಕಕ್ಕೆ ಬರುತ್ತದೆ. ಯಾರಾದರು ಶೆಟ್ಟರ ಅಂಗಡಿಗೆ ಹೋಗಿ ಹೆಸರುಬೇಳೆ ಇದೆಯೇ ಎಂದು ಕೇಳಿದರೆ ತೊಗರಿಬೇಳೆ ಇದೆ, ಚೆನ್ನಾಗಿದೆ, ತೆಗೆದುಕೊಳ್ಳಿ ಎಂದು ಹೇಳುತ್ತಿದ್ದರಂತೆ. ಈಗ ತಾವೂ ಸಹ ಅದೇರೀತಿ ಹೇಳುತ್ತಿದ್ದೀರಿ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಇರುವ ವಿಚಾರವನ್ನು ಸಾರಿಗೆ ಇಲಾಖೆ ಮೇಲೆ ಯಾವ ರೀತಿ ಕೇಳಲು ಬರುತ್ತದೆ ? ತಾವು ಈಗಲೇ ಅವಕಾಶ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ? ಆದರೆ ಈ ಸಮಾಜ ಕಲ್ಯಾಣ ಇಲಾಖೆ ಮೇಲಿನ ಬೇಡಿಕೆಗಳು ಪಾಸಾದವು ಎಂದು ಹೇಳಿದ ಮೇಲೆ ತಮ್ಮ ರೂಲಿಂಗ್‌ನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಈ ಮೊದಲು ಭಾಷಣ ಮಾಡಲು ಅವಕಾಶ ಸಿಗದಿದ್ದವರಿಗಾದರೂ ಕ್ಲಾರಿಫಿಕೇಶನ್ ಕೇಳಲು ತಾವು ಅವಕಾಶ ಕೊಡಬೇಕಾಗಿತ್ತು ? ನಾನು ಇಷ್ಟೆಲ್ಲಾ ಹೇಳಿದ ಮೇಲೆ ನಿಮ್ಮ ಮನಸ್ಸಿಗೆ ಹೇಗನಿಸುತ್ತದೆ ?

ಅಧ್ಯಕ್ಷರು.—ನೀವು ಹೇಳಿದ್ದು ಯೋಗ್ಯವಿದೆ ಮತ್ತು ನಾನು ರೂಲಿಂಗ್ ಕೊಟ್ಟಿರುವುದೂ ಸಹ ಯೋಗ್ಯವಿದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ ಪ್ರಶ್ನೆ ಕೇಳುವುದು ಬೇಡವೇ ?

ಅಧ್ಯಕ್ಷರು.—ಈ ಮೊದಲಿನ ಕಾರ್ಯಕ್ರಮದ ಪ್ರಕಾರ ೧೬ನೇ ತಾರೀಖಿನೊಳಗಾಗಿ ಎಲ್ಲ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಉತ್ತರ ಮುಗಿಯಬೇಕಾಗಿತ್ತು. ಆದರೆ ಸಾರಿಗೆ ಇಲಾಖೆ ಬಿಟ್ಟರೆ ಇನ್ನೂ ೩೦ ಡಿಮ್ಯಾಂಡ್‌ಗಳಿವೆ. ಇನ್ನು ೪ ದಿವಸಗಳು ಮಾತ್ರ ಉಳಿದಿವೆ. ನನ್ನ ಉದ್ದೇಶವೇನೆಂದರೆ, ಉಳಿದಿರುವ ಡಿಮ್ಯಾಂಡ್‌ಗಳನ್ನು ಗಿಲಟಿನ್‌ಗೆ ಹಾಕಬಾರದು, ಎಲ್ಲ ಡಿಮ್ಯಾಂಡ್‌ಗಳ ಮೇಲೂ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು. ಬಿಸ್‌ನೆಸ್ ಅಡ್ವೈಜರಿ ಕಮಿಟಿ ತೀರ್ಮಾನದ ಪ್ರಕಾರ ಇಲ್ಲಿ ಕಾರ್ಯಕಲಾಪ ನಡೆಯಬೇಕಾಗುತ್ತದೆ. ಇನ್ನೂ ೩೦ ಡಿಮ್ಯಾಂಡ್‌ಗಳು ಉಳಿದಿವೆ. ಸಮಾಜ ಕಲ್ಯಾಣ ಇಲಾಖೆ ಡಿಮ್ಯಾಂಡ್‌ಗಳ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಮೇಲೆ ಕ್ಲಾರಿಫಿಕೇಷನ್ ಕೇಳಲು ನಾನು ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ. ಒಂದುವೇಳೆ ಅತಿ ಮುಖ್ಯವಾಗಿ ಏನಾದರೂ ಕೇಳುವುದಿದ್ದರೆ, ಆ ಬಗ್ಗೆ ನಿಯಮ ೩೩೪ರ ಪ್ರಕಾರ ನೋಟೀಸ್ ಆಗಲೀ ಅಥವಾ ಗಮನಸೆಳೆಯುವ ಸೂಚನೆಯನ್ನಾಗಲೀ ಕಳುಹಿಸಿಕೊಟ್ಟರೆ ಅದನ್ನು ನಾಳೆ ಅಥವಾ ನಾಡಿದ್ದು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸುತ್ತೇನೆ. ಈಗ ಇದು ಮುಕ್ತಾಯವಾಗಿದೆ. ಈಗ ಮಾನ್ಯ ಸಾರಿಗೆ ಸಚಿವರು ಉತ್ತರ ಕೊಡುತ್ತಾರೆ.

(ಸಭೆಯಲ್ಲಿ ಗೊಂದಲ)

ಶ್ರೀ **ಟಿ.ಜಿ.**ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ.

ಶ್ರೀ **ಪಟಮಕ್ಕಿರತ್ನಾಕರ್.**—ತಾವು ನಮಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಮಾಡಿಕೊಡಬೇಕು ?

ಅಧ್ಯಕ್ಷರು.— ನಾನು ಒಂದೊಂದು ಜಿಲ್ಲೆಯ ಒಬ್ಬೊಬ್ಬ ಮಾನ್ಯ ಸದಸ್ಯರಿಗೆ ಕ್ಲಾರಿಫಿಕೇಶನ್ ಕೇಳಲು ಅವಕಾಶ ಮಾಡಿಕೊಟ್ಟಿದ್ದೇನೆ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ತಾವು ೫ ಜನರು ಆಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ. ಈಗ ತಾವು ಏನು ಹೇಳಿದರೂ ಸಹ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರನ್ನು ಕುಳಿತುಕೊಳ್ಳುವಂತೆ ವಿರೋಧಪಕ್ಷದ ಉಪನಾಯಕರು ಹೇಳಬೇಕು.

(ಗೊಂದಲ)

೧೨–೩೦ ಪಿ. ಎಂ.

ಶ್ರೀ ಕೆ. ಕುಶಾಲ.—ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಸರ್ಕಾರ ನೆಗ್ಲೆಕ್ಟ್ ಮಾಡಿದೆ.

ಅಧ್ಯಕ್ಷರು.—ಚರ್ಜೆ ಮುಕ್ತಾಯವಾಗಿದೆ, ಓಟಿಗೆ ಹಾಕಿದ್ದೇನೆ, ಡಿಮ್ಯಾಂಡ್ ಪಾಸ್ ಆಗಿದೆ ಎಂದು ಹೇಳಿದ್ದೇನೆ. ಈಗ ಸಾರಿಗೆ ಮಂತ್ರಿಗಳಿಂದ ಉತ್ತರ.

ಸಾರಿಗೆ ಇಲಾಖೆಯ ಬೇಡಿಕೆಗಳ ಚರ್ಚೆಗೆ ಸಚಿವರಿಂದ ಉತ್ತರ

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು)—ಸನ್ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಮಾನ್ಯ ಸದಸ್ಯರುಗಳು ಅನೇಕ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ರಚನಾತ್ಮಕವಾದ ಟೀಕೆಯನ್ನೂ ಸಹಿತ ಮಾಡಿದ್ದಾರೆ. ಕೆಲವರು ತಮಗೆ ಸಿಕ್ಕಿರತಕ್ಕಂಥ ತಪ್ಪು ಮಾಹಿತಿಗಳ ಆಧಾರದ ಮೇಲೆ ಕೆಲವೊಂದು ವಿಷಯಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಿಂದ ಮಾನ್ಯ ಸದಸ್ಯರು ಎತ್ತಿರತಕ್ಕಂಥ ವಿಷಯಗಳ ಬಗ್ಗೆ ನಾನು ವಿವರಣೆಯನ್ನು ಕೊಡುವುದರ ಜೊತೆಗೆ ಸಾರಿಗೆ ಇಲಾಖೆ ಕಳೆದ ೩-೪ ವರ್ಷಗಳಲ್ಲಿ ಮಾಡಿರತಕ್ಕಂಥ ಕೆಲಸ ವಿಶೇಷವಾಗಿ ಕಳೆದ ವರ್ಷ ಮಾಡಿರತಕ್ಕಂಥ ಕೆಲಸಗಳ ಬಗ್ಗೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಸಾರಿಗೆ ಇಲಾಖೆ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ನಮ್ಮ ರಾಜ್ಯದಲ್ಲಿ ಒಟ್ಟು ೧೦ ಲಕ್ಷಕ್ಕೂ ಹೆಚ್ಚು ವಾಹನಗಳು ಇದ್ದು ಪ್ರತಿ ವರ್ಷವೂ ಸಹಿತ ಒಂದು ಲಕ್ಷ ವಾಹನಗಳು ಹೆಚ್ಚುತ್ತಾ ಇದೆ. ಈ ಒಂದು ಲಕ್ಷ ವಾಹನಗಳ ಸಂಖ್ಯೆ ಹೆಚ್ಚಾಗುತ್ತಾ ಇರುವುದರಿಂದಾಗಿ ಪ್ರಯಾಣಿಕರ ಸಂಖ್ಯೆ ಅದೇ ಪ್ರಮಾಣದಲ್ಲಿ ಹೆಚ್ಚಾಗುತ್ತಾ ಇರುವುದರಿಂದ ಪ್ರಯಾಣಿಕರ ಬೇಡಿಕೆಗಳು ಹೆಚ್ಚಾಗುತ್ತಾ ಇದೆ. ಹಾಗೆಯೇ ಅಪಘಾತಗಳ ಸಂಖ್ಯೆ ಕೂಡ ಸ್ವಲ್ಪಮಟ್ಟಿಗೆ ಹೆಚ್ಚಾಗಿದೆ. ಇದರ ಬಗ್ಗೆ ನನಗೂ ಸಹಿತ ನೋವು ಇದೆ. ಜೊತೆಗೆ ಈ ವಾಹನಗಳಿಂದ ಸಾಕಷ್ಟು ಪರಿಸರ ಮಾಲಿನ್ಯ ಕೂಡ ಹೆಚ್ಚಾಗುತ್ತಾ ಇದೆ. ಈ ಬೇಡಿಕೆಗಳಿಗೆ ಅನುಸಾರವಾಗಿ, ವಾಹನಗಳ ಸಂಖ್ಯೆಯನ್ನು ಹೆಚ್ಚು ಮಾಡತಕ್ಕಂಥಾದ್ದು ಪ್ರಯಾಣಿಕರಿಗೆ ಸೌಕರ್ಯವನ್ನು ಹೆಚ್ಚು ಮಾಡತಕ್ಕಂಥಾದ್ದು, ವಾಹನಗಳು ಹೋಗಲಿಕ್ಕೆ ರಸ್ತೆಗಳನ್ನು ಅಗಲ ಮಾಡತಕ್ಕಂಥಾದ್ದು, ರಸ್ತೆ ಸುರಕ್ಷತೆ ಬಗ್ಗೆ ಗಮನ ಕೊಡತಕ್ಕಂಥಾದ್ದು ಇವುಗಳ ಬಗ್ಗೆ ಸ್ವಾಭಾವಿಕವಾಗಿ ಸರ್ಕಾರ ಗಮನವನ್ನು ಕೊಡಬೇಕಾಗಿದೆ. ಈ ಒಂದು ಜನಗಳ ಬೇಡಿಕೆಯನ್ನು ಪೂರೈಸಲಿಕ್ಕೆ ಕಳೆದ ಎರಡು ವರ್ಷಗಳಲ್ಲಿ ನಾವು ಮಾಡಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಬಹಳ ಸಂತೋಷದಿಂದ ಹೇಳಲಿಕ್ಕೆ ಬಯಸುತ್ತೇನೆ. ಇತ್ತೀಚೆಗೆ ಸಾರಿಗೆ ಸಮಸ್ಯೆ ಏನು ಬೆಳೆದಿದೆ. ಆ ಬೆಳವಣಿಗೆಯ ಮಟ್ಟ ಏನಿದೆ ಅದು ಕಳೆದ ೨೫ ವರ್ಷಗಳ ಕಾಲದಲ್ಲಿ ಆಗಲಿಲ್ಲ. ಮುಖ್ಯವಾಗಿ ಪ್ರಯಾಣಿಕರ ಸೌಕರ್ಯದ ಕಡೆಗೆ, ರಸ್ತೆ ಸುರಕ್ಷತೆ ಕಡೆಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಈ ಸರ್ಕಾರ ರಸ್ತೆ ಸಾರಿಗೆ ರಾಷ್ಟ್ರೀಕರಣ ಮಾಡಲಿಕ್ಕೆ ಒಂದು ದಿಟ್ಟ ಹೆಜ್ಜೆಯನ್ನು ಹಾಕಿದೆ. ಕೆಲವು ಸದಸ್ಯರು ಮಾತನಾಡುತ್ತಾ ಈ ರಾಷ್ಟ್ರೀಕರಣ ಮಾಡತಕ್ಕಂಥಾದ್ದರ ಬಗ್ಗೆ ಮಂತ್ರಿಗಳಿಗೆ ಅಥವಾ ಸರ್ಕಾರಕ್ಕೆ ದುರುದ್ದೇಶ ಇದೆ ಎಂದು ಕೆಲವರು ಹೇಳಿದರೆ ಮತ್ತೆ ಕೆಲವು ಸದಸ್ಯರು ರಾಷ್ಟ್ರೀಕರಣ ಮಾಡದೆ ಖಾಸಗಿ ಬಸ್‌ನವರ ಜೊತೆಯಲ್ಲಿ ಶಾಮೀಲಾಗಿರತಕ್ಕಂಥ ಕೆಲಸವನ್ನು ಸರ್ಕಾರ ಮಾಡಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡತಕ್ಕ

ಸಂದರ್ಭದಲ್ಲಿ ಒಂದು ವಿಶೇಷವಾದಂಥ ಸಂದರ್ಭವನ್ನು ಬಿಟ್ಟು ಬಾಕಿ ಎಲ್ಲಾ ಸಂದರ್ಭದಲ್ಲೂ ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಮಾನ್ಯ ಸದಸ್ಯರ ಪ್ರತಿಯೊಂದು ಪ್ರಶ್ನೆಗೂ ಉತ್ತರವನ್ನು ಕೊಡಲಿಕ್ಕೆ ಬಯಸುತ್ತೇನೆ. ರಾಷ್ಟ್ರೀಕರಣ ಮಾಡಿದೆ. ಖಾಸಗೀಯವರ ಜೊತೆಯಲ್ಲಿ ಶಾಮೀಲಾಗಿದ್ದಾರೆಂದು ಕೆಲವರು ಹೇಳಿದರು. ಅದೇ ಸದಸ್ಯರುಗಳು ರಾಷ್ಟ್ರೀಕರಣ ಮಾಡಿ, ಚಾಸಿಗಳನ್ನು ಕೊಳ್ಳುವುದರಲ್ಲಿ ಕಮೀಷನ್ ಪಡೆಯುತ್ತಿದ್ದಾರೆಂದು ವಿರೋಧಾಭಾಸವಾದಂಥ ಮಾತುಗಳನ್ನು ಹೇಳಿದ್ದಾರೆ. ರಾಷ್ಟ್ರೀಕರಣದ ಬಗ್ಗೆ ತತ್ವ ದೃಷ್ಟಿಯಿಂದ ಚರ್ಚೆ ಮಾಡಲು ನಾನು ಬಯಸುವುದಿಲ್ಲ. ಅದಕ್ಕೆ ಸಮಯ ಆಗುತ್ತದೆ. ಈ ಸರ್ಕಾರಕ್ಕೆ ರಾಷ್ಟ್ರೀಕರಣದಲ್ಲಿ ಸಂಪೂರ್ಣವಾದ ನಂಬಿಕೆ ಇದೆ. ೧೯೭೭ರ ನಂತರ ಯಾವ ಸರ್ಕಾರವೂ ಸಹ ರಾಷ್ಟ್ರೀಕರಣವನ್ನು ಸಂಪೂರ್ಣವಾಗಿ ಮಾಡಲಿಲ್ಲ. ಈ ಮಾತನ್ನು ನಾನು ಹೆಮ್ಮೆಯಿಂದ ಹೇಳಬಲ್ಲೆ. ಗುಲ್ಬರ್ಗ, ಬೀದರ್ ರಾಯಚೂರು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡುವುದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಚಿತ್ರದುರ್ಗ, ದಾವಣಗೆರೆ ಮಧ್ಯೆ ಇರತಕ್ಕ ರಸ್ತೆಯನ್ನೂ ಕೂಡ ರಾಷ್ಟ್ರೀಕರಣ ಮಾಡಿರತಕ್ಕಂಥ ಕೀರ್ತಿ ಇವತ್ತು ನಮ್ಮ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. ರಾಷ್ಟ್ರೀಕರಣದಿಂದ ಯಾವುದೇ ರೀತಿಯ ಉಪಯೋಗ ಸಾರ್ವಜನಿಕರಿಗೆ ಆಗುವುದಿಲ್ಲ. ರಾಷ್ಟ್ರೀಕರಣ ಮಾಡುವುದರಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತದೆ. ಪ್ರಯಾಣಿಕರಿಗೆ ಯಾವುದೇ ರೀತಿಯ ಉಪಯೋಗ ಇಲ್ಲ ಎನ್ನುವ ಮಾತನ್ನು ಕೆಲವು ಸದಸ್ಯರು ಹೇಳಿದ್ದಾರೆ. ಇದು ತಪ್ಪು ಕಲ್ಪನೆ ಎಂದು ನಾನು ಹೇಳುತ್ತೇನೆ. ರಾಷ್ಟ್ರೀಕರಣ ಆದ ಮೇಲೆ, ಬೀದರ್ ಗುಲ್ಬರ್ಗ, ರಾಯಚೂರು ಜಿಲ್ಲೆಯ ಸುಮಾರು ೨೫೮೪ ಹಳ್ಳಿಗಳಿಗೆ ಮತ್ತು ಆ ಹಳ್ಳಿಗಳ ಜನ ೧೦–೧೫ ಮೈಲಿ ದೂರದವರೆಗೆ ನಡೆದುಕೊಂಡು ಹೋಗತಕ್ಕ ಪರಿಸ್ಥಿತಿ ಏನಿತ್ತು ಆ ಪರಿಸ್ಥಿತಿ ಇವತ್ತು ಇಲ್ಲ. ರಾಷ್ಟ್ರೀಕರಣವಾದ ಮೇಲೆ ೩ ಜಿಲ್ಲೆಗಳಲ್ಲಿ ೨೫೮೪ ಹಳ್ಳಿಗಳ ಜನಗಳಿಗೆ ಸಾರಿಗೆ ಸೌಕರ್ಯವನ್ನು ಒದಗಿಸಿಕೊಡಲಾಗಿದೆ. ಕಳೆದ ೪ ವರ್ಷದಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಹಳ್ಳಿಗಳಿಗೆ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡಲಾಗಿದೆ. ಇದು ಮಹತ್ ಸಾಧನೆ ಇಂತಹ ಸಾಧನೆಯನ್ನು ನಮ್ಮ ಸರ್ಕಾರ ಮಾಡಿದೆಯೆಂದು ಹೆಮ್ಮೆಯಿಂದ ಈ ಸಂದರ್ಭದಲ್ಲಿ ಹೇಳುತ್ತೇನೆ. ಖಾಸಗಿ ಬಸ್ಸಿನವರು ಲಾಭ ಮಾಡುತ್ತಾರೆ, ಕೆ.ಎಸ್.ಆರ್.ಟಿ.ಸಿ.ಯವರು ನಷ್ಟವನ್ನು ಅನುಭವಿಸುತ್ತಿದ್ದಾರೆಂಬ ತಪ್ಪು ಕಲ್ಪನೆ ಇದೆ. ಅನೇಕ ಮಾನ್ಯ ಸದಸ್ಯರು ಖಾಸಗಿಯವರು ಈ ವರ್ಷ ಒಂದು ಬಸ್ಸನ್ನು ಇಟ್ಟರೆ ಮುಂದಿನ ವರ್ಷ ಎರಡು ಬಸ್ಸನ್ನು ಇಡುತ್ತಾರೆಂದು ಹೇಳಿದರು. ಸಾರಿಗೆ ಸಂಸ್ಥೆ ಕೂಡ ಲಾಭ ಮಾಡುತ್ತಿದೆ, ಸರಿಯಾಗಿ ತಿಳಿದುಕೊಳ್ಳದೆ ಮಾತನಾಡುವುದು ಸರಿಯಲ್ಲ. ಸಾರಿಗೆ ಸಂಸ್ಥೆ ನಷ್ಟವನ್ನು ಮಾಡುತ್ತಿಲ್ಲ. ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲರು ಬ್ಯಾಂಕ್ ರಾಷ್ಟ್ರೀಕರಣ ಮಾಡಿದಂತ ನಾವು ಬಸ್ಸುಗಳ ರಾಷ್ಟ್ರೀಕರಣ ಮಾಡಲಿಕ್ಕೆ ಹಿಂದೆ ಸರಿಯುವುದಿಲ್ಲವೆಂದು ಹೇಳಿದರು. ದುರಾದೃಷ್ಟವಶಾತ್ ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರದವರು ಮೋಟಾರ್ ವಾಹನಗಳಿಗೆ ಸಂಬಂಧಪಟ್ಟಂತೆ ಇದ್ದಂಥ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿದ್ದಾರೆ. ಇದರಿಂದ ಖಾಸಗೀ ಬಸ್ಸಿನವರಿಗೆ ಅನುಕೂಲವಾಗಿದೆ. ಇದು ದುರಾದೃಷ್ಟದ ಸಂಗತಿ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ನಾನು ಮಾತನಾಡತಕ್ಕ ಸಂದರ್ಭದಲ್ಲಿ ಈ ಆಕ್ಟ್‌ಗೆ ಅಮೆಂಡ್‌ಮೆಂಟ್ ಮಾಡಿರುವುದರಿಂದ ಸಾರಿಗೆ ಸಂಸ್ಥೆಯ ಬಸ್ಸುಗಳಿಗೆ ಬಹಳ ಅನ್ಯಾಯವಾಗಿದೆಯೆಂದು ಹೇಳಿದ್ದೇನೆ. ಇತ್ತೀಚೆಗೆ ಬಂದಿರುವಂತಹ ಮೆಟಡೋರ್ ವಾಹನಗಳಲ್ಲಿ ೨೦ ರಿಂದ ೨೫ ಜನ ಕೊಂಡೆ ಯ್ಯುವಂತಹ ಲಿಬರಲೈಜೇಷನ್ ಪಾಲಿಸಿಯಿಂದ ಸಾರಿಗೆ ಸಂಸ್ಥೆಗಳಿಗೆ ಬಹಳ ತೊಂದರೆಯಾಗುತ್ತಿದೆ ಎನ್ನುವ ಅಂಶವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇನೆ. ರಾಷ್ಟ್ರೀಕರಣ ಏನು ಇದೆ ಇದು ಕೇವಲ ತತ್ವದ ದೃಷ್ಟಿಯಿಂದಲ್ಲ. ಜನಸಾಮಾನ್ಯರಿಗೆ ಹೆಚ್ಚಿಗೆ ಸಾರಿಗೆ ವ್ಯವಸ್ಥೆಯನ್ನು ಮಾಡುವ ದೃಷ್ಟಿಯಿಂದ ಈ ತತ್ವಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಈ ಮಾತನ್ನು ಹೆಮ್ಮೆಯಿಂದ ಹೇಳುತ್ತೇನೆ. ನಾಲ್ಕು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಿರುವುದು ಅಷ್ಟೇ ಅಲ್ಲ. ಮುಂದೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಹಂತ ಹಂತವಾಗಿ ರಾಷ್ಟ್ರೀಕರಣ ಮಾಡಲಾಗುವುದು. ಈ ವರ್ಷ ಮೈಸೂರು, ಮತ್ತು ಕೋಲಾರ ಜಿಲ್ಲೆಗಳಲ್ಲಿ ಖಾಸಗಿ ಬಸ್ಸುಗಳ ರಾಷ್ಟ್ರೀಕರಣ ಮಾಡುವ ಇಚ್ಛೆ ಸರ್ಕಾರಕ್ಕೆ ಇದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾರಿಗೆ ಸಂಸ್ಥೆಯ ಆಡಳಿತದಲ್ಲಿ ಸುಧಾರಣೆ ತಂದಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ನಾನು ತುಂಬಾ ಚಿರಋಣಿಯಾಗಿದ್ದೇನೆ. ಆಡಳಿತದಲ್ಲಿ ಇನ್ನು ಬಿಗಿ ಕ್ರಮ ತೆಗೆದುಕೊಂಡು ಸುಧಾರಣೆ ಮಾಡಬೇಕೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಕೆಲವೊಂದು ಅಂಕಿಸಂಖ್ಯೆಗಳನ್ನು ಮಾನ್ಯ ಸದಸ್ಯರ ಗಮನಕ್ಕೆ

ತರುವುದಕ್ಕೆ ಇಚ್ಛಿಪಡುತ್ತೇನೆ. ೧೯೭೩ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ೧ ಲೀಟರಿಗೆ ಮೂರುವರೆ ಅಥವಾ ೩.೬ ಕಿ.ಮೀ. ಬಸ್ಸು ಓಡುತ್ತಿತ್ತು. ಈಗ ೧ ಲೀಟರ್ ಡೀಸಲ್‌ಗೆ ೪.೩೭ ಕಿ.ಮೀ.ನಂತೆ ಓಡುತ್ತಿವೆ. ಅಂದರೆ ೦.೧ ಇಂಪ್ರೂವ್‌ಮೆಂಟ್ ಆದರೂ ೧ ವರ್ಷಕ್ಕೆ ಕನಿಷ್ಟಪಕ್ಷ ೧ ರಿಂದ ಒಂದೂವರೆ ಕೋಟಿ ರೂಪಾಯಿಯಷ್ಟು ಆದಾಯ ಉಳಿತಾಯ ಸಾರಿಗೆ ಸಂಸ್ಥೆಗೆ ಆಗುತ್ತದೆ. ೧೯೭೩ನೇ ಇಸವಿಯಲ್ಲಿ ಇದ್ದಂಥ ೩.೯ ರಿಂದ ಇವೊತ್ತು ೪.೩೭ಕ್ಕೆ ಹೋಗಿರುವುದರ ಜೊತೆಗೆ ಈ ವರ್ಷ ೪.೬ಕ್ಕೆ ಹೋಗಬೇಕೆಂದು ಗುರಿಯನ್ನು ಹೊಂದಿ ಅಧಿಕಾರಿಗಳಿಗೆ ನಿಯುಕ್ತಿ ಮಾಡಿ ಅವಕ್ಕೆ ತಕ್ಕಂತೆ ಸಿಬ್ಬಂದಿ ವರ್ಗದವರನ್ನು ತರಬೇತಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಒಂದು ಟೈರಿನ ಜೀವ ೫೩ ಸಾವಿರ ಕಿಲೋ ಮೀಟರ್ ಇದ್ದುದು, ಇವೊತ್ತು ಅದೇ ಟೈರು ೯೦ ಸಾವಿರ ಕಿಲೋಮೀಟರ್ ಓಡಾಡುತ್ತಿದೆ ಎನ್ನುವುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ನಾವು ಇದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ, ಹೇಗೆ ತೆಗೆದುಕೊಂಡಿದ್ದೇವೆ ಎಂದರೆ, ಮುಂಚೆ ರೀಟ್ರೇಡಿಂಗ್ ಮಾಡಲಿಕ್ಕೆ ಖಾಸಗಿಯವರಿಗೆ ಕೊಡುತ್ತಿದ್ದರು. ಕೋಲ್ಡ್ ಪ್ರೊಸೆಸ್ ಮಾಡುತ್ತಾ ಇರಲಿಲ್ಲ. ಇವೊತ್ತು ಲೇಟೆಸ್ಟ್ ಕೋಲ್ಡ್ ಪ್ರೋಸೆಸ್ ಪ್ಲಾಂಟ್‌ನ್ನು ನಮ್ಮ ಸಾರಿಗೆ ಸಂಸ್ಥೆಯಲ್ಲಿ ೧೩ ಡಿವಿಜನ್‌ಗಳಲ್ಲಿ ಮಾಡಿದ್ದರಿಂದ ಆ ಪ್ಲಾಂಟ್ ಮುಖಾಂತರ ನಾವು ರೀಟ್ರೇಡಿಂಗ್ ಪ್ರಾರಂಭ ಮಾಡಿದ್ದೇವೆ. ಮೊದಲು ಒಂದು ಟೈರು ೫೦ ಸಾವಿರ ಕಿಲೋ ಮೀಟರ್ ಓಡಾಡುತ್ತಿದ್ದುದು, ಇವೊತ್ತು ೯೦ ಸಾವಿರ ಕಿಲೋ ಮೀಟರ್ ಓಡಾಡುತ್ತಿವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ವಾಹನ ಒಂದು ದಿವಸಕ್ಕೆ ೨೭೬ ಕಿಲೋ ಮೀಟರ್ ಓಡುತ್ತಿದ್ದುದು ಇವೊತ್ತಿನ ದಿವಸ ೨೯೬ ಕಿಲೋ ಮೀಟರ್ ಓಡುತ್ತಿದೆ. ಅಂದರೆ ಅದರ ಅರ್ಥ ಹೆಚ್ಚಿನ ಬಂಡವಾಳವನ್ನು ಹಾಕದೆ ಹೆಚ್ಚಿನ ಸಿಬ್ಬಂದಿಯನ್ನು ಹಾಕದೆ ಒಂದು ದಿವಸಕ್ಕೆ ೨೦ ಕಿಲೋ ಮೀಟರ್ ಒಂದು ಬಸ್ಸು ಹೆಚ್ಚು ಓಡುತ್ತಿದೆ ಅಂದರೆ ಅಲ್ಲಿ ಟ್ರಾಫಿಕ್ ಸೆಕ್ಷನ್‌ನಲ್ಲಿರತಕ್ಕ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಅವರಿಗೆ ಬೆನ್ನು ತಟ್ಟಬೇಕೆಂದು ನನ್ನ ಅಭಿಪ್ರಾಯ. ಇದರ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಐದು ಸಾವಿರ ಹಳ್ಳಿಗಳಿಗೆ ಬಸ್ ವ್ಯವಸ್ಥೆಯನ್ನು ಕಳೆದ ನಾಲ್ಕು ವರ್ಷಗಳಲ್ಲಿ ಹೊಸದಾಗಿ ಒದಗಿಸಿ ಕೊಟ್ಟಿದ್ದೇವೆ. ಇದು ಅಷ್ಟೇ ಅಲ್ಲ, ಎರಡು ಸಾವಿರದ ಐದುನೂರು ಹೊಸ ಬಸ್ಸುಗಳನ್ನು ಸಾರಿಗೆ ಸಂಸ್ಥೆಗೆ ನಾವು ಸೇರಿಸಿದ್ದೇವೆ. ಒಂದು ವರ್ಷದಲ್ಲಿ ೪೭ ಕೋಟಿ ಕಿಲೋ ಮೀಟರ್ ಓಡಾಡುತ್ತಾ ಇದ್ದುದು, ಇವೊತ್ತು ನಮ್ಮ ಸಾರಿಗೆ ಬಸ್ಸುಗಳು ಒಂದು ವರ್ಷದಲ್ಲಿ ೮೩ ಕೋಟಿ ಕಿಲೋ ಮೀಟರ್ ಅಷ್ಟು ಓಡಾಡುತ್ತಿವೆ ಅಂದರೆ ಐದು ವರ್ಷಗಳಲ್ಲಿ ಹಿಂದೆ ಇಪ್ಪತ್ತೈದು ವರ್ಷಗಳಲ್ಲಿ ಸಾರಿಗೆ ಸಂಸ್ಥೆ ಎಷ್ಟು ಕೆಲಸವನ್ನು ಮಾಡಿದೆ ಅಷ್ಟು ಕೆಲಸವನ್ನು ಕಳೆದ ಐದು ವರ್ಷಗಳಲ್ಲಿ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ವಾಹನಗಳನ್ನು ಆಗುತ್ತಿದ್ದಂತಹ ಬ್ರೇಕ್‌ಡೌನ್ ಬಹಳ ಕಡಿಮೆಯಾಗಿದೆ. ಇವೊತ್ತು ನಮಗೆ ಹೆಮ್ಮೆಯಾಗುವುದು ಏನೆಂದರೆ, ನಮ್ಮ ಬಸ್ಸುಗಳು ಹಿಂದುಸ್ಥಾನದಲ್ಲಿ ಯಾವ ಸಾರಿಗೆ ಸಂಸ್ಥೆಯೂ ಸಹಿತ ಇಷ್ಟೊಂದು ಕಡಿಮೆ ಬ್ರೇಕ್‌ಡೌನ್ ಆಗತಕ್ಕ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ಸ್ ಇಲ್ಲ ಇದನ್ನು ಕೇಂದ್ರ ಸರ್ಕಾರ ಹೇಳಿದೆ. ಇದು ಪಾಯಿಂಟ್ ೫ ರಿಂದ ಪಾಯಿಂಟ್ ೧ಕ್ಕೆ ಇಳಿದಿದೆ. ಕ್ಯಾನ್ಸಲೇಷನ್ ಅಲ್‌ಮೋಸ್ಟ್ ನಿಲ್ ಮಾಡಿದ್ದೇವೆ. ಎಕ್ಸ್‌ಪ್ರೆಸ್, ನಾನ್‌ಸ್ಟಾಪ್ ಇವೆಲ್ಲವನ್ನೂ ಸಹಿತ ಜೀರೋ ಪಾಯಿಂಟ್‌ಗೆ ನಾವು ಕ್ಯಾನ್ಸಲೇಷನ್ ತೆಗೆದುಕೊಂಡು ಬಂದಿದ್ದೇವೆ ಅಂದರೆ ದೊಡ್ಡ ಸಾಧನೆ ಎಂದು ತಿಳಿದುಕೊಂಡಿದ್ದೇನೆ. ಕೇವಲ ಲಾಭ ಮತ್ತು ನಷ್ಟದ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಯಾವರೀತಿಯಲ್ಲಿ ಆಡಳಿತದಲ್ಲಿ ಬಿಗಿಯನ್ನು ತಂದು ಆಡಳಿತವನ್ನು ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಇದು ಹೇಗೆ ಆಯಿತು ಕೇವಲ ನಾಲ್ಕು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದರಿಂದ ಅಲ್ಲ, ಮುಂಚೆ ಡಿಪೋ ಏನು ಇದೆ, ಅಲ್ಲಿ ತ್ರೀ ಟೈರ್ ಸಿಸ್ಟಮ್ ಇತ್ತು. ಡಿವಿಜನ್ ಎಂದು ಇತ್ತು, ರೀಜನಲ್ ವರ್ಕ್‌ಷಾಪ್ ಎಂದು ಇತ್ತು, ಡಿಪೋ ಎಂದು ಇತ್ತು. ಈಗ ಟೂ ಟೈರ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡಿದ್ದೇವೆ. ಎರಡು ವರ್ಷಗಳ ಹಿಂದೆಯೇ ಈ ಸುಧಾರಣೆಯ ಬಗ್ಗೆ ಹೇಳಿದ್ದೆ. ಇವೊತ್ತು ನಾವು ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಟೂ ಟೈರ್ ಸಿಸ್ಟಮ್ ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ಹಾಸನದಲ್ಲಿ ರೀಜನಲ್ ವರ್ಕ್‌ಷಾಪ್ ಮಾಡಬೇಕೆಂದು ಹೇಳಿ ಮೂರು ವರ್ಷದ ಹಿಂದೆ ಇದ್ದಂಥ ಕಾರ್ಯಕ್ರಮವನ್ನು ರದ್ದು ಮಾಡಿದ್ದೇವೆ. ಯಾವ ಕಾರಣದಿಂದ ರದ್ದು ಮಾಡಿದ್ದೇವೆಂದು ಹೇಳಿದರೆ, ಇವೊತ್ತು ಟೂ ಟೈರ್ ಸಿಸ್ಟಮ್‌ನ್ನು ನಾವು ಜಾರಿಗೆ ತರಬೇಕೆಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಇದರಿಂದ ಡಿಪೋನಲ್ಲಿಯೇ ಬಸ್ಸು ರಿಪೇರಿ

ಮಾಡಬಹುದು. ಅದನ್ನು ಡಿವಿಜನ್ ವರ್ಕ್‌ಷಾಪ್‌ಗೆ ಆಗಲಿ, ರೀಜನಲ್ ವರ್ಕ್‌ಷಾಪ್‌ಗಾಗಲಿ ತೆಗೆದುಕೊಂಡು ಹೋಗತಕ್ಕ ಪ್ರಮೇಯ ಬರುವುದಿಲ್ಲ, ಆ ಕಾರಣದಿಂದಾಗಿ ನಾವು ಇವೊತ್ತು ತ್ರೀ ಟೈರ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡುವುದು ಇಂಥ ಉತ್ತಮವಾದ ಕೆಲಸ ಮಾಡಿದ್ದೇವೆ. ನಮ್ಮ ಡಿಪೋಗಳಲ್ಲಿ ವರ್ಕರ್ಸ್ ಕೆಲಸ ಮಾಡಬೇಕಾದರೆ ಬೇಸಿಕ್ ಅಮಿನಿಟೀಸ್ ಬೇಕಾಗುತ್ತದೆ, ಈಗ ಬಸ್ಸು ಕ್ಲೀನ್ ಮಾಡಬೇಕೆಂದರೆ ಅಲ್ಲಿ ತೊಳೆಯಲಿಕ್ಕೆ ನೀರು ಬೇಕು. ನಮ್ಮ ಡಿಪೋಗಳಲ್ಲಿ ನೀರು ಸಿಕ್ಕುತ್ತಾ ಇರಲಿಲ್ಲ, ಕರೆಂಟ್ ಇರುತ್ತಾ ಇರಲಿಲ್ಲ, ಇದರ ಬಗ್ಗೆ ಯೋಚನೆ ಮಾಡಿ ಪ್ರತಿಯೊಂದು ಡಿಪೋಗಳಲ್ಲೂ ಸಹಿತ ಬೇಕಾದಷ್ಟು ನೀರು ಸಿಕ್ಕುವ ವ್ಯವಸ್ಥೆ ಮಾಡಿದ್ದೇವೆ. ಎಲ್ಲಿ ಬೋರ್‌ವೆಲ್ ನೀರು ಬೀಳುವುದಿಲ್ಲ ಅಲ್ಲಿ ಟ್ಯಾಂಕರ್ಸ್ ಕೊಟ್ಟಿದ್ದೇವೆ. ಪ್ರತಿಯೊಂದು ಡಿಪೋಗೂ ಜನರೇಟರ್ ಕೊಟ್ಟಿದ್ದೇವೆ. ಬಸ್ಸು ಬಂದತಕ್ಷಣ ಅವುಗಳನ್ನು ತೊಳೆಯಲಿಕ್ಕೆ ಮತ್ತೊಂದಕ್ಕೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಈ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ನಮ್ಮ ಬಹುತೇಕ ಡಿಪೋಗಳನ್ನು ಸುವ್ಯವಸ್ಥಿತವಾಗಿ ಇರುವುದರ ಜೊತೆಗೆ ನಮ್ಮ ಕಾರ್ಮಿಕರಿಗೆ ಒಳ್ಳೆಯ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳಿ ಇನ್‌ಸೆಂಟೀವ್ ಸಿಸ್ಟಂ ಇಂಟ್ರಡ್ಯೂಸ್ ಮಾಡಿದ್ದೇವೆ, ಇದು ಕೇವಲ ಕಂಡಕ್ಟರ್, ಡ್ರೈವರ್‌ಗೆ ಅಷ್ಟೇ ಅಲ್ಲ. ಸಮಯಕ್ಕೆ ಸರಿಯಾಗಿ ಬಸ್ಸುಗಳು ಬರುವುದು ಅಷ್ಟೆ ಅಲ್ಲ ಸಮಯಕ್ಕೆ ಸರಿಯಾಗಿ ಆ ಬಸ್ಸುಗಳು ಓಡಬೇಕು. ಇವಕ್ಕೆಲ್ಲಾ ಇನ್‌ಸೆಂಟೀವ್ ಇಂಟ್ರಡ್ಯೂಸ್ ಮಾಡಿರುವುದರಿಂದ, ಸಾರಿಗೆ ಸಂಸ್ಥೆಯಲ್ಲಿ ಕೆಲಸ ಬಹಳ ಚೆನ್ನಾಗಿ ನಡೆಯುತ್ತಿದೆ.

ಈ ಒಂದು ಕಾರಣದಿಂದಾಗಿ ನಾನು ಈಗಾಗಲೇ ಹೇಳಿದಂತೆ ಆಡಳಿತದಲ್ಲಿ ಸುಧಾರಣೆಯನ್ನು ಸಾಧನೆ ಮಾಡುವುದಕ್ಕೆ ಅನುಕೂಲವಾಗಿದೆ. ಇವತ್ತು ಒಂದು ಹೆಮ್ಮೆ ಎಂದರೆ ನಮ್ಮ ಹಿಂದೂಸ್ಥಾನ ದಲ್ಲಿರತಕ್ಕ ಬಹುತೇಕ ಸಾರಿಗೆ ಸಂಸ್ಥೆಗಳು ಅಂದರೆ ಅದರಲ್ಲೂ ಮುಖ್ಯವಾಗಿ ಗುಜರಾತ್, ಆಂಧ್ರ, ಕರ್ನಾಟಕ ಈ ಮೂರು ರಾಜ್ಯಗಳು ಆದರ್ಶವಾಗಿರತಕ್ಕ ಒಳ್ಳೆಯ ಕೆಲಸವನ್ನು ಮಾಡುತ್ತಿರುವ ಸಾರಿಗೆ ಸಂಸ್ಥೆಗಳಾಗಿವೆಯೆಂದು ಹೇಳುತ್ತಿದ್ದಾರೆ. ನಮ್ಮ ಕಣ್ಮುಂದಿರತಕ್ಕ ಇಂಧನ ಬಳಕೆ ಇರಬಹುದು, ಟೈರಿನ ಜೀವಾಳ ಇರಬಹುದು, ವೆಹಿಕಲ್ ಬಗ್ಗೆ ಇರಬಹುದು, ಅಥವಾ ನಮ್ಮ ಆದಾಯ ಇರಬಹುದು ಈ ಎಲ್ಲ ದೃಷ್ಟಿಯಿಂದಲೂ ಕೂಡ ನಮ್ಮ ಸಾರಿಗೆ ಸಂಸ್ಥೆ ಬಹಳ ಒಳ್ಳೆಯ ಕೆಲಸ ಮಾಡಿದೆ, ಇದಕ್ಕಾಗಿ ನಾನು ನಮ್ಮ ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ಮತ್ತು ಕಾರ್ಮಿಕರನ್ನೂ ಅಭಿನಂದಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಬಸ್ಸಿನ ಟಿಕೆಟ್ ಬೆಲೆಯನ್ನು ನಿಗದಿ ಮಾಡುವಾಗ ಈ ಸಾರಿಗೆ ಸಂಸ್ಥೆಯು ನಮ್ಮ ರಾಜ್ಯದ ಬೊಕ್ಕಸಕ್ಕೆ ಒಂದು ಆದಾಯವನ್ನು ತರಬೇಕೆಂಬ ದೃಷ್ಟಿಯಿಂದ ನಾವು ಮಾಡಿಲ್ಲ, ನೀವೂ ಮಾಡಿಲ್ಲ. ಹಿಂದಿನ ಸರ್ಕಾರವೂ ಮಾಡಿಲ್ಲ, ನಮ್ಮ ಸರ್ಕಾರವೂ ಮಾಡಿಲ್ಲ ಮತ್ತು ಮಾಡುವುದೂ ಇಲ್ಲ. ಆದರೆ ಕೆಲವು ವಿಷಯಗಳನ್ನು, ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ೧೯೮೨ನೇ ಇಸವಿಯಲ್ಲಿ ಒಂದು ಟೈರು ಮತ್ತು ಒಂದು ಟ್ಯೂಬಿನ ಬೆಲೆ ೨೫೦೦ ರೂಪಾಯಿಗಳಿತ್ತು. ಆದರೆ ಇವತ್ತು ಅದೇ ಒಂದು ಟೈರು ಮತ್ತು ಒಂದು ಟ್ಯೂಬಿಗೆ ೪೫೦೦ ರೂಪಾಯಿಗಳನ್ನು ನಾವು ಕೊಡಬೇಕಾಗಿದೆ. ಅಂದರೆ ೪೧ ಪರ್ಸೆಂಟ್ ಇಂಕ್ರೀಸ್ ಈ ಟೈರು ಮತ್ತು ಟ್ಯೂಬಿನ ಬೆಲೆಯಲ್ಲಿ ಆಗಿದೆ. ಡೀಸೆಲ್ ಬೆಲೆ ೨೮ ಪರ್ಸೆಂಟ್ ಜಾಸ್ತಿಯಾಗಿದೆ. ಹಿಂದೆ ಒಂದು ಛಾಸ್ಸಿಗೆ ೧.೫೫ ಲಕ್ಷ ರೂ. ಕೊಡುತ್ತಿದ್ದೆವು. ಆದರೆ ಅದೇ ಇವತ್ತು ಒಂದು ಛಾಸ್ಸಿಗೆ ೨.೨೪ ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ಇನ್ನು ಮನೆ ಬಾಡಿಗೆ ಭತ್ಯೆ ಎಷ್ಟು ಜಾಸ್ತಿಯಾಗಿದೆ ಎಂಬುದನ್ನು ನಾನು ಹೇಳುವುದಾದರೆ ಕಳೆದ ೩ ವರ್ಷಗಳ ಕಾಲದಲ್ಲಿ ಈ ಒಂದು ಡಿ.ಎ. ಇನ್‌ಸ್ಟಾಲ್‌ಮೆಂಟೂ ಸೇರಿ ಪ್ರತಿ ವರ್ಷ ನಮ್ಮ ಸಾರಿಗೆ ಸಂಸ್ಥೆಗೆ ೨೭ ಕೋಟಿ ರೂಪಾಯಿಗಳ ಹೆಚ್ಚಿನ ಭಾರ ಬಿದ್ದಿದೆ. ಇಷ್ಟಾದರೂ ಕೂಡ ನಾವು ೨ ಸಾರಿ ಮಾತ್ರ ಬೆಲೆ ಗಳನ್ನು ಹೆಚ್ಚಿಗ ಮಾಡಿರತಕ್ಕದ್ದು. ಇವತ್ತು ಇದನ್ನು ಹೆಚ್ಚಿಗೆ ಮಾಡಬೇಕೆಂಬ ಉದ್ದೇಶವೂ ಕೂಡ ನಮ್ಮ ಸರ್ಕಾರಕ್ಕೆ ಇಲ್ಲ. ನಮ್ಮ ಪಕ್ಕದ ರಾಜ್ಯಗಳಲ್ಲಿರತಕ್ಕ ಸಾರಿಗೆ ಬೆಲೆಗಳಿಗೆ ನಮ್ಮ ರಾಜ್ಯದ ಸಾರಿಗೆ ಬೆಲೆಗಳನ್ನು ಹೋಲಿಕೆ ಮಾಡಿದರೆ ಮಹಾರಾಷ್ಟ್ರದಲ್ಲಿ ೧ ಕಿಲೋಮೀಟರ್‌ಗೆ ಒಂದು ತಲೆಗೆ ೧೨ ಪೈಸೆ ಛಾರ್ಜ್ ಮಾಡುತ್ತಾರೆ. ಆಂಧ್ರದಲ್ಲಿ ೧೧.೫ ಪೈಸೆ ಛಾರ್ಜ್ ಮಾಡುತ್ತಾರೆ ತಮಿಳ್ನಾಡಿನಲ್ಲಿ ಮಾತ್ರ ೨ ಪೈಸೆ ಕಡಿಮೆ ಇಟ್ಟಿದ್ದಾರೆ. ಈ ಪ್ರಕಟಣೆಯನ್ನು ನಾವು ಮಾಡಿರತಕ್ಕದ್ದಲ್ಲ. ಕೇಂದ್ರ ಸರ್ಕಾರ ದವರು ಪ್ರಕಟಣೆ ಮಾಡಿರತಕ್ಕ ಅಂಕಿಅಂಶಗಳು ಇವು. ಇದರ ಜೊತೆಗೆ ನಮ್ಮ ನಗರ ಸಾರಿಗೆ ಏನಿದೆ

ಇದು ಇಡೀ ಹಿಂದೂಸ್ಥಾನದಲ್ಲೇ ಅತ್ಯಂತ ಕಡಿಮೆ ಇರತಕ್ಕದ್ದು. ಬೆಂಗಳೂರು ನಗರ ಸಾರಿಗೆಯಲ್ಲಿ ೨೪ ಕಿಲೋಮೀಟರ್‌ನ್ನು ಪ್ರಯಾಣ ಮಾಡಿದರೆ ೧.೭೫ ರೂಪಾಯಿಗಳನ್ನು ಕೊಡಬೇಕಾಗಿದೆ, ಇಷ್ಟೇ ಪ್ರಯಾಣವನ್ನು ಬೊಂಬಾಯಿಯಲ್ಲಿ ಮಾಡಿದರೆ ೧.೯೫ ರೂಪಾಯಿಗಳನ್ನು ಕೊಡಬೇಕು, ಆಂಧ್ರದಲ್ಲಿ ಮಾಡಿದರೆ ೨.೬೦ ರೂಪಾಯಿ ಕೊಡಬೇಕು, ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಮ್ಮ ಸಾರಿಗೆ ದರವನ್ನು ಹೆಚ್ಚಿಗೆ ಮಾಡಿ ಜನರಿಗೆ ತೊಂದರೆಯನ್ನು ಕೊಟ್ಟು ಸರ್ಕಾರಕ್ಕೆ ಏನೋ ಬಹಳ ಲಾಭವನ್ನು ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಸಾಮಾನ್ಯವಾಗಿ ರೈಲ್ವೆ ಪ್ರಯಾಣಕ್ಕೆ ನಮ್ಮ ಬಸ್ಸಿನ ಪ್ರಯಾಣವನ್ನು ಹೋಲಿಕೆ ಮಾಡಿದರೆ ರೈಲು ದರಕ್ಕಿಂತ ಬಸ್ಸಿನ ಪ್ರಯಾಣ ದರ ಕಡಿಮೆ ಇರುತ್ತದೆಂಬುದು ಒಂದು ಪ್ರತೀತಿ. ಆದರೆ ನಾನು ಇವತ್ತು ರೈಲಿನ ಪ್ರಯಾಣ ದರಕ್ಕೂ ಬಸ್ಸಿನ ಪ್ರಯಾಣ ದರಕ್ಕೂ ಇರತಕ್ಕ ವ್ಯತ್ಯಾಸವನ್ನು ಕಂಡುಹಿಡಿಯುವುದಕ್ಕೆ ನಾನು ಹೋದರೆ ಅದು ತಪ್ಪಾಗಬಹುದು. ಆದರೂ ಒಂದು ಅಂಶವನ್ನು ತಮ್ಮ ಮೂಲಕ ಸಭೆಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಬೆಂಗಳೂರಿನಿಂದ ಮೈಸೂರಿಗೆ ನಮ್ಮ ಬಸ್ಸಿನಲ್ಲಿ ನಾನ್‌ಸ್ಟಾಪ್ ಎಕ್ಸ್‌ಪ್ರೆಸ್‌ನಲ್ಲಿ ೧೮ ರೂಪಾಯಿಗಳನ್ನು ಕೊಟ್ಟರೆ ಹೋಗಬಹುದು. ಆದರೆ ಅದೇ ರೈಲಿನಲ್ಲಿ ಸೆಕೆಂಡ್ ಕ್ಲಾಸ್‌ನಲ್ಲಿ ಹೋಗಬೇಕಾದರೆ ೨೦ ರೂಪಾಯಿಗಳನ್ನು ಕೊಡಬೇಕು. ನಾನು ಫಸ್ಟ್‌ಕ್ಲಾಸ್‌ನ ದರವನ್ನು ಹೇಳುತ್ತಿಲ್ಲ. ಮಂಡ್ಯಕ್ಕೆ ಹೋಗಬೇಕಾದರೆ ಟ್ರೈನ್‌ನಲ್ಲಿ ೧೪ ರೂಪಾಯಿ ಇದೆ. ಆದರೆ ಅದೇ ನಮ್ಮ ಬಸ್‌ನಲ್ಲಿ ೧೨-೦ ರೂಪಾಯಿ ಇದೆ. ಮಂಡ್ಯ-ಮದ್ದೂರು ಮಧ್ಯೆ ಇರುವ ಊರಿಗೆ ಹೋಗಬೇಕಾದರೆ ಬಸ್‌ನಲ್ಲಿ ೨-೫೦ ರೂಪಾಯಿ ಇದ್ದರೆ ಟ್ರೈನ್‌ನಲ್ಲಿ ಇದೇ ದೂರಕ್ಕೆ ೬ ರೂಪಾಯಿ ಕೊಡಬೇಕಾಗುತ್ತದೆ. ನಾನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಈ ಸರ್ಕಾರದವರು ಏನೋ ಬೆಲೆಗಳನ್ನು ಹೆಚ್ಚಿಗೆ ಮಾಡಿದ್ದಾರೆ, ಜನರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆಪಾದನೆ ಏನು ಮಾಡುತ್ತೀರಿ ಅದು ಸರಿಯಲ್ಲ. ಇವತ್ತು ಸಂಸ್ಥೆಗೆ ಲಾಭ ಆಗದಂತೆ, ನಷ್ಟವೂ ಆಗದಂತೆ ಈ ಸಂಸ್ಥೆಯಿಂದ ಜನರಿಗೆ ಏನು ಸಾರಿಗೆ ಅನುಕೂಲವನ್ನು ಕೊಡಬೇಕೆಂದಿದ್ದೇವೋ ಅದೇ ದೃಷ್ಟಿಯಿಂದ ಈ ಪ್ರಯತ್ನವನ್ನು ನಾವು ಮಾಡಿದ್ದೇವೆಂದು ಹೇಳಬಯಸುತ್ತೇನೆ. ನಗರ ಸಾರಿಗೆ ಎಂದರೆ ಇಡಿ ಭಾರತದಲ್ಲಿಯೇ ನಷ್ಟವಾಗುತ್ತಿರುವ ಒಂದು ಸಂಸ್ಥೆಯಾಗಿದೆ. ಭಾರತದಲ್ಲಿಯಷ್ಟೇಯು, ಇಡೀ ಪ್ರಪಂಚದಲ್ಲೇ ನಷ್ಟವಾಗುತ್ತಿರುವ ಸಂಸ್ಥೆ ಲಾಭ ಮಾಡಲಿಕ್ಕೆ ಯಾರಿಂದಲೂ ಸಾಧ್ಯವಾಗಿಲ್ಲ. ಅದರಲ್ಲೂ ಟ್ರಾಫಿಕ್ ಜಾಸ್ತಿಯಾಗಿರತಕ್ಕಂಥ ಸಂದರ್ಭಗಳಲ್ಲಿ, ಪೀಕ್ ಹವರ್ಸ್ ಸರ್ವೀಸ್‌ನಲ್ಲಿ ಒನ್ ಸೈಡ್ ಮಾತ್ರ ಉತ್ಪತ್ತಿ ಇರುತ್ತದೆ. ಇದರಿಂದಾಗಿ ಲಾಭ ಮಾಡಲಿಕ್ಕೆ ಸಾಧ್ಯವಿರುವುದಿಲ್ಲ. ದೆಹಲಿಯಲ್ಲಿಯೂ ಇರುವ ಸಂಸ್ಥೆಯಲ್ಲಿಯೂ ಸಹ ೮೦ ಕೋಟಿ ರೂಪಾಯಿಗಳು ಲುಕ್ಸಾನಾಗಿದೆ. ಕೇಂದ್ರ ಸರ್ಕಾರದವರಾದರೆ ಪುಕ್ಕಟೆ ಕೊಡುತ್ತಾರೆ, ಆದರೆ ನಮಗೆ ಯಾರೂ ಕೊಡುವುದಿಲ್ಲ. ಆದರೂ ನಾವು ಕೊಡಬೇಕೆಂದು ಕೇಳುವುದಿಲ್ಲ. ನಮಗೆ ಅವಶ್ಯಕವಾಗಿ ಕೇಂದ್ರ ಸರ್ಕಾರದಿಂದ ಮ್ಯಾಚಿಂಗ್ ಕ್ಯಾಪಿಟಲ್ ಕಾಂಟ್ರಿಬ್ಯೂಷನ್ ಬರಬೇಕು. ೧೯೮೫ರಿಂದ ೧೯೮೮ರ ವರೆಗಿನದು ಬಿಡುಗಡೆಯಾಗಬೇಕಾಗಿದ್ದ ೭ ಕೋಟಿ ರೂಪಾಯಿಗಳು ಇನ್ನೂ ಬಿಡುಗಡೆಯಾಗಿಲ್ಲ. ಬಿಡುಗಡೆಯಾಗುತ್ತದೆಂದು ತಿಳಿದುಕೊಂಡಿದ್ದೇವೆ. ಮಾನ್ಯ ಸದಸ್ಯರನೇಕರು ಮಾತನಾಡುತ್ತಾ ಕಾರ್ಮಿಕರ ಸಂಘ ಸಂಸ್ಥೆಗಳು ಇದ್ದು ೧೫ ಸಾವಿರ ಕಾರ್ಮಿಕರು ಏನು ಇದ್ದಾರೆ ಅವರ ಜೊತೆಯಲ್ಲಿ ಹೆಚ್ಚಿನ ಸಂಬಂಧವನ್ನು ಇಟ್ಟುಕೊಳ್ಳಬೇಕು ಎನ್ನುವ ವಿಚಾರವನ್ನು ಹೇಳಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಯೂನಿಯನ್‌ಗಳನ್ನು ರೆಕಗ್ನೈಸೇಷನ್ ಮಾಡಬೇಕಾಗಿತ್ತು. ಅದರಲ್ಲಿ ಬೇಕಾದಷ್ಟು ಸಂಘ ಸಂಸ್ಥೆಗಳಲ್ಲಿ ಚುನಾವಣೆಗಳೇ ನಡೆದಿಲ್ಲ. ಹೋದ ವರ್ಷ ಚುನಾವಣೆಗಳನ್ನು ಬಹಳಷ್ಟು ಸಂಸ್ಥೆಗಳು ನಡೆಸಿರುತ್ತವೆ. ನಮ್ಮ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಕೊಡತಕ್ಕಂಥ ಸಂಬಳ ಸಾರಿಗೆ ಇಡೀ ರಾಷ್ಟ್ರದಲ್ಲಿ ಯಾವುದೇ ಸಾರಿಗೆ ಸಂಸ್ಥೆಗಳು ಕೊಡುತ್ತಿಲ್ಲ ಎನ್ನುವ ಅಂಶವನ್ನು ಅಂಕಿಅಂಶಗಳ ಆಧಾರದ ಮೇಲೆ ನಾನು ಇಲ್ಲಿ ಹೇಳಬಯಸುತ್ತೇನೆ. ಮತ್ತೆ ಕಳೆದ ೨೦ ವರ್ಷಗಳಿಂದಲೂ ಅವರ ಸೀನಿಯಾರಿಟಿಯನ್ನು ಫಿಕ್ಸ್ ಮಾಡಲಿಕ್ಕೆ ಆಗದಿರುವುದರಿಂದ ಅವರಿಗೆ ಬಹಳಷ್ಟು ಅಸಮಾಧಾನವಾಗಿತ್ತು. ಎಲ್ಲಿ ಸೀನಿಯಾರಿಟಿ ಫಿಕ್ಸ್ ಆಗಿಲ್ಲವೆಂದು ಹೇಳುತ್ತಿದ್ದರು, ಅಲ್ಲಿ ಡಿವಿಜನ್‌ವೈಸ್ ಸೀನಿಯಾರಿಟಿ ಫಿಕ್ಸ್ ಮಾಡಿದ್ದೇವೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಎಲ್.ಐ.ಸಿ. ಯಿಂದ ಒಂದು ಹೊಸದಾದಂಥ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಪ್ರತಿಯೊಬ್ಬ ಕಾರ್ಮಿಕನಿಗೂ ಸಹಿತ ಡಿ.ಸಿ.ಆರ್.ಜಿ.ಯ ಒಂದು ರೀತಿ ವ್ಯವಸ್ಥೆಯನ್ನು ಎಲ್.ಐ.ಸಿ. ಮುಖಾಂತರ ಮಾಡಿದ್ದೇವೆ. ಎಲ್.ಐ.ಸಿ. ಮೂಲಕ ಸಹಕಾರಿ ಸಂಘವನ್ನು ನಿಯಮಾವಳಿಯ ಪ್ರಕಾರ ರಚನೆ ಮಾಡಿ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ನೌಕರನು ಒಂದು ಸಾವಿರ ರೂಪಾಯಿ ಸಂಬಳ ಸಿಗತಕ್ಕಂಥವನು ನಿವೃತ್ತಿಯಾದ ಸಂದರ್ಭ

ದಲ್ಲಿ ೨೫–೩೦ ಸಾವಿರ ರೂಪಾಯಿಗಳು ಪ್ರತಿಯೊಬ್ಬ ಕಾರ್ಮಿಕನಿಗೂ ದೊರೆಯುತಕ್ಕಂಥ ವ್ಯವಸ್ಥೆಯನ್ನು ಮಾಡಲಾಗಿದೆ. ಇನ್ನೂ ಹೆಚ್ಚು ಅಂದರೆ ೦ ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳ ವರೆಗೆ ದೊರೆಯುತಕ್ಕಂಥ ಒಂದು ಹೊಸ ನಿಯಮವನ್ನು ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇದರ ಜೊತೆಗೆ ಆಡಳಿತದಲ್ಲಿ ಪ್ರಾತಿನಿಧ್ಯ ದೊರೆಯುವ ಬಗ್ಗೆ ಮಾನ್ಯ ಸದಸ್ಯರಾದ ಪಂಪಾಪತಿ ಯವರು ಮಾತನಾಡಿದ್ದಾರೆ. ಡಿವಿಜನ್ ಲೆವೆಲ್‌ನಲ್ಲಿ ಡಿಪೋಗಳನ್ನು ತೆಗೆದು ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುವುದರ ಜೊತೆಗೆ ಕೇಂದ್ರದಲ್ಲೂ ಸಹಿತ ಪ್ರತಿನಿಧಿಗಳನ್ನು ಗುರುತಿಸಿ ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ನಮ್ಮ ಸಂಸ್ಥೆಯಲ್ಲಿ ಕಾರ್ಮಿಕರ ಮತ್ತು ಆಡಳಿತ ಮಂಡಲಿಯ ಮಧ್ಯೆ ಒಂದು ಒಳ್ಳೆಯ ಸಂಬಂಧವಿದೆ ಎಂದು ಹೇಳುವುದರ ಜೊತೆಗೆ ಅನೇಕ ಕಾರ್ಮಿಕರಿಗೆ ಅನ್ಯಾಯವಾಗಿರುವ ದೃಷ್ಟಿಯಿಂದ ಹೊಸ ಹೊಸ ಕಾನೂನುಗಳನ್ನು ಮಾಡಿದ್ದೇವೆ ಕಾನೂನುಗಳನ್ನು ಮಾಡಿ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದೇವೆ. ಇಂದು ಯಾವುದೇ ಕಾರ್ಮಿಕ ಕೆಲಸದಲ್ಲಿರತಕ್ಕಂಥ ಸಂದರ್ಭದಲ್ಲಿ ಸತ್ತರೆ ಅಂಥವರ ಮಕ್ಕಳಿಗೆ, ಅಂಥವರ ಕುಟುಂಬವರ್ಗದಲ್ಲಿ ಯಾರಿಗಾದರೂ ಕೆಲಸವನ್ನು ಕೊಡಲು ಕಟ್ಟುನಿಟ್ಟಾದ ನಿಯಮಗಳನ್ನು ತಂದಿದ್ದೇವೆ. ಕಾರ್ಮಿಕ ಕುಟುಂಬಗಳಿಗೆ ಕಡಿಮೆ ವೆಚ್ಚದಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ಸಲುವಾಗಿ ಹುಡ್ಕೋ ಸಹಾಯದಿಂದ ೧೦–೧೫ ಮನೆಗಳನ್ನು ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಸಹ ಹಾಕಿಕೊಂಡಿದ್ದೇವೆ ಪ್ರತಿಯೊಂದು ಡಿವಿಜನ್‌ನಲ್ಲೂ ವೈದ್ಯರನ್ನು ನೇಮಕ ಮಾಡಿದ್ದೇವೆ. ಇದನ್ನು ಏತಕ್ಕೆ ಮಾಡಿರುತ್ತೇವೆಂದರೆ ಕಾರ್ಮಿಕರು ಒಂದು ಸಮಾಧಾನದಿಂದ ಬಸ್ಸುಗಳನ್ನು ಓಡಿಸಲಿ ಎನ್ನುವ ದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಿದ್ದೇವೆ. ಇದರ ಜೊತೆಗೆ ಬಹಳಷ್ಟು ಚರ್ಚೆಯಾಗಿರುವುದೆಂದರೆ ಈ ಸಾರಿಗೆ ಸಂಸ್ಥೆಯಿಂದ ಯಾವಾಗಲೂ ನಷ್ಟವಾಗುತ್ತಿದೆ, ಲಾಭವಾಗುತ್ತಿಲ್ಲ ಎನ್ನುವ ಮಾತು ಎಲ್ಲಾ ಕಡೆಯಿಂದಲೂ ಬರುತ್ತಿದೆ. ಇದು ಒಂದು ತಪ್ಪು ಕಲ್ಪನೆಯಾಗಿದೆ ಮೊದಲನೆಯದಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸಾರಿಗೆ ಸಂಸ್ಥೆ ಅಂದರೆ ನಮ್ಮ ನಗರ ಸಾರಿಗೆ ಸಂಸ್ಥೆಯಿಂದ ಸುಮಾರು ೮ ಕೋಟಿ ರೂಪಾಯಿಗಳ ನಷ್ಟವಾಗಿದೆ. ಮೈಸೂರು ಮತ್ತು ಹುಬ್ಬಳ್ಳಿ ನಗರ ಸಾರಿಗೆ ಸಂಸ್ಥೆಯಿಂದ ೩ ಕೋಟಿ ರೂಪಾಯಿಗಳು ನಷ್ಟವಾಗಿದೆ ಆದರೆ ಇತರ ಸಾರಿಗೆ ಸಂಸ್ಥೆಗಳಿಂದ ನಮಗೆ ಸುಮಾರು ೯ ಕೋಟಿ ರೂಪಾಯಿಗಳಷ್ಟು ಲಾಭವಾಗಿದೆ. ಒಟ್ಟಿನಲ್ಲಿ ಹೇಳುವಾಗ ಈಕ್ವಿಟಿ ಷೇರಿನಲ್ಲಿರತಕ್ಕಂಥ ೪ ಕೋಟಿ ರೂಪಾಯಿಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೂ ಸಹಿತ ಈ ಸಾರಿಗೆ ಸಂಸ್ಥೆ ಲಾಭ ಮಾಡುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. If we do not take into consideration the equity share we will be making profit. ಮಾನ್ಯ ಅಧ್ಯಕ್ಷರೆ. ಸಾರಿಗೆ ಸಂಸ್ಥೆಯು ಕಲವು ಕಾರ್ಯಕ್ರಮಗಳನ್ನು ಹೊಸದಾಗಿ ಹಾಕಿಕೊಂಡಿದೆ. ರಾಜ್ಯದಲ್ಲಿ ಯಾವ ಯಾವ ಹಳ್ಳಿಗಳಿಗೆ ರಸ್ತೆ ಇದೆ ಆ ಎಲ್ಲಾ ಹಳ್ಳಿಗಳಿಗೂ ಬಸ್ಸುಗಳನ್ನು ಓಡಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ರಾಷ್ಟ್ರೀಕರಣವಾಗಿರತಕ್ಕ ೮ ಜಿಲ್ಲೆಗಳು ಏನಿವೆ ಆ ಜಿಲ್ಲೆಗಳಲ್ಲಿರತಕ್ಕ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಮತ್ತು ಆ ಜಿಲ್ಲೆಯಲ್ಲಿರತಕ್ಕ ೫೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಎಲ್ಲಾ ಊರುಗಳಿಗೆ ಬಸ್ ನಿಲ್ದಾಣಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಬೀದರ್ ಮತ್ತು ಚಿತ್ರದುರ್ಗ ಈ ಎರಡು ಜಿಲ್ಲೆಗಳಿಗೆ ಹೊಸ ಡಿವಿಜನ್ ಅನ್ನು ಈ ವರ್ಷ ಮಾಡುತ್ತಿದ್ದೇವೆ. ಇದರಿಂದ ಹೈದರಾಬಾದ್ ಕರ್ನಾಟಕದ ಜನತೆಯ ಬಯಕೆ ಈಡೇರುತ್ತದೆ. ಬೀದರ್‌ಗೆ ಹೊಸ ಡಿವಿಜನ್ ಬೇಕೆಂಬ ಬೇಡಿಕೆ ಬಹಳ ದಿನಗಳಿಂದ ಇತ್ತು. ಅದನ್ನು ಈ ವರ್ಷ ಪ್ರಾರಂಭಿಸುತ್ತಿದ್ದೇವೆ. ಅದೇ ರೀತಿ ಶಿವಮೊಗ್ಗ, ತುಮಕೂರು ಮತ್ತು ಚಿತ್ರದುರ್ಗ ಭಾಗದ ಜನರು ಡಿವಿಜನ್ ಬೇಕೆಂದು ಬೇಡಿಕೆಯನ್ನು ಇಡುತ್ತಿದ್ದಾರೆ ಎರಡು ವಿಭಾಗಗಳನ್ನೂ ಈ ವರ್ಷ ಪ್ರಾರಂಭಿಸುತ್ತಿದ್ದೇವೆಂದು ಹೇಳಲಿಕ್ಕೆ ಬಯಸುತ್ತೇನೆ ಪ್ರಯಾಣಿಕರ ವಿಮೆ ಬಗ್ಗೆ ಶಂಕರ್‌ರವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಅದರ ಬಗ್ಗೆ ಎಲ್.ಐ.ಸಿ.ಯವರ ಜೊತೆ ಅಧಿಕಾರಿಗಳು ಕುಳಿತು ಚರ್ಚೆ ಮಾಡಿ ಆದಷ್ಟು ಅದರ ಸಾಧಕ ಬಾಧಕಗಳನ್ನು ನೋಡಬೇಕಾಗುತ್ತದೆ. ಎಷ್ಟು ಹಣ ಕೊಡಬೇಕು ಮತ್ತು ಪ್ರಯಾಣಿಕರಿಗೆ ನಿಜವಾಗಿ ಇದರಿಂದ ಅನುಕೂಲವಾಗುತ್ತದೆಯೋ ಎಂದು ವಿಚಾರ ಮಾಡಬೇಕು. ಆದ್ದರಿಂದ ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ. ೧೩೦೦ ಹೊಸ ಬಸ್ಸುಗಳನ್ನು ಈ ವರ್ಷ ಕೊಳ್

ಬೇಕೆಂಬ ಕಾರ್ಯಕ್ರಮವನ್ನು ಸಾರಿಗೆ ಸಂಸ್ಥೆ ಹಾಕಿಕೊಂಡಿದೆ. ಪಾರ್ಸಲ್ ಸಿಸ್ಟಂ ಮುಂಬೈ ಮತ್ತು ಹೈದರಾಬಾದ್‌ನಲ್ಲಿ ಏನಿದೆ ಅದು ಬಹಳ ಚೆನ್ನಾಗಿದೆ. ಅದನ್ನು ರಾಷ್ಟ್ರೀಕರಣವಾಗಿರತಕ್ಕ ೮ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹೋಗತಕ್ಕ ವ್ಯವಸ್ಥೆ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸ್ವಾತಂತ್ರ್ಯಯೋಧರಿಗೆ ಪಾಸುಗಳನ್ನು ಕೊಡಬೇಕೆಂದು ಮುಖ್ಯ ಮಂತ್ರಿಗಳು ಹಿಂದೆಯೇ ಆದೇಶ ಕೊಟ್ಟಿದ್ದರು. ಅದಕ್ಕೂ ಸಾರಿಗೆ ಸಂಸ್ಥೆ ಒಪ್ಪಿಗೆ ಕೊಟ್ಟಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಸ್ ನಿಲ್ದಾಣಗಳು ಏನಿವೆ ಅವು ಸ್ವಚ್ಛವಾಗಿಲ್ಲ. ಕುಡಿಯುವುದಕ್ಕೆ ನೀರು ಸಾಕಾಗುವುದಿಲ್ಲ, ಶೌಚ ಗೃಹಗಳು ಸರಿಯಾಗಿಲ್ಲವೆಂದು ಕೇಳಿಬರುತ್ತಿದೆ. ಅದಕ್ಕೆ ಈ ವರ್ಷ ೨೦೦ ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿ ಯಾವ ರೀತಿ ತುಮಕೂರು ಬೆಂಗಳೂರು ಮತ್ತು ಚಿತ್ರದುರ್ಗದ ಬಸ್ ನಿಲ್ದಾಣಗಳಲ್ಲಿ ಶೌಚಾಲಯಗಳನ್ನು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ ಅದೇ ರೀತಿ ಎಲ್ಲಾ ಬಸ್ ನಿಲ್ದಾಣಗಳಲ್ಲೂ ಮಾಡಬೇಕೆಂಬ ಯೋಜನೆಯನ್ನು ಇಟ್ಟು ಕೊಂಡಿದ್ದೇವೆ. ಬಹಳಷ್ಟು ದಿನಗಳಿಂದ ಸಾರಿಗೆ ಸಂಸ್ಥೆಯನ್ನು ವಿಭಜನೆ ಮಾಡಬೇಕೆಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅದಕ್ಕೋಸ್ಕರ ಸಾರಿಗೆ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕಳೆದ ವರ್ಷ ಒಂದು ತಜ್ಞರ ಸಮಿತಿಯನ್ನು ಮಾಡಿದೆವು. ಆ ಸಮಿತಿ ೨-೩ ದಿನಗಳಲ್ಲಿ ವರದಿ ಕೊಡುತ್ತಿದೆ. ಅವರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಿದ್ದೇವೆಂದು ಹೇಳುತ್ತೇನೆ. ಸಾರಿಗೆ ಸಂಸ್ಥೆಯಲ್ಲಿ ನೇಮಕಾತಿ ಮಾಡತಕ್ಕ ಸಂದರ್ಭದಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿವೆ ಭ್ರಷ್ಟಾಚಾರಗಳು ನಡೆಯುತ್ತಿವೆ ಎಂದು ಕೇಳಿದ್ದೇನೆ. ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ೨-೩ ವಿಭಾಗಗಳಲ್ಲಿ ದೂರು ಬಂದು ನೇಮಕಾತಿ ಪಟ್ಟಿಗಳನ್ನು ರದ್ದು ಮಾಡಿ ಸಿ.ಓ.ಡಿ. ವಿಚಾರಣೆಗೆ ಹಾಕಲಾಗಿದೆ. ಮೇಲಿನ ಅಧಿಕಾರಿಗಳ ಮೇಲೆ ದೂರು ಬಂದ ಸಂದರ್ಭದಲ್ಲಿ ಇಬ್ಬರು ನಿವೃತ್ತ ಸೆಷನ್ ಜಡ್ಜ್‌ಗಳನ್ನು ನಾವು ನೇಮಕಾತಿ ಅಧಿಕಾರಿಗಳನ್ನಾಗಿ ಮಾಡಿದ್ದೇವೆ. ಇಡೀ ರಾಜ್ಯದ ಸಾರಿಗೆ ಸಂಸ್ಥೆಯ ಎಲ್ಲಾ ನೇಮಕಾತಿಗಳನ್ನೂ ಮಾಡಲಿಕ್ಕೆ, ಪಬ್ಲಿಕ್ ಸರ್ವೀಸ್ ಕಮೀಷನ್ ಏನಿದೆ ಅದೇ ಮಾದರಿಯಲ್ಲಿ ಈ ವರ್ಷ ಒಂದು ನೇಮಕಾತಿ ಸಮಿತಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸಧ್ಯದಲ್ಲಿ ಆ ಬಗ್ಗೆ ಸಚಿವ ಸಂಪುಟದ ಒಪ್ಪಿಗೆ ಪಡೆದು ಮಾಡಬೇಕೆಂಬ ಕಾರ್ಯಕ್ರಮ ಸರ್ಕಾರದ ಮುಂದಿದೆ. ಕಳೆದ ೪ ವರ್ಷಗಳಲ್ಲಿ ಸಾರಿಗೆ ಸಂಸ್ಥೆಯಲ್ಲಿ ಹತ್ತು ಸಾವಿರ ಜನರಿಗೆ ಉದ್ಯೋಗ ಸಿಕ್ಕಿದೆ. ಈ ವರ್ಷ ೨ ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕೊಡತಕ್ಕ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಈ ವರ್ಷ ೭೪ ಹೊಸ ಬಸ್ ನಿಲ್ದಾಣಗಳನ್ನು ಮತ್ತು ೨೫ ಹೊಸ ಡಿಪೋಗಳನ್ನು ಕಟ್ಟುತ್ತಿದ್ದೇವೆ. ಆ ವಿವರಗಳನ್ನು ಈಗ ಕೊಡಲಿಕ್ಕೆ ಹೋಗುವುದಿಲ್ಲ, ಈ ಸಾರಿಗೆ ಸಂಸ್ಥೆಯ ಇತಿಹಾಸದಲ್ಲಿ ಒಂದು ವರ್ಷದ ಕಾಲದಲ್ಲಿ ೨೫ ಡಿಪೋಗಳಾಗಲಿ ೭೪ ಬಸ್ ನಿಲ್ದಾಣಗಳಾಗಲಿ ಆಗಿರತಕ್ಕದ್ದು ಇಲ್ಲ. ಅದನ್ನು ಈ ವರ್ಷ ಮಾಡಬೇಕೆಂದು ಮತ್ತು ಅದಕ್ಕೆ ಬೇಕಾದ ಹಣವನ್ನು ಒದಗಿಸಿ ಅನೇಕ ಕಡೆಗಳಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರ ಬಯಸುತ್ತೇನೆ.

೧-೦೦ ಪಿ.ಎಂ.

ಮತ್ತು ಕಂಪ್ಯೂಟರ್ಸ್ ಮೂಲಕ ರಿಸರ್ವೇಷನ್ ಮಾಡತಕ್ಕ ವ್ಯವಸ್ಥೆಯನ್ನು, ಇಡೀ ದೇಶದಲ್ಲಿ ಇಲ್ಲದೇ ಇರತಕ್ಕ ವ್ಯವಸ್ಥೆಯನ್ನು ಬೆಂಗಳೂರು ಬಸ್ ನಿಲ್ದಾಣದಲ್ಲಿ ಹೊಸದಾಗಿ ಪ್ರಯೋಗ ಮಾಡಿದ್ದೇವೆ. ಅದರ ವಿಸ್ತರಣೆ ಮಾಡುವುದರ ಜೊತೆಗೆ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಅಂದರೆ ಮಲ್ಲೇಶ್ವರಂ, ಜಯನಗರ, ರಾಜಾಜಿನಗರದಲ್ಲಿ ಕಂಪ್ಯೂಟರ್ಸ್ ಮೂಲಕ ರಿಸರ್ವೇಷನ್ ಮಾಡತಕ್ಕ ಕಾರ್ಯಕ್ರಮವನ್ನು ಈ ವರ್ಷ ಮಾಡಬೇಕೆಂದು ವಿಚಾರವನ್ನು ಇಟ್ಟುಕೊಂಡಿದ್ದೇವೆ. ಈ ವರ್ಷ ಅದನ್ನು ಮಾಡುತ್ತೇವೆ. ಅಲ್ಲದೆ ರಾಜ್ಯದ ಇತರ ನಗರಗಳಲ್ಲೂ ಇದನ್ನು ಮಾಡಬೇಕೆಂಬ ಕಾರ್ಯಕ್ರಮವನ್ನು ಇಟ್ಟು ಕೊಂಡಿದ್ದೇವೆ. ಅಪಘಾತಗಳು ಹೆಚ್ಚಾಗುತ್ತಿರುವ ಬಗ್ಗೆ ನನಗೂ ನೋವಿದೆ. ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ತೆಗೆದುಕೊಂಡಿರತಕ್ಕ ಕಾರ್ಯಕ್ರಮ ಮೋಟಾರು ವಾಹನ ಇಲಾಖೆಯಿಂದಾಗಲೀ ಸಾರಿಗೆ ಸಂಸ್ಥೆಯಿಂದಾಗಲೀ ಸಾಲದು ಎಂಬುದನ್ನು ನಾನು ಒಪ್ಪುತ್ತೇನೆ. ಹೆಚ್ಚಿನ ಬಿಗಿಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದೇವೆ. ರಾಜ್ಯದ ೧೭೫ ತಾಲ್ಲೂಕುಗಳಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ಸಾರಿಗೆ ಸಪ್ತಾಹವನ್ನು ಚೆನ್ನಾಗಿ ಮಾಡಿದ್ದೇವೆ. ಮುಖ್ಯವಾಗಿ ಸಪ್ತಾಹದ ಸಂದರ್ಭದಲ್ಲಿ ಚಾಲಕವರ್ಗದವರಿಗೆ ಒಂದು ರೀತಿಯ ಪರಿಜ್ಞಾನ ಬರಬೇಕೆಂಬ ದೃಷ್ಟಿಯಿಂದ ಯಶಸ್ವಿ

ಯಾಗಿ ಮಾಡಿದ್ದೇವೆ. ಕನಿಷ್ಠ ಪಕ್ಷ ಆರು ತಿಂಗಳಿಗೊಮ್ಮೆಯಾದರೂ ಸಾರಿಗೆ ಸಪ್ತಾಹವನ್ನು ಮಾಡು ವುದರ ಮೂಲಕ ಚಾಲಕವರ್ಗದವರಲ್ಲಿ, ಪಾದಚಾರಿಗಳಲ್ಲಿ, ಜನಸಾಮಾನ್ಯರಲ್ಲಿ ಅವೇರ್‌ನೆಸ್ ಬರು ತ್ತದೆಂದೆ ತಿಳಿದುಕೊಂಡಿದ್ದೇವೆ. ಸಾರಿಗೆ ಸಂಸ್ಥೆಯ ಚಾಲಕರು ಮತ್ತು ನಿರ್ವಾಹಕರು ಕುಡಿದು ಚಾಲನೆ ಮಾಡುವಂಥದ್ದಿರಬಹುದು ಅವಾ ಸರಿಯಾಗಿ ಚಾಲನೆ ಮಾಡದೇ ಇರುವಂಥದ್ದಿರಬಹುದು, ಅವರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ ಎಂದು ಕೆಲವು ಸದಸ್ಯರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಸಾರಿಗೆ ಸಂಸ್ಥೆಯಲ್ಲಿರತಕ್ಕ ಸುಮಾರು ೩೦,೭೪೧ ಜನ ಕಾರ್ಮಿಕರ ಪೈಕಿ ಅನೇಕರಿಗೆ ನೋಟೀಸ್‌ಗಳನ್ನು ಕೊಟ್ಟು ನೀವು ಮಾಡುತ್ತಾ ಇರತಕ್ಕದ್ದು ತಪ್ಪು ಅದನ್ನು ತಿದ್ದಿಕೊಳ್ಳಬೇಕೆಂದು ಹೇಳಿದ್ದೇವೆ. ಎರಡು ಸಾವಿರ ಜನರನ್ನು ಸಸ್ಪೆನ್‌ಷನ್‌ನಲ್ಲಿಟ್ಟಿದ್ದೇವೆ. ೯,೪೩೪ ಜನಗಳಿಗೆ ಇನ್‌ಕ್ರಿಮೆಂಟ್ ಕಟ್ ಮಾಡಿದ್ದೇವೆ. ೩೦೦ ಜನರನ್ನು ಡಿಸ್‌ಮಿಸ್ ಮಾಡಿದ್ದೇವೆ. ಡಿಸ್ಮಿಸಲ್ ಮತ್ತು ಸಸ್ಪೆನ್‌ಷನ್ ವಿಷಯದಲ್ಲಿ ಅಧಿಕಾರಿ ಗಳಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಎಲ್ಲಿ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎಂದು ನಮಗೆ ತಿಳಿದುಬಂದಿದೆ ಅಂಥ ಸಂದರ್ಭದಲ್ಲಿ ಮೇಲಧಿಕಾರಿಗಳು ಮತ್ತು ಸರ್ಕಾರದವರು ಕ್ರಮ ತೆಗೆದುಕೊಂಡಿ ದ್ದೇವೆ ಮತ್ತೆ ಈ ವರ್ಷ ಆಡಳಿತದಲ್ಲಿ ಮಾತಷ್ಟು ಸುಧಾರಣೆ ಮಾಡಿ ಪ್ರತಿಯೊಂದು ಡಿಪೋವಿಗೆ ಪ್ರತಿಯೊಬ್ಬ ಅಧಿಕಾರಿಗೆ ಎಲ್ಲ ಹಂತದಲ್ಲಿ, ಇಂಧನ ಬಳಕೆ ಇರಬಹುದು ಟೈರ್ ಇರಬಹುದು, ರೆವಿನ್ಯೂ ಕಲೆಕ್ಷನ್ ಇರಬಹುದು ಪ್ರತಿಯೊಂದು ವಿಷಯದಲ್ಲಿ ಕೂಡ ಒಂದೊಂದು ಗುರಿ ನಿರ್ಧಾರ ಮಾಡಿ ಅದರ ಆಧಾರದ ಮೇಲೆ ಪ್ರೊಮೋಷನ್ ಕೊಡುತ್ತೇವೆ, ಆದರ ಆಧಾರದ ಮೇಲೆ ನಿಮ್ಮ ಎಲ್ಲ ಯೋಗ್ಯತೆಯನ್ನು ಅಳೆಯುತ್ತೇವೆ, ಅದನ್ನು ಮಾಡದೇಹೋದರೆ ಶಿಕ್ಷೆಯನ್ನೂ ಕೊಡು ತ್ತೇವೆ ಎಂದು ನಿರ್ಧಾರ ಮಾಡಿದ್ದೇವೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಬಹಳಷ್ಟು ದಿನಗಳಿಂದ ಬಹುತೇಕ ಡಿಪೋಗಳಲ್ಲಿ ವೇಳಾಪಟ್ಟಿ ಇರುತ್ತಿರಲಿಲ್ಲ. ಒಂದು ವೇಳೆ ಇದ್ದರೂ ಕೂಡ ಅದಕ್ಕೆ ತಕ್ಕಂತೆ ಬಸ್‌ಗಳು ನಡೆಯುತ್ತಾ ಇರಲಿಲ್ಲ. ಈಗಾಗಲೇ ಬಿ.ಟಿ.ಎಸ್.ನಲ್ಲಿ ವೇಳಾಪಟ್ಟಿ ಮಾಡಿ ಅದರ ಪ್ರಕಾರ ಬಹುತೇಕ ಬಸ್ಸುಗಳು ಓಡಾಡುತ್ತಿವೆ. ಎಲ್ಲಾ ೧೩ ಡಿವಿಷನ್‌ಗಳಲ್ಲಿ ವೇಳಾಪಟ್ಟಿ ಪ್ರಕಾರವಾಗಿ ಬಸ್ಸುಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ ಎಂಬುದನ್ನು ಹೇಳಲಿಕ್ಕೆ ಬಯಸುತ್ತೇನೆ. ಇಷ್ಟು ಈ ವರ್ಷದ ಕಾರ್ಯಕ್ರಮಗಳು. ಸಾರಿಗೆ ಸಂಸ್ಥೆ ಬಗ್ಗೆ ನಮ್ಮ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಓವರ್‌ಲೋಡ್ ಜಾಸ್ತಿಯಾಗುತ್ತಿದೆ, ವಿಶೇಷವಾಗಿ ಮುಂಬೈ ಕರ್ನಾಟಕ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಸ್ಸುಗಳ ಮೇಲೆಲ್ಲಾ ಜನ ಓಡಾಡುತ್ತಾರೆ ಎಂದು ಹೇಳಿದ್ದಾರೆ. ಅದರಲ್ಲಿ ಸತ್ಯಾಂಶ ಇದೆ, ಒಪ್ಪುತ್ತೇನೆ. ಸಂತೆ ಮತ್ತು ಜಾತ್ರೆ ದಿನಗಳಲ್ಲಿ ವಿಶೇಷವಾಗಿ ಜನ ಹೆಚ್ಚಾಗಿರುತ್ತಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೋಸ್ಕರವಾಗಿ ಹೆಚ್ಚಿನ ಟ್ರಿಪ್‌ಗಳನ್ನು ಮಾಡುವುದಕ್ಕೆ ಎಲ್ಲ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ. ಡ್ರೈವರ್‌ಗಳು ಬಸ್ಸುಗಳನ್ನು ಬಸ್ ನಿಲ್ದಾಣಗಳಲ್ಲಿ ನಿಲ್ಲಿಸುವುದಿಲ್ಲ, ಬಾರ್ ಮುಂದೆ, ದಾರಿಯಲ್ಲಿ ಎಲ್ಲಿ ಬೇಕಾದರೂ ನಿಲ್ಲಿಸುತ್ತಾರೆ ಎಂದು ಹೇಳಿದ್ದಾರೆ. ಅದು ಸತ್ಯಾಂಶ. ಅದನ್ನು ಒಪ್ಪಿಕೊಳ್ಳುತ್ತೇನೆ. ಅವರಲ್ಲಿ ಶಿಸ್ತನ್ನು ತರುವುದಕ್ಕೆ ವಿಶೇಷವಾಗಿ ತರಬೇತಿ ಕೊಡಬೇಕಾಗುತ್ತದೆ. ಕೇವಲ ಕಾನೂನಿನ ಮೂಲಕ ಸರಿ ಮಾಡುವುದು ಕಷ್ಟ. ಪ್ರತಿಯೊಂದು ಡಿಪೋದಲ್ಲಿ ಕಂಡಕ್ಟರ್ ಮತ್ತು ಡ್ರೈವರ್‌ಗಳ ವರ್ತನೆ ಯಾವರೀತಿ ಇರಬೇಕು, ಇಂಧನ ಯಾವರೀತಿ ಉಳಿಸಬೇಕು ಎಂಬ ಬಗ್ಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಮತ್ತು ಸಾರಿಗೆ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ೧೮ ಪರ್ಸೆಂಟ್ ಕೆಲಸ ನ್ಯಾಯವಾಗಿ ಸಂವಿಧಾನ ಬದ್ಧವಾಗಿ ಸಿಕ್ಕಬೇಕಾಗಿರತಕ್ಕಂತಹದ್ದು ಸಿಕ್ಕಿಲ್ಲ ಎನ್ನತಕ್ಕಂತಹದ್ದನ್ನು ನಾನು ಒಪ್ಪುತ್ತೇನೆ. ಈ ಹಿಂದೆ ಏನೇನೂ ಇರಲಿಲ್ಲ. ಇವತ್ತು ಡಾ|| ತಿಪ್ಪೇಸ್ವಾಮಿಯವರು ಆ ಸಂಸ್ಥೆಗೆ ಭೇಟಿ ನೀಡಿ ಮೀಸಲಾತಿ ಪದ್ಧತಿಯನ್ನು ಅನುಸರಿಸದಿರುವ ಬಗ್ಗೆ ವರದಿಯನ್ನು ಮಾಡಿದ್ದರು. ಆ ಬಗ್ಗೆ ಸಾರಿಗೆ ಸಂಸ್ಥೆಯಲ್ಲಿ ಕಳೆದ ೪-೫ ವರ್ಷಗಳಲ್ಲಿ ಮಾಡಿರುವ ಪ್ರಯತ್ನವನ್ನು ನೋಡಿ ಸಂತೋಷಪಟ್ಟಿದ್ದಾರೆ. ಅದಕ್ಕೂ ಮುಂಚೆ ಕೇವಲ ೮ ಪರ್ಸೆಂಟ್ ಇದ್ದುದು ಇವತ್ತು ೧೨-೧೨½ ಪರ್ಸೆಂಟಿಗೆ ಬಂದಿದೆ. ವಿಶೇಷವಾಗಿ ಈ ೧೮ ಪರ್ಸೆಂಟ್ ಕೇವಲ ಡ್ರೈವರ್ ಕಂಡಕ್ಟರ್ ಮಟ್ಟದಲ್ಲಿ ಸಿಕ್ಕಿದರೆ ಸಾಲದು. ಅಧಿಕಾರಿಗಳ ಮಟ್ಟದಲ್ಲೂ ತರಬೇಕೆಂದು ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ ಈಗಾಗಲೇ ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಮುಂದಿನ ತಿಂಗಳಲ್ಲಿ ಸುಮಾರು ೫೦೦ ಜನರನ್ನು ವಿಶೇಷವಾಗಿ ರಿಕ್ರೂಟ್‌ಮೆಂಟ್ ಮಾಡಲಾಗುತ್ತಿದೆ. ಎ.ಎಂ.ಇ. ಅದೇರೀತಿ ಟ್ರಾಫಿಕ್ ಇನ್‌ಸ್ಪೆಕ್ಟರ್ ಹುದ್ದೆಗಳಲ್ಲೂ

ಇದರ ಪರ್ಸೆಂಟೇಜನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಪ್ರಿಯಾರಿಟಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇವರನ್ನು ಆರಿಸಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಕೆಲವು ಮಾನ್ಯ ಸದಸ್ಯರು ಮಾತನಾಡುತ್ತಾ, ಬಾಡಿ ಬಿಲ್ಡಿಂಗ್‌ನ್ನು ಖಾಸಗಿಯವರಿಗೆ ಕೊಟ್ಟಿದ್ದೀರಿ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದು ತಪ್ಪು ಕಲ್ಪನೆ. ಕಳೆದ ೨ ವರ್ಷಗಳಿಂದ ನಮ್ಮ ಸಾರಿಗೆ ಸಂಸ್ಥೆಯಿಂದಲೇ ಒಂದು ಸಾವಿರಕ್ಕಿಂತ ಹೆಚ್ಚು ಬಾಡಿ ಬಿಲ್ಡಿಂಗನ್ನು ನಮ್ಮಲ್ಲೇ ಮಾಡುತ್ತಿದ್ದೇವೆ. ಇದರಲ್ಲಿ ಸ್ವಲ್ಪ ತೊಂದರೆಯಾಗಿದೆ. ಅದೇನೆಂದರೆ ಖಾಸಗಿಯವರು ಬಾಡಿ ಬಿಲ್ಡಿಂಗ್‌ಗೋಸ್ಕರ ಕೆ.ಎಸ್.ಎಫ್.ಸಿ.ಯಿಂದ ಸಾಲವನ್ನು ತೆಗೆದುಕೊಂಡು ನಮ್ಮನ್ನೇ ಅವಲಂಬಿಸಿಕೊಂಡವರೂ ಇದ್ದಾರೆ. ನಾವು ಅವರಿಗೆ ಬಾಡಿ ಬಿಲ್ಡಿಂಗನ್ನು ಕೊಡದೇ ಇದ್ದುದರಿಂದ ಅಲ್ಲಿರತಕ್ಕ ಕಾರ್ಮಿಕರನ್ನು ರಿಟ್ರೆಂಚ್ ಮಾಡಿ ಕಾರ್ಖಾನೆಯನ್ನು ಕ್ಲೋಸ್ ಮಾಡುತ್ತಿದ್ದಾರೆ. ಇದನ್ನು ವಿಚಾರ ಮಾಡಿ ಅವರಿಗೂ ನಮ್ಮ ಸ್ವಲ್ಪ ಭಾಗವನ್ನು ಕೊಡಬೇಕೆಂಬ ವಿಚಾರ ಇದೆ. ಆದರೆ ಲಕ್ಷುರಿ ಬಸ್ಸುಗಳ ಬಾಡಿ ಬಿಲ್ಡಿಂಗ್‌ನ್ನು ಮಾಡುವಂತಹದ್ದು ಕೆ.ಎಸ್.ಆರ್.ಟಿ.ಸಿ.ಯಲ್ಲಿಲ್ಲ, ಆದ್ದರಿಂದ ಲಕ್ಷುರಿ ಬಸ್ಸುಗಳ ಬಾಡಿ ಬಿಲ್ಡಿಂಗ್‌ನ್ನು ಹೊರಗಿನವರಿಗೆ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮಲ್ಲಿ ಆ ಕಾರ್ಮಿಕರ ಸಂಖ್ಯೆ ಬಹಳ ಇದೆ ಎನ್ನತಕ್ಕಂತಹ ಮಾತನ್ನು ಒಬ್ಬ ಮಾನ್ಯ ಸದಸ್ಯರು ಹೇಳಿದರು. ನಮ್ಮಲ್ಲಿರತಕ್ಕ ಕಾರ್ಮಿಕರ ಒಟ್ಟು ಸಂಖ್ಯೆ ೪೫-೫೦ ಸಾವಿರ. ಇದರಲ್ಲಿ ಬದಲಿಯಾಗಿ ಕೆಲಸಮಾಡುತ್ತಿರುವವರು ಹಾಗೂ ಟೆಂಪರರಿಯಾಗಿ ಕೆಲಸ ಮಾಡುತ್ತಿರುವವರು ಇವರೆಲ್ಲರನ್ನೂ ಸೇರಿಸಿದರೆ ೪೫-೫೦ ಸಾವಿರ ಜನ ಕಾರ್ಮಿಕರು ಇದ್ದಾರೆ. ಅವರಿಗೆ ಅನುಗುಣವಾಗಿ ೫೦೦ ಜನ ಅಧಿಕಾರಿಗಳು ಮಾತ್ರ ಇದ್ದಾರೆ. ಇದರಲ್ಲೂ ಇಂಜಿನೀಯರಿಂಗ್ ವಿಭಾಗ ಅದೇರೀತಿ ಟ್ರಾಫಿಕ್ ವಿಭಾಗದಲ್ಲಿರತಕ್ಕ ಅಧಿಕಾರಿಗಳೆಲ್ಲರೂ ಸೇರಿದ್ದಾರೆ. ಇಷ್ಟೊಂದು ಕಡಿಮೆ ನೌಕರರ ಸಂಖ್ಯೆ ಇರತಕ್ಕ ಸಾರಿಗೆ ಸಂಸ್ಥೆ ಕರ್ನಾಟಕದ ಬೇರೊಂದು ರಾಜ್ಯದಲ್ಲಿಲ್ಲ. ಇವರ ಸಂಖ್ಯೆಯನ್ನೂ ಕೂಡ ಹೆಚ್ಚು ಮಾಡಬೇಕೆಂದಿದ್ದೇನೆ. ಇವರ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಅವರಲ್ಲಿ ದಕ್ಷತೆ ಕೂಡ ಹೆಚ್ಚಾಗುತ್ತದೆ ಎಂಬುದನ್ನೂ ಸಹ ನಾನು ತಿಳಿದುಕೊಂಡಿದ್ದೇನೆ.

ಟ್ರಾಫಿಕ್ ಸರ್ವೆಯನ್ನು ಕೆಲವು ಜಿಲ್ಲೆಗಳಲ್ಲಿ ಮಾಡಿದಿರಿ, ಅದರ ಬಗ್ಗೆ ಏನಾಯಿತು ಅಂತ ಕೆಲವು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ "ರೈಟ್ಸ್ ಇಂಡಿಯಾ" ಎಂಬ ಕೇಂದ್ರ ಸರ್ಕಾರದ ಸಂಸ್ಥೆ ಇದೆ. ಆ ಸಂಸ್ಥೆಯ ಮೂಲಕ ಕೋಲಾರ, ತುಮಕೂರು, ಬೆಂಗಳೂರು, ಮೈಸೂರು ಮತ್ತು ಮಂಡ್ಯ ಈ ೫ ಜಿಲ್ಲೆಗಳಲ್ಲಿ ಟ್ರಾಫಿಕ್ ಇವತ್ತು ಏನು ಇದೆ? ಮುಂದಿನ ೫ ವರ್ಷಗಳ ನಂತರ ಏನು ಆಗಬಹುದು? ಅದೇರೀತಿ ೧೦ ವರ್ಷಗಳ ನಂತರ ಏನಾಗಬಹುದು? ಎಂಬುದನ್ನು ವಿಚಾರ ಮಾಡುವುದಕ್ಕೆ ಅವರಿಗೆ ನಾವು ಸುಮಾರು ೧೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ವರದಿಯನ್ನು ಕೊಡಬೇಕೆಂದು ಹೇಳಿದ್ದೆವು. ಅದಂತೆ ಅವರು ತಮ್ಮ ವರದಿಯನ್ನೂ ಕೂಡ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಮೈಸೂರು. ಕೋಲಾರ ಜಿಲ್ಲೆಗಳ ರಾಷ್ಟ್ರೀಕರಣ ಕಾರ್ಯಕ್ರಮವನ್ನು ಘೋಷಣೆ ಮಾಡಿರತಕ್ಕಂತಹದ್ದು ಎನ್ನುವುದನ್ನೂ ಸಹ ಹೇಳುವುದಕ್ಕೆ ಬಯಸುತ್ತೇನೆ.

ಮತ್ತೆ ಟೂರಿಸ್ಟ್ ಸ್ಪಾಟ್‌ಗಳಿಗೆ ಬಸ್ಸುಗಳನ್ನು ಹಾಕಬೇಕೆಂದು ಕೆಲವು ಸದಸ್ಯರು ಹೇಳಿದ್ದಾರೆ. ಇದನ್ನು ಕೆಎಸ್‌ಟಿಡಿಸಿ. ಮಾಡುತ್ತಿದೆ. ಆ ಸಂಸ್ಥೆಯು ಬಸ್‌ಗಳಲ್ಲಿ ಗೈಡ್‌ಗಳನ್ನೂ ಕೂಡ ಇಟ್ಟು ಟೂರಿಸ್ಟ್ ಸ್ಪಾಟ್‌ಗಳಿಗೆ ಬಸ್ಸುಗಳನ್ನು ಓಡಿಸುತ್ತಿದೆ. ಅದೂ ಕೂಡ ಸರ್ಕಾರದ ಸಂಸ್ಥೆ. ಅದರ ಜೊತೆಗೆ ಕೆಎಸ್‌ಆರ್‌ಟಿಸಿ ಯಂ ಕಾಂಪಿಟೇಷನ್ ಮಾಡತಕ್ಕಂತಹದ್ದು ಅಗತ್ಯ ಇಲ್ಲ. ಅದಕ್ಕೆ ಬದಲಾಗಿ, ನಂದಿಗೆ, ಬನ್ನೇರುಘಟ್ಟಕ್ಕೆ ಅಥವಾ ತಿರುಪತಿಗೆ ಸಾಕಷ್ಟು ಟ್ರಿಪ್‌ಗಳನ್ನು ಅಂದರೆ ಹೆಚ್ಚು ಬಸ್ಸುಗಳನ್ನು ಓಡಿಸುತ್ತಿದ್ದೇವೆ. ಆದರೆ ಅದರಲ್ಲಿ ಗೈಡ್ಸ್‌ಗಳನ್ನು ಇಟ್ಟುಕೊಂಡು ಕಂಡಕ್ಟೆಡ್ ಟೂರಿಸ್ಟ್ ಅನ್ನು ಮಾಡಿರತಕ್ಕಂತಹದ್ದು ಅಗತ್ಯ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಮತ್ತೆ ಬಿಟಿಎಸ್. ನಲ್ಲಿ ಲಾಟರಿ ಸಿಸ್ಟಂ ಹಾಗೂ ಮಿನಿ ಬಸ್‌ಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಮಾತನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದೂ ಸಹ ತಪ್ಪು ಕಲ್ಪನೆ. ಲಾಟರಿ ಸಿಸ್ಟಂನ್ನು ಇಂಟರ್‌ಡ್ಯೂಸ್ ಮಾಡಿದ್ದು ಕೇವಲ ಕಂಡಕ್ಟರ್ ಹಣವನ್ನು ಹೊಡೆಯುತ್ತಿದ್ದಾರೆ, ಅದನ್ನು ತಪ್ಪಿಸುವುದಕ್ಕೆಂದಲ್ಲ ಪ್ರಯಾಣಿಕರೂ ಕೂಡ ಟಿಕೆಟನ್ನು ಕೇಳಿ ಪಡೆಯಬೇಕು. ಅನೇಕರು ಟಿಕೇಟನ್ನೇ ಪಡೆಯುತ್ತಿರಲಿಲ್ಲ. ಅದು ತಪ್ಪುತ್ತದೆ ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ. ಇದ

ರಿಂದಾಗಿ ಇವತ್ತು ನಮ್ಮ ಬಸ್ಸುಗಳಲ್ಲಿ ಟಿಕೆಟ್ ಸಹ ಬೀಳುತ್ತಿಲ್ಲ. ಬಸ್ಸುಗಳೂ ಬಹಳ ಸ್ವಚ್ಛ ವಾಗಿರುತ್ತವೆ. ಅದೇ ರೀತಿ ಬಸ್ ನಿಲ್ದಾಣವೂ ಸಹ ಸಾಕಷ್ಟು ಸ್ವಚ್ಛತೆಯಿಂದ ಕೂಡಿದೆ. ಇದರಿಂದ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ನಮ್ಮ ಆದಾಯವೂ ಹೆಚ್ಚಾಗಿದೆ. ಇದನ್ನು ನಿಲ್ಲಿಸತಕ್ಕ ಅಗತ್ಯ ಇಲ್ಲ. ಇದಕ್ಕೆ ಬದಲಾಗಿ ಈಗ ಕೊಡತಕ್ಕಂತಹ ಬಹುಮಾನದ ಪದ್ಧತಿಯನ್ನು ಬದಲು ಮಾಡಬೇಕೆಂಬ ಉದ್ದೇಶ ವನ್ನು ಇಟ್ಟುಕೊಂಡು ಆ ಬಗ್ಗೆ ಮುಂದಿನ ತಿಂಗಳು ಕಾರ್ಯಕ್ರಮ ಒಂದನ್ನು ಇಟ್ಟುಕೊಂಡಿದ್ದೇವೆ.

ಮಿನಿ ಬಸ್‌ಗಳನ್ನು ಪ್ರಾಯೋಗಿಕವಾಗಿ ಓಡಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಕಳೆದ ಎರಡು ವರ್ಷಗಳ ಹಿಂದೆಯೇ ಹೇಳಿದ್ದರು. ಕಲ್ಕತ್ತದಲ್ಲಿ ಯಾವ ರೀತಿ ಮಿನಿ ಬಸ್ಸುಗಳನ್ನು ಓಡಿಸುತ್ತಿದ್ದಾರೆ, ಅದೇರೀತಿ ನೀವೂ ಪ್ರಯತ್ನ ಮಾಡಬೇಕೆಂದು ಹೇಳಿದ್ದರು. ನಾವು ಆ ಪ್ರಯತ್ನ ವನ್ನು ಈಗ ಮಾಡಿದ್ದೇವೆ ನಾವು ಮಿನಿ ಬಸ್‌ಗಳನ್ನು ಹಾಕಿರುವುದು ಕೇವಲ ಎಂಟು. ಈ ಮಿನಿ ಬಸ್‌ಗಳನ್ನು ಹೆಚ್ಚು ಮಾಡಬೇಕೋ ಕಡಿಮೆ ಮಾಡಬೇಕೋ ಎನ್ನುವ ಬಗ್ಗೆ ಇನ್ನೂ ಸ್ವಲ್ಪ ದಿವಸ ಕಾದು ನೋಡಬೇಕಾಗುತ್ತದೆ. ಅಲ್ಲಿರತಕ್ಕ ಪ್ಯಾಸೆಂಜರ್ಸ್ phase structure ಇವುಗಳನ್ನೆಲ್ಲಾ ನೋಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಇನ್ನು ರಸ್ತೆಗಳಲ್ಲಿ ದೋಟೆಲ್‌ಗಳನ್ನು ಏಕೆ ಮಾಡಬಾರದು ಎಂದು ಕೆಲವು ಸದಸ್ಯರು ಹೇಳಿದ್ದಾರೆ. ಬೆಂಗಳೂರು ಮೈಸೂರು ರಸ್ತೆಯಲ್ಲಿ ಕೆಎಂಎಫ್ ನವರು ಹಾಗೂ ಕೆಎಸ್‌ಟಿಡಿಸಿನವರು ಇದನ್ನು ಮಾಡಿದ್ದಾರೆ. ಇದನ್ನು ಮನಗಂಡು ಮತ್ತೆ ನಾವು ಮಾಡತಕ್ಕದ್ದು ಅಗತ್ಯ ಇಲ್ಲವೆಂದು ಅದನ್ನು ಮಾಡಬಾರದೆಂದು ನಾವು ನಿರ್ಧಾರಕ್ಕೆ ಬಂದಿದ್ದೇವೆ, ಮತ್ತೆ ಕೆಲವು ಮಾನ್ಯ ಸದಸ್ಯರು ರೋಡ್ ಸೇಫ್ಟಿ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳಿದ್ದಾರೆ ಇದು ಬಹಳ ಉತ್ತಮವಾದ ಸಲಹೆ. ಈಗಾಗಲೇ ನಾವು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಪ್ರತಿ ೬ ತಿಂಗಳಿಗೆ ಒಮ್ಮೆ ಸಭೆ ಸೇರುವುದಿದ್ದು ಈ ಸಮಿತಿ ಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರು ಇದ್ದಾರೆ. ಈ ಸಮಿತಿಯಿಂದ ಅದಕ್ಕೆ ಬೇಕಾಗಿರತಕ್ಕ ಹಣ, ಇರತಕ್ಕ ತೊಂದರೆಯನ್ನು ನಿವಾರಿಸುವುದಕ್ಕೆ ಸಹಾಯಕವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ, ಮತ್ತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿ ಮಾಡಿ ಅಪಘಾತಗಳನ್ನು ತಡೆಗಟ್ಟುವು ದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ವಿಚಾರ ಮಾಡಬೇಕೆಂದು ನಾವು ಮಾಡಿದ್ದೇವೆ. ಅದಕ್ಕೆ ಇದುವರೆವಿಗೂ ಹಣ ಆಗಿರಲಿಲ್ಲ. ನಮ್ಮ ಸಂಸ್ಥೆಯಿಂದ ೧೦ ಲಕ್ಷ ರೂಪಾಯಿ ಹಣ ಕೊಟ್ಟು ಈ ವರ್ಷದಿಂದ ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡುತ್ತಿದ್ದೇವೆಂದು ಹೇಳುತ್ತೇನೆ. ಇನ್ನು ಕೆಲವು ಸದಸ್ಯರು ಸ್ಟೇಜ್ ರಿವೈಸ್ ಮಾಡಬೇಕೆಂದು ಹೇಳಿದ್ದಾರೆ. ಈಗಿರತಕ್ಕ ಸ್ಟೇಜಸ್‌ಗಳು ಸರಿಯಿಲ್ಲ ವೆಂದು ಅವನ್ನು ರಿವೈಸ್ ಮಾಡುವುದಕ್ಕೆ ಹೋದರೆ ಬೆಲೆಗಳನ್ನು ನಿರ್ಧಾರ ಮಾಡುವುದರಲ್ಲಿ ತಾರ ತಮ್ಯ ಆಗುತ್ತದೆ. ಆದ್ದರಿಂದ ಎಲ್ಲಿ ಸ್ಟೇಜ'ಗಳನ್ನು ನಿರ್ಧಾರ ಮಾಡುವುದರಲ್ಲಿ ಅನ್ಯಾಯವಾಗಿದೆ ಅಲ್ಲಿ ಸ್ಟೇಜ್ ಬ್ರ್ಯಾಕೆಟ್‌ಗಳನ್ನು ಮಾಡುವುದರ ಮೂಲಕ ಯಾವ ಸ್ಥಳದಲ್ಲಿ ಪ್ರಯಾಣಿಕರಿಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸತಕ್ಕ ಪ್ರಯತ್ನ ಮಾಡಿದ್ದೇವೆ ಎಲ್ಲಿ ಹೆಚ್ಚಿಗೆ ಸ್ಟೇಜ್ ಫಿಕ್ಸ್ ಮಾಡಲಾಗಿದೆ ಎಂಬ ಬಗ್ಗೆ ಮಾನ್ಯ ಸದಸ್ಯರು ಸಾರಿಗೆ ಇಲಾಖೆಯ ಆಡಳಿತ ವರ್ಗದವರ ಗಮನಕ್ಕೆ ತಂದರೆ ಅದನ್ನು ಸರಿಮಾಡ ತಕ್ಕ ಭರವಸೆಯನ್ನು ಕೊಟ್ಟು ಮುಂದಿನ ಸಾರಿ ಬೆಲೆಗಳನ್ನು ಸಾರಿಗೆ ಸಂಸ್ಥೆಯಲ್ಲಿ ಬದಲಾವಣೆ ಮಾಡು ವಾಗ ಈ ಸ್ಟೇಜುಗಳನ್ನು ರಿವೈಜ್ ಮಾಡಿದರೆ ಸೂಕ್ತ ಕಾಣುತ್ತದೆ ಈಗ ಸ್ಟೇಜ್ ಬದಲಾವಣೆ ಮಾಡು ವುದರಿಂದ ಅನುಕೂಲಕ್ಕೆ ಬದಲು ಹಾನಿಯೇ ಹೆಚ್ಚು ಆಗುತ್ತದೆ. ಆದುದರಿಂದ ಇದರ ಬದಲು ಸ್ಟೇಜ್ ಬ್ರ್ಯಾಕೆಟ್ ಮಾಡುವುದು ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ ಇನ್ನು ಹಿರಿಯೂರು ಹಾಗೂ ಹರಿಹರದಲ್ಲಿ ಬಸ್ ನಿಲ್ದಾಣ ಆಗಬೇಕೆಂದು ಮಾನ್ಯ ಪಂಪಾಪತಿಯವರು ಸಲಹೆ ಮಾಡಿದ್ದಾರೆ. ಹಾಗೂ ದಾವಣಗೆರೆಗೆ ಬಸ್ ಹಾಕಬೇಕೆಂದು ಹೇಳಿದ್ದಾರೆ. ಇದನ್ನು ನಾನು ಸಂಪೂರ್ಣವಾಗಿ ಒಪ್ಪು ತ್ತೇನೆ ಈ ವರ್ಷ ಹಿರಿಯೂರು ಹಾಗೂ ಹರಿಹರದಲ್ಲಿ ಬಸ್ ನಿಲ್ದಾಣವಲ್ಲದೇ ಹರಿಹರದಲ್ಲಿ ಡಿಪೋ ಮಾಡಿಕೊಡಬೇಕೆಂದು ಸಾರಿಗೆ ಸಂಸ್ಥೆ ಕಾರ್ಯಕ್ರಮ ಹಾಕಿಕೊಂಡಿದೆ ಮಾನ್ಯ ಮೊಕಟರಾಮಯ್ಯ ನವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅದನ್ನು ಮತ್ತೆ ಪ್ರಸ್ತಾಪ ಮಾಡು ವುದಿಲ್ಲ. ಬಹುಶಃ ತಪ್ಪು ಕಲ್ಪನೆಯಿಂದ ಅವರು ಆರೋಪ ಮಾಡಿದ್ದಾರೆ. ಈ ಸದನದ ಇತರೆ ಯಾವುದೇ ಸದಸ್ಯರ ಹತ್ತಿರ ಯಾವುದೇ ರೀತಿಯ ಸಾಕ್ಷಿ, ಆಧಾರ, ಪುರಾವೆಗಳು ಇದ್ದರೂ ಸರಿಯೇ ಅವರದೇ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ. ಅವರು ಯಾವ ರೀತಿಯ ವಿಚಾರಣೆಯನ್ನು ಮಾಡಿದರೂ ಕೂಡ ಆ ವಿಚಾರಣೆಯನ್ನು ನಾನು ಸ್ವೀಕಾರ ಮಾಡುವುದಕ್ಕೆ ತಯಾರಿದ್ದೇನೆ. ಯಾರೋ

ನಿಮಗೆ ತಪ್ಪು ಕಲ್ಪನೆ ಕೊಟ್ಟಿದ್ದಾರೆ. ಇನ್ನು ನೀವು ಸಿವಿಲ್ ಎಂಜಿನಿಯರ್ ಬಗ್ಗೆ ಏನು ಹೇಳಿದ್ದೀರಿ ಅದರ ಬಗ್ಗೆ ನಾನು ಒಪ್ಪುತ್ತೇನೆ. ಅದನ್ನು ಮುನಗಂಡೇ ನಾನು ಇಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಈ ಬಗ್ಗೆ ವಿಚಾರಣೆ ಕೂಡಾ ನಡೆಯುತ್ತಿದೆ. ಇನ್ನು ನಮ್ಮ ಸಾರಿಗೆ ಸಂಸ್ಥೆಯ ಛೀಫ್ ಎಂಜಿನಿಯರವರು ಜಪಾನ್‌ಗೆ ಹೋಗಿದ್ದಾರೆಂದು ಹೇಳಿದ್ದಾರೆ ಅವರು ವೈಎಂಸಿಎ ಮೆಂಬರ್ ಆಗಿದ್ದು, ಆ ಮೂಲಕ ಅವರು ಅಲ್ಲಿಗೆ ಹೋದರೆ ಅದನ್ನು ನಾನು ತಡೆಗಟ್ಟುವುದಕ್ಕೆ ಬರುವುದಿಲ್ಲ. ಅವರ ಮೇಲೆ ಏನಾದರೂ ನಿರ್ದಿಷ್ಟವಾದ ಆಪಾದನೆಗಳು ಇದ್ದರೆ ಖಂಡಿತಾ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಸಾರಿಗೆ ಸಂಸ್ಥೆಯಲ್ಲಿ ಚೆನ್ನಾಗಿ ಕೆಲಸ ಮಾಡುತ್ತಾ ಇರುವಾಗ ಅನಾವಶ್ಯಕವಾಗಿ ಊಹಾಪೂಹದಿಂದ ಯಾರೋ ಹೇಳುತ್ತಾರೆ ಎಂದು ಹೇಳಿ ನಾನು ಅಧಿಕಾರಿಗಳನ್ನು ನಿಂದನೆ ಮಾಡುವುದಕ್ಕೆ ತಯಾರು ಇಲ್ಲ. ಸಾಕ್ಷಿ, ಪುರಾವೆಯಿದ್ದರೆ ಕೊಡಿ, ವಿಚಾರಣೆಯನ್ನು ಮಾಡೋಣ. ತಾವು ಯಾವರೀತಿ ಅಪ್ಪಣೆ ಕೊಡುತ್ತೀರೋ ಅದಕ್ಕೆ ನಾನು ತಯಾರು ಇದ್ದೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ರಾಷ್ಟ್ರೀಕರಣವಾಗೀತಕ್ಕ ಪ್ರದೇಶಗಳಲ್ಲಿರತಕ್ಕ ಖಾಸಗಿ ಬಸ್‌ಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಕೆಲಸವನ್ನು ಕೊಡುವುದರ ಬಗ್ಗೆ ನಾವು ಈಗಾಗಲೇ ನಿರ್ಧಾರ ಮಾಡಿದ್ದೇವೆ. ಮೊದಲನೇ ಕಂತಿನಲ್ಲಿ ಒಂದು ವಾರದ ಹಿಂದೆ ೨೫೦-೩೦೦ ಜನಗಳಿಗೆ ಕೆಲಸ ಕೊಟ್ಟಿದ್ದೇವೆ. ಕೆಲಸ ಕೊಡುವಾಗ ಏನೋ ನಡೆದಿದೆ ಎನ್ನುವ ಬಗ್ಗೆ ಗುಲ್ಬರ್ಗ ಜಿಲ್ಲೆಯ ಶಾಸಕರೊಬ್ಬರು ಇಲ್ಲಿ ಪ್ರಸ್ತಾಪ ಮಾಡಿದರು. ಅದು ನನ್ನ ಕಿವಿಗೆ ಬಂದ ತಕ್ಷಣ ಅದರ ಬಗ್ಗೆ ವಿಚಾರ ಮಾಡಿ ಮಾಡಿದ್ದ ನೇಮಕಾತಿಗಳನ್ನು ರದ್ದು ಮಾಡಿ ಐಪಿಎಸ್ ಅಧಿಕಾರಿಯ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇನೆ. ಒಂದು ಬಸ್ಸಿನಲ್ಲಿ ೧೫-೨೦ ಜನ ಕೆಲಸ ಮಾಡುತ್ತಿದ್ದರು ಎಂದು ಬಸ್ ಮಾಲೀಕರು ಹೇಳುತ್ತಾರೆ. ಅವರೆಲ್ಲರಿಗೂ ನಾವು ಕೆಲಸ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಸ್ ಮಾಲೀಕರು ಡ್ರೈವಿಂಗ್ ಲೈಸೆನ್ಸ್ ಇಲ್ಲದವನನ್ನು ಡ್ರೈವರ್ ಎಂದು ಹೆಸರು ಕಳುಹಿಸುತ್ತಾರೆ. ಅದೇರೀತಿ ಕಂಡಕ್ಟರ್ ಲೈಸೆನ್ಸ್ ಇಲ್ಲದವನನ್ನು ಕಂಡಕ್ಟರ್ ಎಂದು ಹೆಸರು ಕಳುಹಿಸುತ್ತಾರೆ. ನಾಲ್ಕು ಜನ ಮ್ಯಾನೇಜರ್‌ಗಳು ಇದ್ದರು ಎಂದು ಹೆಸರು ಕಳುಹಿಸುತ್ತಾರೆ. ಈ ತರಹ ಎಲ್ಲರೂ ಅರ್ಜಿ ಹಾಕಿಕೊಳ್ಳುವುದರಿಂದ ನೇಮಕ ಮಾಡಿಕೊಳ್ಳಲಿಕ್ಕೆ ತಡವಾಗಿದೆ. ನಿಜವಾಗಿಯೂ ಯಾರು ಬಸ್ಸಿನಲ್ಲಿ ಕೆಲಸ ಮಾಡುತ್ತಿದ್ದರು ಅಂತಹವರ ಬಗ್ಗೆ ಪರಿಶೀಲನೆ ಮಾಡಿ ಕೆಲಸ ಮಾಡುತ್ತಿದ್ದವರಿಗೆ ಅನುಕೂಲವಾಗಬೇಕು. ಅವರಿಗೆ ಯಾವುದೇ ರೀತಿಯಲ್ಲಿ ಅನ್ಯಾಯವಾಗಬಾರದು ಅಂತಹವರಿಗೆ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಆ ಕೆಲಸವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅಂತರ ರಾಜ್ಯ ಒಪ್ಪಂದದಲ್ಲಿ ಕರ್ನಾಟಕ ರಾಜ್ಯಕ್ಕೆ ತೊಂದರೆಯಾಗಿದೆಯೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಕೆಲವು ರಾಜ್ಯಗಳ ಜೊತೆಯಲ್ಲಿ ಮಾಡಿಕೊಂಡ ಒಪ್ಪಂದದಿಂದ ನಮಗೆ ಅನುಕೂಲವಾಗಿದೆ. ಬಸ್ ಟು ಬಸ್ ಪ್ಯಾರಿಟಿ ಇರಬೇಕೇ, ಕಿಲೋಮೀಟರ್ ಟು ಕಿಲೋಮೀಟರ್ ಪ್ಯಾರಿಟಿ ಇರಬೇಕೇ ಪರ್ಮಿಟ್ ಟು ಪರ್ಮಿಟ್ ಇರಬೇಕೇ ಎನ್ನುವ ಬಗ್ಗೆ ಪ್ರಶ್ನೆಯಿದೆ. ಬೇರೆ ರಾಜ್ಯಗಳ ಜೊತೆ ಹಿಂದೆ ಆದಂತಹ ಒಪ್ಪಂದದ ಬಗ್ಗೆ ಏನೂ ಮಾಡುವುದಕ್ಕಾಗುವುದಿಲ್ಲ. ಮುಂದೆ ಆಗತಕ್ಕ ಒಪ್ಪಂದ ಏನಿದೆ ಅದರಲ್ಲಿ ನಮ್ಮ ರಾಜ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಒಪ್ಪಂದ ಮಾಡಿಕೊಳ್ಳಲಾಗುವುದು. ಈಗ ಸಧ್ಯದಲ್ಲಿ ಮಾಡಿಕೊಂಡಿರುವ ಒಪ್ಪಂದದಿಂದ ನಮ್ಮ ರಾಜ್ಯಕ್ಕೆ ಅನುಕೂಲವಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ನಮ್ಮ ರಾಜ್ಯಕ್ಕೆ ಅನುಕೂಲವಾಗಿದೆ ಎರಡನೇ ರಾಜ್ಯಕ್ಕೆ ತೊಂದರೆಯಾಗಿದೆ ಅಂದರೆ, ನಮ್ಮ ಸಾರಿಗೆ ಸಂಸ್ಥೆಗೆ ಅನುಕೂಲವಾಗಿರುವುದನ್ನು ಹೇಳುವುದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಮ್ಮ ರಾಜ್ಯದ ಪ್ರಯಾಣಿಕರಿಗೆ, ನಮ್ಮ ರಾಜ್ಯದ ಬೊಕ್ಕಸಕ್ಕೆ ಅನುಕೂಲವಾಗುವ ದೃಷ್ಟಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಕಾನಡೆಯವರು ನಮ್ಮ ಬಸ್ಸುಗಳ ಬಣ್ಣ ಬದಲಾವಣೆಯಾಗಬೇಕೆಂದು ಹೇಳಿದರು. ಬಸ್ಸಿನ ಬಣ್ಣ ಬದಲಾವಣೆಯಾಗಿದೆ. ಕೆಂಪು ಬಣ್ಣವೇ ಇರಬೇಕು ಅದನ್ನು ಬದಲಾವಣೆ ಮಾಡಬಾರದೆನ್ನುವುದು ಬಹುತೇಕ ಜನಗಳ ಅಭಿಪ್ರಾಯವಾಗಿದೆ, ಆದ್ದರಿಂದ ಅದೇ ಬಣ್ಣವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತೀರ್ಮಾನ

ಮಾಡಿದ್ದೇವೆ, ಕಾನಡೆಯವರು ನೌಕರರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಹೇಳಿದರು. ಆ ಬಗ್ಗೆ ಅಂಕಿಅಂಶಗಳನ್ನು ಎಷ್ಟು ಜನರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ತಮ್ಮ ಮುಂದಿಟ್ಟಿದ್ದೇವೆ. ಮೊನ್ನೆ ಶಿರಸಿ ಡಿಪೋದಲ್ಲಿ ಆದಂತಹ ಘಟನೆಯ ಬಗ್ಗೆ ಹೇಳಿದರು. ಶಿರಸಿ ಡಿಪೋದಲ್ಲಿ ಬೆಂಕಿಬಿದ್ದು ರೆಕಾರ್ಡ್ ನಾಶವಾಗಿದೆಯೆಂದು ಹೇಳಿದ ಮೇಲೆ ನಾನು ಅದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಲಾಗಿ, ಘಟನೆ ನಡೆದದ್ದು ನಿಜ ಆದರೆ ಅದೃಷ್ಟವಶಾತ್ ರೆಕಾರ್ಡ್‌ಗಳು ಭಸ್ಮವಾಗಿಲ್ಲ. ಈ ಬಗ್ಗೆ ಮುಂದಿನ ವಿಚಾರಣೆ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಪ್ರತಿ ವರ್ಷ ಎಷ್ಟು ಬಸ್‌ಗಳನ್ನು ಖರೀದಿ ಮಾಡಿದ್ದೀರಿ ಎಂದು ಮಾನ್ಯ ಕಾನಡೆಯವರು ಕೇಳಿದರು. ಕಳೆದ ವರ್ಷ ೧೯೮೭–೮೮ನೇ ಸಾಲಿನಲ್ಲಿ ೧೩೫೫ ಹೊಸ ಬಸ್ಸುಗಳನ್ನು ಖರೀದಿ ಮಾಡಿದ್ದೇವೆ. ಈ ವರ್ಷ ೧೯೮೮ನೇ ಸಾಲಿನಲ್ಲಿ ೧೬೬೭ ಬಸ್ಸುಗಳನ್ನು ಖರೀದಿ ಮಾಡಬೇಕೆನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಖರೀದಿ ಮಾಡಿದ ಬಸ್ಸುಗಳಲ್ಲಿ ಕಳೆದ ವರ್ಷ ಉತ್ತರ ಕನ್ನಡ ಜಿಲ್ಲೆಗೆ ೧೯೮೭–೮೮ರಲ್ಲಿ ೮೯ ಹೊಸ ಬಸ್ಸುಗಳನ್ನು ಕೊಟ್ಟಿದ್ದೇವೆ, ಈ ವರ್ಷ ೭೮ ಹೊಸ ಬಸ್ಸುಗಳನ್ನು ಕೊಡಬೇಕೆನ್ನುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮತಿ ಬೇಗಂರವರು ನಮ್ಮ ಬಸ್ಸುಗಳು ಕೆಟ್ಟು ನಿಂತಾಗ ಅದನ್ನು ರಿಪೇರಿ ಮಾಡಲಿಕ್ಕೆ ಬೇಕಾಗಿರತಕ್ಕ ಕೆಲವು ಸಲಕರಣೆಗಳು ಇಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಎಕ್ಸ್‌ಪ್ರೆಸ್ ಮತ್ತು ನಾನ್‌ಸ್ಟಾಪ್ ಬಸ್‌ಗಳಲ್ಲಿ ಸಲಕರಣೆಗಳನ್ನು ಇಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಕೆಲವು ಕಡೆಗಳಲ್ಲಿ ಆ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡತಕ್ಕದ್ದು ಬಹಳ ಮುಖ್ಯ. ಸಾರಿಗೆ ಸಂಸ್ಥೆ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ಜನರಿಗೆ ಅನುಕೂಲ ಮಾಡಿಕೊಡತಕ್ಕದ್ದು ಬಹಳ ಮುಖ್ಯ. ಸಾರಿಗೆ ಸಂಸ್ಥೆಯಿಂದ ಲಾಭ ಮಾಡತಕ್ಕ ಉದ್ದೇಶ ಸರ್ಕಾರಕ್ಕೆ ಇಲ್ಲ. ನಷ್ಟವಾಗದ ರೀತಿಯಲ್ಲಿ ಸಮರ್ಪಕವಾದ ಸೇವೆಯನ್ನು ನಾಡಿನ ಜನತೆಗೆ ಕಲ್ಪಿಸಿಕೊಡುವ ವ್ಯವಸ್ಥೆಯಾಗಬೇಕು, ಬಹಳ ಮುಖ್ಯವಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಅಪಘಾತಗಳು ಕಡಿಮೆಯಾಗಬೇಕೆಂದು ತಮ್ಮ ಕಳಕಳಿಯನ್ನು ವ್ಯಕ್ತಮಾಡಿದ್ದಾರೆ. ಅದರ ಬಗ್ಗೆ ನನಗೂ ನೋವು ಇದೆ. ಆದಷ್ಟು ಅಪಘಾತಗಳು ಕಡಿಮೆಯಾಗುವಂತೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಈ ಮೂಲಕ ತಮಗೆ ಆಶ್ವಾಸನೆಯನ್ನು ಮಾನ್ಯ ಸದಸ್ಯರುಗಳಿಗೆ ಕೊಡಲಿಕ್ಕೆ ಬಯಸುತ್ತೇನೆ.

ಇನ್ನು ಮೋಟಾರು ವಾಹನ ಇಲಾಖೆಯ ಬಗ್ಗೆ ಹೇಳುವುದಾದರೆ ಆ ಇಲಾಖೆ ಮಾಡಿರತಕ್ಕ ಕೆಲಸದ ಬಗ್ಗೆ ನನಗೆ ಬಹಳ ಸಂತೋಷವಾಗುತ್ತದೆ. ಈ ವರ್ಷ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದರಲ್ಲಿ ಬಹಳ ಒಳ್ಳೆಯ ಕೆಲಸವನ್ನು ಇಲಾಖೆ ಮಾಡಿದೆ. ಟ್ಯಾಕ್ಸ್ ಅರಿಯರ್ಸ್ ಬಗ್ಗೆ ಮಾತನಾಡುವುದಾದರೆ ಈ ವರ್ಷ ೧೯೮೭–೮೮ನೇ ಸಾಲಿನಲ್ಲಿ ೧೫ ಕೋಟಿ ರೂಪಾಯಿ ಸಂಗ್ರಹ ಮಾಡುವ ಗುರಿಯನ್ನಿಟ್ಟುಕೊಂಡಿದ್ದು ಅದರಲ್ಲಿ ಈ ವರ್ಷ ೧೩.೮.೭ ಕೋಟಿ ರೂಪಾಯಿಗಳನ್ನು ಮೋಟಾರು ವಾಹನ ಇಲಾಖೆ ಸಂಗ್ರಹ ಮಾಡಿದೆ. ಬಹಳ ಉತ್ತಮವಾದ ಕೆಲಸವನ್ನು ಅವರು ಮಾಡಿದ್ದಾರೆ. ಉಳಿದಿರತಕ್ಕಂಥ ೬–೭ ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿಲ್ಲ. ಇದಕ್ಕೆ ಕಾರಣ ಏನೆಂದರೆ ಕೆಲವು ಖಾಸಗಿ ಬಸ್ಸಿನವರು ಹೈಕೋರ್ಟಿಗೆ ಹೋಗಿದ್ದಾರೆ, ಬೇರೆ ಬೇರೆ ಕೋರ್ಟುಗಳಿಗೆ ಹೋಗಿದ್ದಾರೆ. ಸುಮಾರು ಎರಡೂವರೆ ಕೋಟಿ ರೂ. ಹಣ ಕೋರ್ಟಿನಲ್ಲಿ ಇರುವುದರಿಂದ, ಅಲ್ಲಿ ಈ ತಕರಾರು ಇರುವುದರಿಂದ ಈ ಹಣವನ್ನು ಸಂಗ್ರಹ ಮಾಡಲಿಕ್ಕೆ ಆಗಲಿಲ್ಲ. ಮತ್ತು ಉಳಿದಿರತಕ್ಕಂಥ ಎರಡು ಕೋಟಿ ಏನಿದೆ, ಎರಡೂವರೆ ವರ್ಷಗಳ ಹಿಂದೆ ದ್ವಿಚಕ್ರ ವಾಹನಗಳ ಮೇಲೆ ಲೈಫ್‌ಟೈಮ್ ಟ್ಯಾಕ್ಸ್ ವಿಧಿಸುವುದನ್ನು ತೆಗೆದುಕೊಂಡು ಬಂದೆವು. ಹತ್ತು-ಹದಿನೈದು ವರ್ಷಗಳಿಂದ ಉಪಯೋಗಿಸಿದ ವಾಹನಗಳನ್ನು ಅವುಗಳ ಮಾಲೀಕರು ಕಂಡಮ್ ಮಾಡಿ ಬಿಸಾಕಿದ್ದಾರೆ. ಅವುಗಳ ಮೇಲೆ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ಆಗಿಲ್ಲ. ಇದರ ಬಗ್ಗೆ ವಿಶೇಷ ಒಂದು ಡ್ರೈವ್ ಇಟ್ಟುಕೊಂಡು ಪ್ರಯತ್ನ ಮಾಡಿದ್ದರ ಪರಿಣಾಮವಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು ಈಗಾಗಲೇ ಸಂಗ್ರಹಿಸಿದ್ದಾರೆ. ಕೆಲವು ವಾಹನಗಳು, ಕಂಡಮ್ ಆಗಿರುವುದರಿಂದ ಈ ಬಾಕಿ ಇದೆ. ಇದರಿಂದ ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗದೇ ಇರಬಹುದು ಎಂದು ನಾನು ತಿಳಿಯಕೊಂಡಿದ್ದೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಇಲಾಖೆಯಲ್ಲಿ ಆಡಳಿತದಲ್ಲಿ ಆಗಬೇಕಾಗಿರತಕ್ಕಂಥ ಸುಧಾರಣೆಗಳು. ಕೆಲವು ಕೆಲಸವನ್ನು ನಾವು ಮಾಡಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ ಹಿಂದೆ ಮೋಟಾರ್ ವಾಹನ ಇಲಾಖೆಯಲ್ಲಿ ಹತ್ತು ಲಕ್ಷಗಳಷ್ಟು ಏನು ಫೈಲ್‌ಗಳಿದ್ದವು ಅವುಗಳನ್ನು ಇಡತಕ್ಕಂಥ ಕ್ರಮ

ಸರಿ ಇರಲಿಲ್ಲ. ಇಂತಹ ಅನೇಕ ಫೈಲುಗಳನ್ನು ಅನಾವಶ್ಯಕವಾಗಿ ಇಟ್ಟುಕೊಳ್ಳುತ್ತಿದ್ದರು. ಇಡೀ ರಾಜ್ಯದ ೨೦ ಆರ್. ಟಿ. ಓ. ಕಚೇರಿಗಳಲ್ಲಿ ವೀಡಿಂಗ್ ಔಟ್ ಆಫ್ ಫೈಲ್ಸ್ ಎಂದು ಒಂದು ವಿಶೇಷ ಪ್ರಾಯ ಕಾರ್ಯಕ್ರಮವನ್ನು ತೆಗೆದುಕೊಂಡು ಶೇಕಡಾ ೯೦ರಷ್ಟು ಅನಾವಶ್ಯಕ ಫೈಲುಗಳನ್ನು ತೆಗೆದು ಹಾಕುವುದರ ಜೊತೆಗೆ ಇನ್ನೊಂದು ಕೆಲಸ ಮಾಡಿದ್ದೇವೆ. ಅದೇನೆಂದರೆ ಎರಡು ವರ್ಷಗಳ ಹಿಂದೆ ಕಾರ್ಯದರ್ಶಿಗಳ ಮತ್ತು ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಮಹಾರಾಷ್ಟ್ರಕ್ಕೆ ಹೋಗಿದ್ದೆ. ಅಲ್ಲಿ ಫೈಲುಗಳನ್ನು ಇಡತಕ್ಕಂಥ ಪದ್ಧತಿ ಬಹಳ ಚೆನ್ನಾಗಿದೆ ಆಫೀಸಿಗೆ ಹೋದರೆ ಬಹಳ ಸಂತೋಷ ವಾಗುತ್ತದೆ. ಪ್ರತಿಯೊಂದು ಡಿಪ್ಪೋದಲ್ಲೂ ಪ್ರತಿಯೊಂದು ಕಡತವನ್ನೂ ಬಟ್ಟೆಯಲ್ಲಿ ಮುಚ್ಚಿಟ್ಟು ನಂಬರ್ ಹಾಕಿ ಒಂದು ಕಾರ್ಡ್‌ಬೋರ್ಡ್ ಬಾಕ್ಸ್‌ನಲ್ಲಿ ಇಟ್ಟಿರುತ್ತಾರೆ. ಒಂದು ಕಡತ ಬೇಕಾದರೆ ತಕ್ಷಣ ಆ ನಂಬರಿನ ಫೈಲನ್ನು ಹುಡುಕಿ ಹತ್ತು ನಿಮಿಷಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಯಕ್ರಮವನ್ನು ಅಲ್ಲಿ ಅವರು ಮಾಡಿದ್ದಾರೆ. ಇದೇ ರೀತಿ ನಮ್ಮ ರಾಜ್ಯದ ೨೦ ಆರ್. ಟಿ. ಓ. ಗಳಲ್ಲಿ ಮಾಡತಕ್ಕಂಥ ಕೆಲಸವನ್ನು ಬಹಳ ಚೆನ್ನಾಗಿ ನಮ್ಮ ಇಲಾಖೆಯವರೇ ಮಾಡಿದ್ದಾರೆ. ಜೊತೆಗೆ ಈ ಕೌಂಟರ್ ಸಿಸ್ಟಮ್‌ನಲ್ಲಿ ಏನು ಕೆಲವು ಏಜೆನ್ಸಿಗಳಿಗೆ ಅವರ ಹಾವಳಿ ಅತಿಯಾಗಿದೆಯೆಂದು ಕೆಲವು ಸದಸ್ಯರು ಏನು ಹೇಳಿದ್ದಾರೆ, ಅದನ್ನು ನಾನೂ ಸಹಿತ ಒಪ್ಪುತ್ತೇನೆ ಅವರನ್ನು ಅಷ್ಟು ಸುಲಭವಾಗಿ ಕಂಟ್ರೋಲ್ ನಲ್ಲಿ ಇಟ್ಟುಕೊಳ್ಳುವುದು ಸಾಧ್ಯವಿಲ್ಲ. ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಇದನ್ನು ಅಷ್ಟು ಸುಲಭವಾಗಿ ಮಾಡುವುದಕ್ಕೆ ಆಗುವುದಿಲ್ಲ. ಲೈಸೆನ್ಸ್ ಪಡೆಯಲಿಕ್ಕೆ ಇರಬಹುದು, ಟ್ಯಾಕ್ಸ್ ಕಟ್ಟಲಿಕ್ಕೆ ಇರಬಹುದು ಇತ್ಯಾದಿ ಕೆಲಸಗಳಿಗೆ ಸಾರ್ವಜನಿಕರು ಮೋಟಾರು ವಾಹನ ಇಲಾಖೆಯ ಕಚೇರಿಗೆ ಬಂದಾಗ ಇಷ್ಟೇ ನಿಮಿಷದಲ್ಲಿ, ಇಷ್ಟೇ ದಿವಸದಲ್ಲಿ ಈ ಕೆಲಸ ಮಾಡಬೇಕು ಎಂದು ಬೋರ್ಡ್ ಹಾಕುವುದು ಅಷ್ಟೇ ಅಲ್ಲ, ಇದನ್ನು ಕಾರ್ಯಾಚರಣೆಯಲ್ಲಿ ಮಾಡಲಿಕ್ಕೆ ಕೌಂಟರ್‌ಗಳನ್ನು ಎಲ್ಲಾ ಕಡೆಗಳಲ್ಲಿಯೂ ಸಹಿತ ಮಾಡಿದ್ದೇವೆ. ಕೌಂಟರ್ ಸಿಸ್ಟಮ್ ಬಹಳ ಚೆನ್ನಾಗಿ ಎಲ್ಲಾ ಕಡೆ ಗಳಲ್ಲೂ ಕೆಲಸ ಮಾಡುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಾರುಗಳ ಮೇಲೆ ಸಹ ಲೈಫ್ ಟೈಮ್ ಟ್ಯಾಕ್ಸ್ ವಿಧಿಸುವ ಸಲಹೆ ಮಾಡಿದ್ದಾರೆ. ಇದು ಸರ್ಕಾರದ ಪರಿಶೀಲನೆ ಯಲ್ಲಿದೆ. ದ್ವಿಚಕ್ರವಾಹನಗಳ ಮೇಲೆ ಲೈಫ್ ಟೈಮ್ ಟ್ಯಾಕ್ಸ್ ಇಂಟ್ರಡ್ಯೂಸ್ ಮಾಡಿದ್ದು ಬಹಳ ಯಶಸ್ವಿಯಾಗಿ ಆಗಿದೆ. ಆದ್ದರಿಂದ ಇದರ ಬಗ್ಗೆ ಸಹಿತ ಮಾಡಬೇಕೆಂದು ನಿರ್ಧಾರವನ್ನು ಮಾಡಿ ದ್ದೇವೆ ಎಂದು ಹೇಳುತ್ತೇನೆ. ಇನ್ನು ಅಪಘಾತಗಳನ್ನು ಕಡಿಮೆ ಮಾಡುವ ಬಗ್ಗೆ ಹೇಳಬೇಕೆಂದರೆ ಸಾರಿಗೆ ಸಂಸ್ಥೆಯಲ್ಲಿರತಕ್ಕಂಥ ೧೫-೧೬ ಸಾವಿರ ಚಾಲಕರ ಜೊತೆಗೆ ಸುಮಾರು ಎಂಟು ಲಕ್ಷ ಇತರೆ ಚಾಲಕರು ಇದ್ದಾರೆ ಎಂಬುದು ತಮಗೆ ಗೊತ್ತಿದೆ ಈ ಚಾಲಕರಿಗೆ ಯಾವ ರೀತಿ ತರಬೇತಿ ಕೊಡ ಬೇಕು ಎಂದು ಯೋಚನೆಮಾಡಿ ಪ್ರತಿ ಜಿಲ್ಲೆಯಲ್ಲೂ ಸಹ ರೋಡ್ ಸೇಫ್ಟಿ ಕಮಿಟಿ ಮೂಲಕ ಒಂದು ತಿಂಗಳಿಗೆ, ಒಮ್ಮೆ ಎರಡು ತಿಂಗಳಿಗೊಮ್ಮೆ ಆಟೋ ರಿಕ್ಷಾ, ಕಾರು, ಲಾರಿ ಚಾಲಕರನ್ನು ಮತ್ತು ಇತರ ವಾಹನಗಳ ಚಾಲಕರನ್ನು ಕರೆಸಿ ತಿಳುವಳಿಕೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗಿದೆ. ಮತ್ತು ಅವರಿಗೆ ಶಿಕ್ಷೆಯನ್ನೂ ಸಹ ಸಾಕಷ್ಟು ಸಂದರ್ಭದಲ್ಲಿ ಕೊಡತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿ ಕೊಂಡಿದ್ದೇವೆ. ಮೋಟಾರ್ ವಾಹನ ಇಲಾಖೆ ಬಹಳ ರಚನಾತ್ಮಕವಾಗಿ ಕೆಲಸ ಮಾಡಬೇಕು. ಕಲಿಯುವ ಲೈಸೆನ್ಸ್ ಕೊಡತಕ್ಕಂಥದ್ದು, ಅಥವಾ ಡ್ರೈವಿಂಗ್ ಲೈಸೆನ್ಸ್ ಕೊಡತಕ್ಕಂಥದ್ದು ಅಷ್ಟೇ ಅಲ್ಲ ಇವಕ್ಕಿಂತ ಹೆಚ್ಚಿಗೆ ಇದು ಇನ್ನೂ ರಚನಾತ್ಮಕವಾಗಿ ಕೆಲಸ ಮಾಡಬೇಕು ಎಂದು ಹೇಳಿ. ಅಪಘಾತಗಳ ಸಂಖ್ಯೆ ಕಡಿಮೆಯಾಗಬೇಕು ವಾಹನಗಳಿಂದ ಪರಿಸರ ಮಾಲಿನ್ಯ ಏನು ಆಗುತ್ತಿದೆ ಇದನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿಯಿಂದ ನಮ್ಮ ರಾಜ್ಯದ ಮೋಟಾರ್ ವಾಹನ ಇಲಾಖೆ ವಿಶೇಷವಾಗಿ ಕೆಲಸ ಮಾಡುತ್ತಿದೆ. ಸುಮಾರು ೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಡೀಸಲ್ ವೆಹಿಕಲ್ಸ್‌ನಿಂದ ಬರತಕ್ಕಂಥ ಎಮಿಷನ್ ಪೆಟ್ರೋಲ್ ವೆಹಿಕಲ್ಸ್‌ನಿಂದ ಬರತಕ್ಕಂಥ ಎಮಿಷನ್ ಏನಿದೆ ಅದನ್ನು ತಡೆಗಟ್ಟಲಿಕ್ಕೆ ಬಿಗಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಇದರಿಂದ ತೊಂದರೆ ಯಾಗುತ್ತಿದೆ ಎಂದು ವಾಹನಗಳ ಮಾಲೀಕರಿಗೆ ತಿಳಿಸಬೇಕು.

ಅನೇಕರು ಹೇಳಿದರು, ನಿಮ್ಮ ಬಸ್ಸುಗಳೇ ಸರಿ ಇಲ್ಲ, ಇನ್ನು ಖಾಸಗಿಯವರಿಗೆ ಏಕೆ ರಿಸ್ಟ್ರಿಕ್ಟ್ ಮಾಡುತ್ತೀರಿ ಎಂದು. ಇದು ತಪ್ಪು. ಪ್ರತಿಯೊಂದು ಡಿವಿಜನ್‌ನಲ್ಲೂ ಸಹಿತ ಒಂದೊಂದು ಸ್ಮೋಕ್ ಟೆಸ್ಟಿಂಗ್ ಮೀಟರ್ಸ್‌ನ್ನು ಕೆ. ಎಸ್. ಆರ್. ಟಿ. ಸಿ ನವರು ಇಟ್ಟುಕೊಂಡು ಅವರು ಡಾಕಿಂಗ್ ಮಾಡುತ್ತಾರೆ ಒಂದು ಬಸ್ ೩೦ ಸಾವಿರ ಕಿಲೋಮೀಟರ್ ಹೋದ ಕೂಡಲೇ ಡಾಕಿಂಗ್ ಮಾಡು ತ್ತಾರೆ. ಡಾಕಿಂಗ್ ಸಂದರ್ಭದಲ್ಲಿ ಸ್ಮೋಕ್ ಎಮಿಷನ್ ಸಹಿತ ಚೆಕ್ ಮಾಡುವಂಥ ಸಿಸ್ಟಂ ಇಟ್ಟು

ಕೊಂಡಿದ್ದಾರೆ. ಇದೇ ರೀತಿಯಲ್ಲಿ ಎಲ್ಲಾ ವಾಹನಗಳಿಗೂ ಮಾಡಬೇಕೆಂದು ಹೊರಟು ನಮ್ಮ ಮೋಟಾರು ವಾಹನ ಇಲಾಖೆಯವರು ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಹೇಳಬಯಸುತ್ತೇನೆ. ಒಟ್ಟಿನಲ್ಲಿ ಈ ಇಲಾಖೆಯು ಮಾಡಿರತಕ್ಕ ಒಳ್ಳೆಯ ಕೆಲಸಗಳನ್ನು ಮೆಚ್ಚಿ ಬಹಳಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಅವರಿಗೆ ತುಂಬಾ ಚಿರಋಣಿಯಾಗಿದ್ದೇನೆ. ಮಾನ್ಯ ಸದಸ್ಯರು ಎತ್ತಿರತಕ್ಕ ಬಹುತೇಕ ವಿಷಯಗಳ ಬಗ್ಗೆ ಸಾಕಷ್ಟು ಉತ್ತರವನ್ನು ಸಮಯದ ಅಭಾವದಿಂದ ಕಡಿಮೆ ಸಂದರ್ಭದಲ್ಲಿ ಕೊಟ್ಟಿದ್ದೇನೆ. ಇದಕ್ಕೆ ಸಹಕರಿಸಿದ ಎಲ್ಲಾ ಮಾನ್ಯ ಸದಸ್ಯರಿಗೂ ತುಂಬಾ ಚಿರಋಣಿಯಾಗಿದ್ದೇನೆ, ಮತ್ತು ಮಾನ್ಯ ಸದಸ್ಯರು ನನ್ನ ಇಲಾಖೆಯ ಬೇಡಿಕೆಗಳಿಗೆ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಬಯಸಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಕುಶಾಲ.—ಮಾನ್ಯಅಧ್ಯಕ್ಷರೇ, ಈಗಾಗಲೇ ಸಾರಿಗೆ ಸಚಿವರು ತಮ್ಮ ಇಲಾಖೆಯ ಬೇಡಿಕೆಯನ್ನು ಮಂಡಿಸಿದ್ದಾರೆ. ಆದರೆ ನನ್ನ ಸುಳ್ಯ ತಾಲ್ಲೂಕಿನಲ್ಲಿ ಪುತ್ತೂರು, ಸುಳ್ಯ ಮಾರ್ಗ ಬಿಡುಗಡೆ ಆಗುವಂಥ ಬಸ್ ಏನಿದೆ ಅದಕ್ಕೆ ಮುಂದಿನ ವರ್ಷವಾದರೂ ಕೂಡ ಒಂದು ಬುಕಿಂಗ್ ಕೌಂಟರ್ ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಲವು ಬಾರಿ ತಮ್ಮ ಗಮನಕ್ಕೂ ತಂದಿದ್ದೇನೆ, ಮತ್ತು ಇಲಾಖೆಗೂ ಬರೆದುಕೊಂಡಿದ್ದೇನೆ. ಏಕೆಂದರೆ ಡಿಪೋ ಡಿಪೋಗಳ ಪೈಪೋಟಿಯಿಂದ ಬುಕಿಂಗ್ ಕೌಂಟರ್ ತೆರೆಯುತ್ತಾ ಇಲ್ಲ, ಆದಷ್ಟು ಬೇಗ ಬುಕಿಂಗ್ ಕೌಂಟರ್ ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಡಿಪೋ ಡಿಪೋಗಳಿಗೆ, ಮತ್ತು ಡಿವಿಜನ್ ಡಿವಿಜನ್‌ಗಳಿಗೆ ಸ್ವಲ್ಪ ಕಾಂಪಿಟೇಷನ್ ಇದೆ. ಇದು ಮಾನ್ಯಸದಸ್ಯರಿಗೂ ಗೊತ್ತಿದೆ. ಇನ್ನು ಅವರು ಸ್ಪೆಸಿಫಿಕ್ ಆಗಿ ಒಂದು ರೂಟ್ ಹೇಳುತ್ತಿದ್ದಾರೆ ಅದನ್ನು ಆದಷ್ಟು ಬೇಗ ಶುರು ಮಾಡುವುದಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಕೆ. ಕುಶಾಲ.—೧೯೮೭-೮೩ ರಿಂದ ಬಸ್ ನಿಲ್ದಾಣ ಆಗಿಲ್ಲ, ಯಾವಾಗ ಬಸ್ ನಿಲ್ದಾಣ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯಸದಸ್ಯರಿಗೆ ತಪ್ಪು ಕಲ್ಪನೆ ಇದೆ. ೧೯೮೭ನೇ ಇಸವಿಯಲ್ಲಿಯೇ ಬಸ್ ನಿಲ್ದಾಣ ಸ್ಯಾಂಕ್ಷನ್ ಆಯಿತು ಇನ್ನೂ ಸರಿಯಾದ ಜಾಗ ಸಿಕ್ಕಿಲ್ಲ ಆದರೆ ಅಲ್ಲಿ ಒಳ್ಳೆಯ ಜಾಗ ಸಿಗುತ್ತಿಲ್ಲ. ೨-೩ ಎಕರೆ ಜಾಗ ಕೊಟ್ಟರೆ ಅಲ್ಲಿ ಬಸ್ ನಿಲ್ದಾಣವನ್ನು ಕೊಡಬಹುದು. ಅರ್ಧ ಎಕರೆ ಜಮೀನು ಕೊಟ್ಟು ಬಸ್ ನಿಲ್ದಾಣ ಕೊಡಿ ಎಂದು ಹೇಳಿದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಸುಮಾರು ೧೦-೧೫ ವರ್ಷಗಳಾದರೂ ಇರುವಂಥ, ಹಾಗೂ ಉಪಯೋಗವಾಗುವಂಥ ಬಸ್ ನಿಲ್ದಾಣವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯಸದಸ್ಯರಲ್ಲಿ ನನ್ನ ಕಳಕಳಿಯ ಮನವಿ ಏನೆಂದರೆ, ಅಲ್ಲಿಯ ಸ್ಥಳೀಕರಿಗೆ ಸಮಾಧಾನ ಹೇಳಬೇಕು. ಅವರೇನೂ ನಮಗೆ ಪುಕ್ಕಟೆ ಜಾಗ ಕೊಡಬೇಕಾಗಿಲ್ಲ, ಸಾರಿಗೆ ಸಂಸ್ಥೆಯಿಂದ ಸ್ವಲ್ಪ ಹಣವನ್ನೂ ಕೊಡುತ್ತೇವೆ. ಆದ್ದರಿಂದ ಅಲ್ಲಿ ಬಸ್ ನಿಲ್ದಾಣಕ್ಕೆ ಜಾಗವನ್ನು ಸಹಾಯ ಮಾಡಬೇಕೆಂದೂ ತನ್ಮೂಲಕ ಉಪಕಾರ ಮಾಡಬೇಕೆಂದೂ ಮಾನ್ಯ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಕುಶಾಲ.—ಬೇರೆ ಸ್ಥಳ ತೋರಿಸಿದ್ದೇನೆ, ಸರ್ಕಾರ ಮುತುವರ್ಜಿ ವಹಿಸಿ ಬಸ್ ನಿಲ್ದಾಣ ಮಾಡಿಸಿಕೊಡಬೇಕು

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆದಷ್ಟು ಬೇಗ ಮಾಡಿಸಿಕೊಡುತ್ತೇನೆ.

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಲ್ಲಿ ಬಹಳ ಸಾರಿ ಕೇಳಿದ್ದೇನೆ. ಸಾಲಿಗ್ರಾಮ ಪುರಸಭೆಗೆ ಒಂದು ಬಸ್ಸನ್ನು ಒದಗಿಸಬೇಕೆಂದು, ಆದರೂ ಕೊಡುತ್ತೇವೆಂದು ಹೇಳಿ, ಈ ಬಾರಿಯೂ ಕೊಟ್ಟಿಲ್ಲ. ಇದು ಒಂದು ಉಪ ವಿಭಾಗ ಬರುವುದು ಎಂದು ಏನೋ ಒಂದು ರೀತಿಯಲ್ಲಿ ಹೇಳಿದ್ದಾರೆ. ಆದರೆ ಮೂಡಬಿದ್ರೆ, ಮುಲ್ಕಿ ಇಲ್ಲಿಗೆಲ್ಲಾ ಬಸ್ಸನ್ನು ಕೊಟ್ಟಿದ್ದಾರೆ. ಅದೇರೀತಿ ಇಲ್ಲಿಗೂ ಕೊಡುವ ಸಾಧ್ಯತೆ ಇದೆ ಆದಷ್ಟು ಬೇಗ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಸುವಿಹಾರ ಬಸ್‌ನಿಂದ ನಮಗೆ ಸ್ವಲ್ಪ ನಷ್ಟ ಜಾಸ್ತಿಯಾಗುತ್ತದೆ. ಮತ್ತೆ ಬಸ್ಸನ್ನು ನಡೆಸಬೇಕಾದರೆ ಕೊನೆಯ ಪಕ್ಷ ೩೫ ಜನ ಪ್ರಯಾಣಿಕರು. ಪ್ರಾರಂಭದಿಂದ ಬೇಕಾಗುತ್ತದೆ ಈಗಾಗಲೇ ಕುಂದಾಪುರದಿಂದ ಬೆಂಗಳೂರಿಗೆ ಎರಡು ಬಸ್‌ಗಳನ್ನು ಹಾಕಿದ್ದೇವೆ. ಬೇಕಾದರೆ ಇನ್ನೊಂದು ಬಸ್ಸನ್ನು ಕುಂದಾಪುರದಿಂದ ಬೆಂಗಳೂರಿಗೆ ಹಾಕುತ್ತೇವೆ. ಆದರೆ ಅವರು ಹೇಳುವಂಥ ಸಾಲಿಗ್ರಾಮ ಗ್ರಾಮಕ್ಕೆ ಹಾಕುವುದು ಸ್ವಲ್ಪ ಕಷ್ಟವಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ವಾಹನ ಸಂಚಾರ ದಿನಾಚರಣೆ ಎಂದು ಮಾಡಿ ಪತ್ರಿಕೆಗಳಲ್ಲಿ ವಾಹನ ಚಾಲಕರೇ, ಮದ್ಯಪಾನ ಮಾಡಿ ವಾಹನ ಚಲಿಸಬೇಡಿ ಎಂದು ಜಾಹೀರಾತು ಕೊಡುತ್ತಾರೆ. ಇದಾದಮೇಲೆ ವಾಹನ ದಿನಾಚರಣೆ ದಿವಸ ಟ್ರಾಫಿಕ್ ಟೈಮ್ ಟೇಬಲ್ ಕಾರ್ಡ್ ಎಂದು ಕೊಟ್ಟಿದ್ದಾರೆ. ಈ ಕಾರ್ಡಿನಲ್ಲಿ ಕೆಂಪು ಎಂದರೆ ನಿಲ್ಲು, ಹಳದಿ ಎಂದರೆ ಸಿದ್ಧರಾಗಿರಿ, ಹಸಿರು ಎಂದರೆ ಹೋಗು ಎಂದೂ, ಇದರ ಕೆಳಗಡೆ ಸೋನಾ ಎಕ್ಸ್‌ಪೋರ್ಟ್ ಲ್ಯಾಗರ್ ಬೀರ್, ಬೃಂದಾವನ ಡಿಸ್ಟಿಲರೀಸ್ ಎಂದಿದೆ. ಅಂದರೆ ಮೇಲುಗಡೆ ಇರುವುದನ್ನು ಓದಿಬಿಟ್ಟು, ಕೆಳಗಡೆ ಬರೆದಿರುವುದನ್ನು ನೋಡಿ, ಇದು ಒಳ್ಳೆಯುದಿರಬಹುದು ಎಂದು ಸೇವನೆ ಮಾಡಿ ವಾಹನ ಸಂಚಾರ ಮಾಡಿದರೆ, ಬಣ್ಣ ಏನಾದರೂ ಗೊತ್ತಾಗುತ್ತದೆಯೇ ?

೧–೩೦ ಪಿ. ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಸಾರಿಗೆ ಸಪ್ತಾಹವನ್ನು ಕಳೆದ ವಾರ ಮಾಡಿದಂಥ ಸಂದರ್ಭದಲ್ಲಿ ಪೋಲೀಸ್ ಇಲಾಖೆ, ಪಿ.ಡಬ್ಲ್ಯು.ಡಿ. ಇಲಾಖೆ ಮತ್ತು ಮೋಟಾರ್ ವಾಹನ ಇಲಾಖೆ, ಈ ಮೂರು ಇಲಾಖೆಗಳ ಸಹಕಾರ ಪಡೆದು ಮಾಡಿದ್ದೇವೆ. ಸಾರಿಗೆ ಸಪ್ತಾಹವನ್ನು ಮಾಡುವಾಗ ಸುಮಾರು ಲಕ್ಷಾಂತರ ಪಾಂಪ್ಲೆಟ್‌ಗಳನ್ನು, ಲಕ್ಷಾಂತರ ಬ್ರೋಷರ್‌ಗಳನ್ನು ತಯಾರು ಮಾಡಿಸುವಾಗ, ಮೈಸೂರಿನ ಅಧಿಕಾರಿಗಳು ಈ ಕಂಪೆನಿಯವರನ್ನು ಕೇಳಿದ್ದಾರೆ ಎಂದು ಕಾಣುತ್ತದೆ. ಆಗ ಅವರು ಇದನ್ನು ಈ ರೀತಿ ಮಾಡಿಸಿಕೊಟ್ಟಿರಬಹುದು. ಆದರೆ ಅದರ ಅರ್ಥ ಕುಡಿಯಬೇಕೆಂದು ಅಲ್ಲ.

ಶ್ರೀಮತಿ ಮುಕ್ತಾರುನ್ನೀಸಾ.—ಮಾನ್ಯ ಅಧ್ಯಕ್ಷರೇ, ಈ ವರದಿಯ ೧೮ನೇ ಪೇಜ್‌ನಲ್ಲಿ ಲಂಪ್ ಸಂ ಟ್ಯಾಕ್ಸ್ ಪೇಮೆಂಟ್ ಬಗ್ಗೆ ಹೇಳಿದ್ದಾರೆ. ಹತ್ತು ವರ್ಷದ ಟ್ಯಾಕ್ಸನ್ನು ಯಾರು ಒಂದೇ ಸಲ ಕೊಡುತ್ತಾರೆ ಅವರಿಗೆ ೧೦ ಪರ್ಸೆಂಟ್ ರಿಬೇಟ್, ೫ ವರ್ಷದ ಟ್ಯಾಕ್ಸ್ ಯಾರು ಒಂದೇ ಸಲ ಕೊಡುತ್ತಾರೆ ಅವರಿಗೆ ೫ ಪರ್ಸೆಂಟ್ ರಿಬೇಟ್ ಕೊಡುತ್ತೇವೆ ಎಂಬ ಬೆನಿಫಿಟ್ ಇದೆ. ಇದಕ್ಕೆ ಏನೂ ಪಬ್ಲಿಸಿಟಿ ಕೊಟ್ಟಿಲ್ಲ. ಇದು ಹೊಸ ಪ್ರೋಗ್ರಾಂ ಎಂದು ಕಾಣುತ್ತದೆ. ೧೯೮೭–೮೮ನೇ ಸಾಲಿನಲ್ಲಿ ಎಷ್ಟು ಜನ ಇದರ ಬೆನಿಫಿಟ್ ತೆಗೆದು ಕೊಂಡಿದ್ದಾರೆ ಎಂದು ಕೇಳುತ್ತೇನೆ. ಇದು ಮೊದಲನೆಯದು. ಇನ್ನು ಎರಡನೆಯದು ಎಂದರೆ ಡಿಪೋ ಮ್ಯಾನೇಜರ್ಸ್ ಪ್ರಮೋಷನ್ ಬಗ್ಗೆ ಹೇಳುವುದಾದರೆ They have violated it. According to C & R Rules, 1968 of K S R T C, Depot Manager's post is purely a promotional post. They had represented many times for the recti-fication. But, you have not taken any step. Lastly, they had appealed in the Hon. High Court. I would like to ask, when the candidates were available in your own department why you have taken other candidates and send them to Poona for 3 months' training. Is it not an additional expenditure for you ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ವಾಹನ ತೆರಿಗೆಯನ್ನು ಲೈಫ್ ಟೈಮ್ ಎಕ್ಸೆಂಪ್ಷನ್ ಮಾಡಿದ ಸಂದರ್ಭದಲ್ಲಿ ಕೊಟ್ಟಿರತಕ್ಕಂಥ ಕನ್‌ಸೆಷನ್ ಬಗ್ಗೆ ಸಾಕಷ್ಟು ಪಬ್ಲಿಸಿಟಿ ಇಲ್ಲ ಎಂಬ ಮಾತನ್ನು ಹೇಳಿದ್ದಾರೆ. ಈಗಾಗಲೇ ಬಹುತೇಕ ವಾಹನಗಳ ಮಾಲೀಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಟೂವೀಲರ್ಸ್ ಮೇಲೆ ಏನು ತೆರಿಗೆ ಹಾಕಿದ್ದೇವೆ ಅದಕ್ಕೆ ಎಕ್ಸೆಪ್ಷನ್ ಕೊಟ್ಟಿದ್ದೇವೆ. ಇನ್ನು ಎರಡು ಕೋಟಿ ರೂಪಾಯಿ ಮಾತ್ರ ಬಾಕಿ ಉಳಿದಿದೆ ಇದನ್ನು ವಸೂಲು ಮಾಡಲು ಸ್ಪೆಷಲ್ ಡ್ರೈವ್ ತೆಗೆದುಕೊಂಡು ವಸೂಲು ಮಾಡುತ್ತೇವೆ ಎಂದು ಹೇಳುತ್ತೇನೆ. ಇನ್ನೊಂದು ಸಲ ಬೇಕಾದರೆ ಪತ್ರಿಕೆಗಳ ಮೂಲಕ ಪಬ್ಲಿಸಿಟಿ ಕೊಡಿಸುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಡಿಪೋ ಮ್ಯಾನೇಜರ್ಸ್‌ಗೆ ಪ್ರಮೋಷನ್ ಕೊಡುವುದನ್ನು ತಡೆಹಿಡಿದು ಅಸಿಸ್ಟೆಂಟ್ ಮೆಕ್ಯಾನಿಕಲ್ ಎಂಜಿನಿಯರ್ಸ್‌ನ್ನು ರೆಕ್ರೂಟ್ ಮಾಡಿಕೊಂಡು ಅವರಿಗೆ ಪ್ರಮೋಷನ್ ಕೊಡುವುದಕ್ಕೆ ಅಡ್ಡ ಬಂದಿದ್ದೀರಿ ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ಸದಸ್ಯೆಯರಿಗೆ ಸಂಪೂರ್ಣವಾದ ಮಾಹಿತಿ ಸಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಆಗಲೇ ಹೇಳಿದ ಹಾಗೆ ಸಾರಿಗೆ ಸಂಸ್ಥೆಯಲ್ಲಿ ಇನ್ನೂ

ಬಹಳಷ್ಟು ಎಂಜಿನಿಯರ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವುದು ಇದೆ. ಡಿಪೋಮ್ಯಾನೇಜರ್ಸ್‌ಗೆ ಪ್ರಮೋಷನ್ ಕೊಡುವುದಕ್ಕೂ ಇವರನ್ನು ರೆಕ್ರೂಟ್‌ಮೆಂಟ್ ಮಾಡಿಕೊಂಡಿರುವುದಕ್ಕೂ ಯಾವ ಸಂಬಂಧವೂ ಇಲ್ಲ. ಅವರಿಗೆ ನ್ಯಾಯ ಬದ್ಧವಾಗಿ ಸಿಗಬೇಕಾಗಿರತಕ್ಕಂಥ ಪ್ರಮೋಷನ್ ಏನಿದೆ, ಅದು ಬರೀ ಎ.ಎಂ.ಇ. ಅಲ್ಲ, ಸಾಮಾನ್ಯವಾದ ಒಬ್ಬ ಕಂಡಕ್ಟರ್‌ನಿಂದ ಹಿಡಿದು, ಅತ್ಯುನ್ನತ ಅಧಿಕಾರಿಯ ವರೆಗೆ ಎಲ್ಲರಿಗೂ ಸಹಿತ ನ್ಯಾಯಬದ್ಧವಾಗಿ ಪ್ರಮೋಷನ್ ಕೊಡಿಸುತ್ತೇನೆ ಎಂಬ ಆಶ್ವಾಸನೆಯನ್ನು ಮಾನ್ಯ ಸದಸ್ಯೆಯರಿಗೆ ಕೊಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಅಧ್ಯಕ್ಷರೇ, ಚಳ್ಳಕೆರೆಯಲ್ಲಿ ಬಸ್ ಸ್ಟ್ಯಾಂಡ್ ಇದ್ದರೂ ಕೂಡಾ, ಬಳ್ಳಾರಿ, ಬೀದರ್, ಗುಲಬರ್ಗ್ ಕಡೆಯಿಂದ ಬರತಕ್ಕಂಥ ಬಸ್‌ಗಳು ಬಸ್‌ಸ್ಟ್ಯಾಂಡ್‌ಗೆ ಹೋಗದೇ ನೇರವಾಗಿ ಬೆಂಗಳೂರು ರಸ್ತೆಯಲ್ಲಿ ಬಂದುಬಿಡುತ್ತವೆ. ನಾನೇ ಒಂದು ಸಲ ಬಸ್‌ಗಾಗಿ ಬಸ್‌ಸ್ಟ್ಯಾಂಡ್‌ನಲ್ಲಿ ಕಾಯುತ್ತಾ ಇದ್ದೆ, ಬಸ್ ಬರಲೇ ಇಲ್ಲ. ನೇರವಾಗಿ ಬಂದು ಬಿಟ್ಟಿತು. ಇದರ ಬಗ್ಗೆ ನಾನು ಹಿಂದೆ ಸಾರಿಗೆ ಮಂತ್ರಿಗಳಾಗಿದ್ದ ವೀರಣ್ಣನವರಿಗೆ ತಿಳಿಸಿದ್ದೆ. ಆದರೆ ಅದು ಇನ್ನೂ ಕಾರ್ಯ ರೂಪಕ್ಕೆ ಬಂದಿಲ್ಲ. ಎಲ್ಲಾ ಬಸ್‌ಗಳೂ ಬಸ್‌ಸ್ಟ್ಯಾಂಡ್‌ಗೆ ಬಂದು ಹೋಗುವ ವ್ಯವಸ್ಥೆ ಚಳ್ಳಕೆರೆಯಲ್ಲಿ ಆಗಬೇಕು.

ಇನ್ನು ಬಸ್‌ನಲ್ಲಿ ಪ್ರಯಾಣ ಮಾಡಿತಕ್ಕಂಥ ಪ್ರಯಾಣಿಕರ ಜೊತೆಗೆ ಸೌಜನ್ಯದಿಂದ ವರ್ತಿಸುವ ಪ್ರವೃತ್ತಿ ಕಂಡಕ್ಟರ್‌ಗಳಿಗೆ ಬರಬೇಕು. ಏತಕ್ಕೆ ಈ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ ಎಂದರೆ, ನಾನು ಚಳ್ಳಕೆರೆಯಿಂದ ಬೆಂಗಳೂರಿಗೆ ಬರುವಂತಹ ಸಂದರ್ಭದಲ್ಲಿ ನಾನು ಹೊಸಪೇಟೆ-ಬೆಂಗಳೂರು ಬಸ್‌ನ್ನು ಹತ್ತಿಕೊಂಡೆ. ನನ್ನ ಹತ್ತಿರ ಪಾಸ್ ಇದೆ ನಾನು ಎಂ.ಎಲ್ ಎ.. ಎಂ.ಎಲ್.ಎ. ಪಾಸ್‌ನಲ್ಲಿ ಇಬ್ಬರು ಹೋಗಬಹುದು ಎಂದು ಹೇಳಿದೆ. ನನ್ನ ಜೊತೆ ನನ್ನ ಸ್ನೇಹಿತರೊಬ್ಬರು ಇದ್ದರು. ಕಂಡಕ್ಟರ್ ಪಾಸ್ ಕೊಡಿ ಎಂದು ಕೇಳಿದ ಪಾಸ್ ಕೊಟ್ಟೆ. ಆಮೇಲೆ ನನ್ನ ಸ್ನೇಹಿತರ ಹತ್ತಿರ ಬಸ್ ಚಾರ್ಜ್ ಕೇಳಿದ, ನಾನು ಎಂ.ಎಲ್,ಎ. ನನ್ನ ಪಾಸ್‌ನಲ್ಲಿ ಇಬ್ಬರು ಹೋಗಬಹುದು ಅವರ ಹತ್ತಿರ ಬಸ್‌ಚಾರ್ಜ್ ಕೇಳಬಾರದು ಎಂದು ಹೇಳಿದೆ. ಆದರೂ ಸಹಿತ ಆ ಕಂಡಕ್ಟರ್ ನಮಗೆ ಅದೆಲ್ಲಾ ಹೇಳಿಲ್ಲ ನಮಗೆ ಹೇಳಿದ್ದರೆ ನಾವು ಬಿಡುತ್ತಿದ್ದೆವು, ಈಗ ಬಿಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ. ಆಗ ನಾನು ಏದಪ್ಪ ನೀನು ಕಂಡಕ್ಟರ್ ಆಗುವುದಕ್ಕಿಂತ ಮುಂಚೆ ಎಲ್ಲಾ ನಿಯಮಾವಳಿಗಳನ್ನು ತಿಳಿದು ಕಂಡಕ್ಟರ್ ಆಗಿದ್ದೀಯಾ ಹೇಗೆ ಎಂದು ಕೇಳಿದೆ. ಅದಕ್ಕೆ ಅವನು ಯಾರೂ ನಮಗೆ ಹೇಳಿಲ್ಲ, ಅದನ್ನು ಯಾರೂ ಹೇಳಿಕೊಟ್ಟಿಲ್ಲ ಎಂಬ ಪ್ರವೃತ್ತಿಯನ್ನು ತೋರಿಸಿದ. ಇದೇ ಪ್ರವೃತ್ತಿ ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿದ್ದರೆ ನಿಜವಾಗಲೂ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ, ಇಂತಹ ಪ್ರವೃತ್ತಿಗಳು ಅವರಲ್ಲಿದ್ದರೆ ಇದನ್ನು ತಿದ್ದಬೇಕು ಇದು ಸರಕಾರಕ್ಕೂ ಗೌರವ ತರುವುದಿಲ್ಲ, ನಿಮಗೂ ಗೌರವ ತರುವುದಿಲ್ಲ ಆದುದರಿಂದ ಇಂತಹ ಕಂಡಕ್ಟರ್‌ಗಳಿಗೆ ಬುದ್ಧಿ ಹೇಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಭಿನ್ನವಿಸಿ ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ರಾಷ್ಟ್ರ ಮತ್ತು ರಾಜ್ಯ ಹೆದ್ದಾರಿಗಳಲ್ಲಿರತಕ್ಕಂಥ ಅನೇಕ ಬಸ್ ನಿಲ್ದಾಣಗಳಿಗೆ ವೇಗದೂತ ಬಸ್ಸುಗಳು ಎಕ್ಸ್‌ಪ್ರೆಸ್ ಬಸ್ಸುಗಳು ಹೋಗದೆ ಬರತಕ್ಕಂಥದ್ದು ನನ್ನ ಗಮನಕ್ಕೂ ಸಹ ಬಂದಿದೆ ಅದು ಚಳ್ಳಕೆರೆ ಆಗಬಹುದು, ಮದ್ದೂರು ಆಗ ಬಹುದು ಅನೇಕ ಕಡೆ ಬಸ್ಸುಗಳು ಹೋಗದೆ ಬರುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ಇಂತಹ ಕಡೆಗಳಲ್ಲಿ ಒಬ್ಬ ಟ್ರಾಫಿಕ್ ಕಂಟ್ರೋಲರ್‌ನ್ನು ಹಾಕಿ ಬಸ್ಸುಗಳು ಬಸ್ಸ್ ಸ್ಟ್ಯಾಂಡಿಗೆ ಬಂದು ಹೋಗುವಂತೆ ಮಾಡುತ್ತೇನೆ ಮತ್ತು ಈ ವಿಚಾರವನ್ನು ಮಾನ್ಯ ಸದಸ್ಯರು ನನಗೆ ತಿಳಿಸಿಲ್ಲ, ತಿಳಿಸಿದ್ದರೆ ನಾನು ಸರಿಯಾದ ಕ್ರಮ ತೆಗೆದುಕೊಳ್ಳುತ್ತಿದೆ. ಜೊತೆಗೆ ಮಾನ್ಯ ಸದಸ್ಯರಿಗೆ ಒಬ್ಬ ಕಂಡಕ್ಟರ್‌ನಿಂದ ಆಗಿರುವಂತಹ ಅವಮಾನವನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಅನೇಕ ಜನ ಮಾನ್ಯ ಸದಸ್ಯರಿಗೆ ಈ ರೀತಿಯ ಅನುಭವವಾಗಿದೆ. ಒಂದು ಹಿರಿಯ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ತರಹದ ಜನರೂ ಇರುತ್ತಾರೆ.ಆದರೂ ಅವರು ಸೌಜನ್ಯದಿಂದ ನಡೆದುಕೊಳ್ಳಲು ಶಿಸ್ತಿನ ಮೂಲಕ ಮತ್ತು ತರಬೇತಿಯ ಮೂಲಕ ಪ್ರಯತ್ನ ಮಾಡುತ್ತಿದ್ದೇವೆ ಮತ್ತು ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಬಸ್ಸ್‌ನಂಬರು ಮತ್ತು ಸಮಯ ನನಗೆ ಕೊಟ್ಟರೆ ನಾನು ಖಂಡಿತವಾಗಿ ಅವನ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಬಹಳ ಉತ್ತಮವಾಗಿ ಮಾತನಾಡಿದ್ದಾರೆ ಅವರಲ್ಲಿ ನಾನೊಂದು ಮಾತನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ ಬೆಳಗಾಂ ಡಿವಿಜನ್‌ನಲ್ಲಿ ಬಸ್ಸುಗಳು ಏನು ಇವೆ, ಅಲ್ಲಿಂದ ಬರತಕ್ಕಂಥ ಉತ್ಪತ್ತಿ ಹೆಚ್ಚು ಇದೆ. ಬೆಂಗಳೂರು ಮತ್ತು ಹಳೆಯ ಮೈಸೂರು ಡಿಪೋಗಳಿಗಿಂತ ಹೆಚ್ಚು ಉತ್ಪತ್ತಿ ಬೆಳಗಾಂ ಡಿಪೋನಿಂದ ಬರುತ್ತಿದೆ ಆದರೂ ಸಹ ಹೊಸದಾಗಿ ಖರೀದಿ ಮಾಡತಕ್ಕಂಥ ಬಸ್ಸುಗಳನ್ನು ಈ ಡಿಪೋಗಳಿಗೆ ಕೊಡುವುದು ಬಹಳ ಕಡಿಮೆ ಇಲ್ಲಿಗೆ ಹೆಚ್ಚು ಬಸ್ಸುಗಳನ್ನು ಕೊಟ್ಟು ಆಗಿರುವ ತಾರತಮ್ಯವನ್ನು ನಿವಾರಣೆ ಮಾಡುತ್ತೀರಾ ? ಇಲ್ಲದಿದ್ದರೆ ಆ ಭಾಗದ ಜನರ ಮನಸ್ಸಿಗೆ ನೋವುಂಟಾಗುತ್ತದೆ. ಹೋದ ವರ್ಷ ತಾವು ಬರೀ ೭೫ ಬಸ್ಸುಗಳನ್ನು ಮಾತ್ರ ಕೊಟ್ಟಿದ್ದೀರಿ ಆದರೆ ಹಳೆಯ ಮೈಸೂರು ಭಾಗಕ್ಕೆ ಹೆಚ್ಚು ಬಸ್ಸುಗಳನ್ನು ಕೊಟ್ಟಿದ್ದೀರಿ. ಇನ್ನು ಎರಡನೆಯದಾಗಿ ಚಾಲಕರು ಮದ್ಯಪಾನ ಮಾಡುವ ವಿಚಾರದಲ್ಲಿ ಅನೇಕ ಜನ ಮಾನ್ಯ ಸದಸ್ಯರು ಅವರವರ ಮಾತಿನಲ್ಲಿ ಹೇಳಿದ್ದಾರೆ ಆದ್ದರಿಂದ ನಾನು ತಮ್ಮನ್ನು ಈಗ ಕೇಳುವುದೇನೆಂದರೆ ಕಂಡಕ್ಟರ್ ಅಥವಾ ಡ್ರೈವರ್‌ಗಳು ಕುಡಿದಿದ್ದರೆ ಅಂತಹವರ ಲೈಸೆನ್ಸ್‌ನ್ನು ರದು ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲೆ ಅಷ್ಟೇ ಅಲ್ಲ. ಧಾರವಾಡ ಬಿಜಾಪುರ, ಹುಬ್ಬಳ್ಳಿ ಇಂತಹ ಕಡೆಯಿಂದ ಕೂಡ ಉತ್ಪತ್ತಿ ಹೆಚ್ಚು ಬರುತ್ತಿದೆ. ಇದು ಸತ್ಯವಾದ ಸರಿಯಾದ ಮಾತು. ಆ ಭಾಗದ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಮಾಡಿಕೊಡುವುದು

ನಮ್ಮ ಕರ್ತವ್ಯ. ಅಲ್ಲಿಗೆ ಹೊಸ ಬಸ್ಸುಗಳು ಅಷ್ಟೇ ಅಲ್ಲ ಬಸ್ಸು ನಿಲ್ದಾಣಗಳನ್ನು ಮಾಡತಕ್ಕಂಥದ್ದು ಅವಶ್ಯಕ ಇದೆ. ಆದರೆ ಅವರು ರಾಜಧಾನಿಗೆ ಬಹಳ ದೂರದಲ್ಲಿರುವುದರಿಂದ ಅವರ ಸೌಕರ್ಯಗಳನ್ನು ಪೂರೈಸುವುದಕ್ಕೆ ಆಗಿಲ್ಲ. ಈ ವರ್ಷ ನಾವು ಸುಮಾರು ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಖರ್ಚು ಮಾಡಿ ಹುಬ್ಬಳ್ಳಿಯಲ್ಲಿ ಒಂದು ಹೊಸ ಬಸ್ಸು ನಿಲ್ದಾಣ ಕಟ್ಟಬೇಕೆಂದು ಇದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಶಂಕುಸ್ಥಾಪನೆ ಮಾಡಿ ಬಂದಿದ್ದಾರೆ ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಸುಮಾರು ೩-೪ ವಿಚಾರಗಳ ಬಗ್ಗೆ ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಮುಂಬೈ ಕರ್ನಾಟಕದಲ್ಲಿ ಮತ್ತು ಹೈದ್ರಾಬಾದ್ ಕರ್ನಾಟಕದಲ್ಲಿ ಹಾಸನದಲ್ಲಿ ಇಂಥ ಎಂಟು ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಆಗಿದ್ದು ಅಲ್ಲಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಅವರ ಸೌಕರ್ಯಗಳನ್ನು ಪೂರೈಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ. ಜೊತೆಗೆ ಕುಡಿದು ವಾಹನಚಾಲನೆ ಮಾಡತಕ್ಕಂಥ ಜನರ ಲೈಸೆನ್ಸ್ ರದ್ದು ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಈಗಾಗಲೇ ಆ ಬಗ್ಗೆ ಕಾನೂನು ಇದೆ. ಆದರೆ ಅಂತಹ ವಾಹನ ಕುಡಿದು ವಾಹನ ಚಾಲನೆ ಮಾಡುತ್ತಿದ್ದರೆಂದು ಪ್ರೂವ್ ಮಾಡುವುದು ಕಷ್ಟವಾಗುತ್ತದೆ ಒಂದು ವೇಳೆ ಪ್ರೂವ್ ಆದರೆ ಅಂತಹವರ ಲೈಸೆನ್ಸ್ ರದ್ದು ಮಾಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಚಿತ್ರಕಲಾ ವಿದ್ಯಾರ್ಥಿಗಳಿಗೆ ಪಾಸುಗಳನ್ನು ಕೊಟ್ಟಿದ್ದೇವೆಂದು ಹೇಳಿದರು, ಆ ಬಗ್ಗೆ ಆರ್ಡರ್ ಏನಾದರೂ ಮಾಡಿದ್ದೀರಾ ಹೇಗೆ ? ಮತ್ತು ಪಾಸುಗಳನ್ನು ಈಗಾಗಲೇ ಕೊಡಲು ಪ್ರಾರಂಭ ಮಾಡಿದ್ದೀರಾ ಹೇಗೆ ? ಮತ್ತು ಧಾರವಾಡದಲ್ಲಿ ಒಂದು ಹಳೆಯ ಬಸ್ಸು ಸ್ಟ್ಯಾಂಡ್ ಇದ್ದು ಅಲ್ಲಿ ಪಕ್ಕದ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಜಾಗವನ್ನು ಕೊಂಡುಕೊಂಡು ಬಸ್ಸು ನಿಲ್ದಾಣವನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಿದ್ದರು ಆ ಬಗ್ಗೆ ತೀವ್ರವಾದ ಕೆಲಸ ನಡೆಯಬೇಕು. ಮತ್ತು ಮಿನಿ ಬಸ್ಸುಗಳಲ್ಲಿ ಅಂದರೆ ೧೨ ಮತ್ತು ೨೬ ಸೀಟುಗಳು ಉಳ್ಳ ಚಿಕ್ಕ ಬಸ್ಸುಗಳು ಇದ್ದರೆ ಜನರಿಗೆ ಅವರು ಬೇಕಾದ ಕಡೆ ಹೋಗುವುದಕ್ಕೆ ಅನುಕೂಲವಾಗುತ್ತಿತ್ತು. ಆ ಬಸ್ಸುಗಳನ್ನು ತಾವೀಗ ರದ್ದು ಮಾಡಿರುವುದರಿಂದ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಮಿನಿ ಬಸ್ಸುಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಬಸ್ಸುಗಳಿಂದ ಏನು ಲಗೇಜ್ ಹಾಕುತ್ತಾರೋ ಅದರಿಂದ ಸರಿಯಾದ ಆದಾಯ ಸಂಸ್ಥೆಗೆ ಬರುತ್ತಿಲ್ಲ. ಈ ವಿಷಯನಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರೀ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮೊದಲನೆಯದಾಗಿ, ಧಾರವಾಡದ ಬಸ್ ಸ್ಟ್ಯಾಂಡ್‌ನ್ನು ನವೀಕರಣಗೊಳಿಸುವ ಬಗ್ಗೆ ಬಹಳ ದಿವಸಗಳಿಂದ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಆ ಬಸ್ ಸ್ಟ್ಯಾಂಡ್ ಜಾಗದಲ್ಲಿ ಪೋಲೀಸ್ ಇಲಾಖೆಗೆ ಸೇರಿದ ಜಾಗ ಇದೆ. ಆ ಇಲಾಖೆಯವರೊಡನೆ ನಾನು

ಸಂಪರ್ಕ ಮಾಡಿ ಆ ಜಾಗವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅವರು ಈ ಜಾಗವನ್ನು ಕೊಟ್ಟರೆ ಬಸ್ ಸ್ಟ್ಯಾಂಡ್‌ನ್ನು ವಿಸ್ತರಣೆ ಮಾಡಬಹುದು. ಅದಕ್ಕಾಗಿ ಎಲ್ಲಾ ಪ್ರಯತ್ನವನ್ನೂ ಮಾಡಲಾಗುತ್ತಿದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಮುಖ್ಯ ಮಂತ್ರಿಯವರು ಇಲ್ಲೇ ಇದ್ದಾರೆ. ಆ ಜಾಗವನ್ನು ಪಡೆಯುವುದಕ್ಕೆ ಮುಖ್ಯ ಮಂತ್ರಿಗಳು ಸೂಚನೆ ಕೊಡಬೇಕು.

ಶ್ರೀ ಪಿ ಜಿ.ಆರ್. ಸಿಂಧ್ಯ.—ನಾನು ಮುಖ್ಯ ಮಂತ್ರಿಯವರ ಜೊತೆ ಇದರ ಬಗ್ಗೆ ಪ್ರಸ್ತಾಪ ಮಾಡಿ ಬಸ್ ಸ್ಟ್ಯಾಂಡ್ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಆಮೇಲೆ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಬಸ್‌ಗಳಲ್ಲಿ ಹಾಕುವ ಲಗೇಜ್‌ನಲ್ಲಿ ಸಾಕಷ್ಟು ಸೋರಿಕೆಯಾಗುತ್ತಿದೆಯೆಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ಸೋರಿಕೆ ಇರುವುದು ನಿಜ ಅದೂ ಅಲ್ಲದೆ ಲಗೇಜ್‌ನ್ನು ಕಡಿಮೆ ಚಾರ್ಜ್‌ನಲ್ಲಿ ಸಾಗಾಣಿಕೆ ಮಾಡಲಾಗುತ್ತಿದೆ ಲಗೇಜ್‌ಗಳನ್ನು ಪಾರ್ಸೆಲ್ ಸಿಸ್ಟಮ್ ಮೂಲಕ ಸಾಗಾಣಿಕೆ ಮಾಡುವುದರಿಂದ ಸ್ವಲ್ಪ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ಚಿತ್ರಕಲಾ ಪರಿಷತ್ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಕೊಡುವ ಬಗ್ಗೆ ಹೇಳಿದ್ದಾರೆ. ವಿದ್ಯಾರ್ಥಿಗಳಿಗೆ ಬಸ್ ಪಾಸ್‌ಗೋಸ್ಕರ ನಮ್ಮ ಸಂಸ್ಥೆಯು ಹಣವನ್ನು ವಿನಿಯೋಗ ಮಾಡಲಾಗುತ್ತಿದೆ. ಸುಮಾರು ೨೦ ರಿಂದ ೨೫ ಕೋಟಿ ರೂಪಾಯಿಯಷ್ಟು ರಿಯಾಯಿತಿಯನ್ನು ವಿದ್ಯಾರ್ಥಿಗಳಿಗೋಸ್ಕರ ಖರ್ಚು ಮಾಡುತ್ತಿದ್ದೇವೆ. ಚಿತ್ರಕಲಾ ಪರಿಷತ್ ವಿದ್ಯಾರ್ಥಿಗಳು ಸ್ಟೈಫೆಂಡ್ ಪಡೆಯುವುದರಿಂದ ಅವರುಗಳಿಗೆ ಬಸ್ ಪಾಸ್ ಕೊಡುವುದಕ್ಕೆ ಆಗುವುದಿಲ್ಲ. ಸ್ಟೈಪೆಂಡ್ ಪಡೆಯದೇ ಇರುವ ವಿದ್ಯಾರ್ಥಿಗಳಿಗೆ ಬಸ್ ಪಾಸ್‌ನ್ನು ಕೊಡಬಹುದು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್ —ಚಿತ್ರ ಕಲೆಯನ್ನು ಕಲಿಯತಕ್ಕ ವಿದ್ಯಾರ್ಥಿಗಳಲ್ಲಿ ಬಡ ವಿದ್ಯಾರ್ಥಿಗಳೇ ಹೆಚ್ಚು ಮಂದಿ ಇರುತ್ತಾರೆ. ಆದ್ದರಿಂದ, ಅವರುಗಳಿಗೆ ಬಸ್ ಪಾಸ್ ಕೊಡತಕ್ಕ ವಿಚಾರವನ್ನು ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ತಮ್ಮ ಸಲಹೆಯನ್ನು ನಾನು ಒಪ್ಪಿದ್ದೇನೆ.

ಅಧ್ಯಕ್ಷರು.—ಬೆಲ್ಲದ್‌ರವರೇ ನಿಮ್ಮ ಸಲಹೆಯನ್ನು ಮಂತ್ರಿಗಳು ಒಪ್ಪಿದ್ದಾರೆ.

† ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ಶಾಸಕರುಗಳು ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣ ಮಾಡುವುದಕ್ಕೆ ಬಸ್ ಪಾಸ್‌ನ್ನು ಕೊಡಲಾಗುತ್ತದೆ. ಪಾಸ್‌ನ್ನು ಪಡೆದ ಶಾಸಕರುಗಳು ರಾಜ್ಯದ ಯಾವುದೇ ಜಾಗಕ್ಕೂ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣ ಮಾಡಬಹುದು. ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ನಾವು ಪ್ರಯಾಣ ಮಾಡುವಾಗ ನಾವು ಯಾವುದಾದರೂ ಒಂದೂ ಜಾಗದಲ್ಲಿ ಇಳಿಯಬೇಕಾಗಿದ್ದರೆ ಆ ಜಾಗದಲ್ಲಿ ಅವರು ಬಸ್‌ನ್ನು ನಿಲ್ಲಿಸುವುದಿಲ್ಲ. ಉದಾಹರಣೆಗೆ ತಿಪಟೂರಿನಲ್ಲಿ ನಾವು ಬಸ್ ಹತ್ತಿ ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಇಳಿಯಬೇಕೆಂದರೆ ಬಸ್ ನಿಲ್ಲಿಸುವುದಿಲ್ಲವೆಂದು ಹೇಳುತ್ತಾರೆ. ನಾವು ಶಾಸಕರಾಗಿರುವುದರಿಂದ ಅಗತ್ಯ ಕೆಲಸಗಳಿಗೆ ಕೆಲವು ಕಡೆ ಇಳಿಯಬೇಕಾಗುತ್ತದೆ. ಆದ್ದರಿಂದ, ಶಾಸಕರುಗಳು ಇಳಿಯಬೇಕಾದ ಜಾಗದಲ್ಲಿ ಎಕ್ಸ್‌ಪ್ರೆಸ್ ಬಸ್‌ಗಳನ್ನು ನಿಲ್ಲಿಸುವುದಕ್ಕೆ ಎಲ್ಲಾ ಕಂಡಕ್ಟರುಗಳಿಗೆ ತಾವು ತಿಳಿಹೇಳಬೇಕು. ನಾವು ಎಂ.ಎಲ್.ಎ.ಗಳಪ್ಪ, ಆದ್ದರಿಂದ ನಾವು ಹೇಳಿದ ಕಡೆ ನೀವು ಬಸ್ ನಿಲ್ಲಿಸಬೇಕೆಂದು ಹೇಳಿದರೆ ನೀವು ಎಂ.ಎಲ್.ಎ. ಆದರೆ ನಮಗೇನು ಎಂದು ಎಲ್ಲಾ ಜನಗಳ ಮುಂದೆ ಹೇಳಿ ಅವಮಾನ ಮಾಡಿಬಿಡುತ್ತಾರೆ ತಾವು ಎಲ್ಲಾ ಕಂಡಕ್ಟರುಗಳಿಗೆ ಇದರ ಬಗ್ಗೆ ತಿಳಿಳುವಳಿಕೆ ಕೊಡಬೇಕು. ಆಮೇಲೆ, ಕಂಡಕ್ಟರುಗಳು ಮತ್ತು ಡ್ರೈವರುಗಳು ಲಾಂಗ್ ರೂಟ್‌ನಲ್ಲಿ ಬರುವಾಗ ತಮಗೆ ಪರಿಚಯ ಇರುವ ಹೋಟೆಲ್‌ಗಳ ಮುಂದೆ ನಿಲ್ಲಿಸುತ್ತಾರೆ. ಆ ಹೋಟೆಲ್‌ನಲ್ಲಿ ತಿಂಡಿ ಚೆನ್ನಾಗಿಲ್ಲದಿದ್ದರೂ ಪ್ರಯಾಣಿಕರೂ ತಿನ್ನಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಆ ಹೋಟೆಲ್‌ನವರು ಇಂಥ ಡ್ರೈವರುಗಳಿಗೆ ಮತ್ತು ಕಂಡಕ್ಟರುಗಳಿಗೆ ಉಚಿತ ತಿಂಡಿ ಕೊಡಬಹುದು ಅಥವಾ ೫ ರೂಪಾಯಿ ಕೊಡಬಹುದು. ಈ ರೀತಿ ಮಾಡುವುದನ್ನು ನಾನು ಅನೇಕಸಲ ನೋಡಿದ್ದೇನೆ. ತಾವು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಬಸ್ ಸ್ಟ್ಯಾಂಡ್‌ನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಒಪ್ಪಿಕೊಂಡಿದ್ದರು ಆದರೆ ಇನ್ನೂ ಬಸ್ ಸ್ಟ್ಯಾಂಡ್‌ನ್ನು ಮಾಡಲ್ಲಿಲ್ಲ ಮತ್ತೆ ನಮ್ಮ ಚಿಕ್ಕನಾಯಕನಹಳ್ಳಿಯಿಂದ ಮಾಗಡಿಗೆ ದಿನಕ್ಕೆ ಎರಡು ಬಸ್‌ಗಳನ್ನು ಹಾಕಿದ್ದೀರಿ. ಈ ಎರಡು ಬಸ್‌ಗಳೂ ಸಹ ಸಕಾಲಕ್ಕೆ ಹೋಗುತ್ತಿಲ್ಲ. ಮಾಗಡಿಗೆ ಹೋಗ

ಬೇಕಾದರೆ ಬೆಂಗಳೂರಿಗೆ ಬಂದು ಹೋಗಬೇಕಾಗುತ್ತದೆ. ಈ ಬಗ್ಗೆ ದಯಮಾಡಿ ತಾವು ಅಗತ್ಯ ಇರುವಷ್ಟು ಬಸ್‌ಗಳನ್ನು ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ. —ಚಿಕ್ಕನಾಯಕನಹಳ್ಳಿಯಲ್ಲಿ ಬಸ್ಸ್ಟ್ಯಾಂಡ್‌ಗಾಗಿ ಶಂಕುಸ್ಥಾಪನೆ ಮಾಡಿರುವುದು ನಿಜ. ಈ ವರ್ಷದ ಬಜೆಟ್‌ನಲ್ಲಿ ಸೇರಿಸಿದ್ದೇವೆ. ಅದರ ಕೆಲಸವನ್ನು ಟೆಂಡರ್ ಕರೆದು ಪ್ರಾರಂಭ ಮಾಡಿಸುತ್ತೇವೆ. ಶಾಸಕರು ಬಯಸಿದ ಕಡೆ ಬಸ್ ನಿಲ್ಲಿಸುವಂತೆ ಈಗಾಗಲೇ ಕಂಡಕ್ಟರ್ ಮತ್ತು ಚಾಲಕರಿಗೆ ಸೂಚನೆ ಕೊಟ್ಟಿದ್ದರೂ ಅವರು ಶಾಸಕರ ಜತೆ ಸಭ್ಯ ರೀತಿಯಲ್ಲಿ ನಡೆದು ಕೊಳ್ಳದಿರುವುದರ ಬಗ್ಗೆ ಮತ್ತು ಕಾಫಿ ತಿಂಡಿಗಾಗಿ ಒಳ್ಳೆಯ ಕಡೆ ನಿಲ್ಲಿಸದಿರುವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟವರಿಗೆ ಹೆಚ್ಚಿನ ತಿಳುವಳಿಕೆಕೊಟ್ಟು ಪರಿಸ್ಥಿತಿಯಲ್ಲಿ ಸುಧಾರಣೆ ಮಾಡಲಿಕ್ಕೆ ಪ್ರಯತ್ನಿಸುವುದರ ಜತೆಗೆ ಮಾಗಡಿ ಬೆಂಗಳೂರು ವಲಯ ರಾಷ್ಟ್ರೀಕರಣದ ಪ್ರದೇಶ ವಾಗಿರುವುದರಿಂದ ಈ ರೂಟಿನ ಬಗ್ಗೆ ವಿಚಾರಣೆ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ —ಪ್ರತಿ ವರ್ಷ ಸುಮಾರು ಹಣ ನಷ್ಟವಾಗುತ್ತಿದ್ದುದನ್ನು ಈ ಸಲ ಸಚಿವರ ತಪ್ಪಿಸಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ವ್ಯವಸ್ಥೆಯಲ್ಲಿ ಹಲವಾರು ವರ್ಗದ ಜನರಿಗೆ ರಿಯಾಯಿತಿ ಕೊಟ್ಟಿದ್ದರೂ ಅಂಗವಿಕಲರಿಗೆ ಕೊಟ್ಟಿಲ್ಲ. ಅದನ್ನು ಘೋಷಣೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ದಾವಣಗೆರೆ ಡಿಪೋಗೆ ೫೦ ಬಸ್ ಕೊಡಬೇಕೆಂದು ನಮ್ಮ ಬೇಡಿಕೆ ಇದ್ದರೂ ರಾಷ್ಟ್ರೀಕರಣವಾದ ಮೇಲೆ ಕೇವಲ ೧೫ ಬಸ್ ಮಾತ್ರ ಕೊಟ್ಟಿದ್ದಾರೆ. ಉಳಿದ ೩೫ನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೊಸದಾದ ಬಸ್ ನಿಲ್ದಾಣ ದಾವಣಗೆರೆಯಲ್ಲಿ ಆಗಿರುವುದರಿಂದ ಗ್ರಾಮಾಂತರ ಪ್ರದೇಶದ ಬಸ್‌ಗಳ ನಿಲ್ದಾಣಕ್ಕೆ ಅಲ್ಲಿಂದ ದೂರ ವಾಗುತ್ತಿದೆ. ಇದರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಆ ಎರಡು ಬಸ್ ನಿಲ್ದಾಣಗಳ ಮಧ್ಯೆ ನಗರ ಸಾರಿಗೆ ಬಸ್‌ಗಳನ್ನು ಹೆಚ್ಚಾಗಿ ಓಡಿಸಬೇಕೆಂದು ಅಥವಾ ಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಹಳೇ ನಿಲ್ದಾಣದವರೆಗೆ ಓಡಿಸಬೇಕೆಂದು ಕೋರುತ್ತೇನೆ. ಹರಿಹರ ಕಡೆಯಿಂದ ಬರುವ ಎಲ್ಲ ವಾಹನಗಳನ್ನೂ ವಿನೋಬಾನಗರ ಮತ್ತು ಹಳೆಯ ನಿಲ್ದಾಣದವರೆಗೆ ಓಡಿಸಿ ಸ್ಟಾಪ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ. ಈ ಎಲ್ಲವರ ಬಗ್ಗೆಯೂ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ ಜಿ. ಆರ್. ಸಿಂಧ್ಯ. —ದಾವಣಗೆರೆ ಮತ್ತು ಅದರ ಸುತ್ತಮುತ್ತಲಿನ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಬಂದು ನನಗೆ ವಿವರಣೆಗಳನ್ನು ಕೊಟ್ಟಲ್ಲಿ ಅದರ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳ ಜತೆ ಚರ್ಚೆ ಮಾಡಿ ಆದಷ್ಟೂ ಮಟ್ಟಿಗೆ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಹೆಚ್ಚಾಗಿ ದಾವಣಗೆರೆಗೆ ಬಸ್ ಬೇಕೆಂದಿದ್ದಾರೆ ಎಷ್ಟು ಅವಶ್ಯಕತೆಯಿದೆಯೋ ಅಷ್ಟನ್ನೂ ಪೂರೈಸಿಕೊಡುತ್ತೇನೆಂದು ಹೇಳಿ. ಇನ್ನು ದಾವಣಗೆರೆ ಬಸ್ ನಿಲ್ದಾಣವನ್ನು ಆಗಸ್ಟ್ ೧೫ರಂದು ಉದ್ಘಾಟನೆ ಮಾಡುವುದಾಗಿ ಹೇಳಿದ್ದೇನೆ. ಇನ್ನು ಅಂಗವಿಕಲರಿಗೆ ಪಾಸ್ ಕೊಡುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಹಿಂದೆ ಅಂಧರಿಗೆ ಮುಫತ್ತಾಗಿ ಬಸ್‌ನಲ್ಲಿ ಪ್ರಯಾಣ ಮಾಡಲು ವ್ಯವಸ್ಥೆ ಮಾಡಿಕೊಟ್ಟಿದ್ದೇವೆ ಆದರೆ ಮಲ್ಲಪ್ಪನವರು ಹೇಳುವ ಅಂಗವಿಕಲರು ಯಾರೆಂದು ಪತ್ತೆಮಾಡುವುದು ಕಷ್ಟವಾಗುತ್ತದೆ. ಇವರ ಸಂಖ್ಯೆ. ಸಾರಿಗೆ ಸಂಸ್ಥೆಯ ಲಾಭನಷ್ಟ ಆರ್ಥಿಕಪರಿಸ್ಥಿತಿ ಯನ್ನು ನೋಡಬೇಕಾಗುತ್ತದೆ. ಇದರ ಬಗ್ಗೆ ಆಶ್ವಾಸನೆ ಕೊಡುವುದಿಲ್ಲ. ವಿಚಾರ ಮಾಡುತ್ತೇನೆ.

ಶ್ರೀ ಪಂಪಾಪತಿ —ಚಿತ್ರದುರ್ಗ ಜಿಲ್ಲೆಯಲ್ಲಿ ಡಿವಿಜನ್ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಮುಖ್ಯ ಕಚೇರಿಯನ್ನು ದಾವಣಗೆರೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಷ್ಟ್ರೀಕರಣವಾದ ಬಸ್ ಗಳಲ್ಲಿ ಕೆಲಸಗಾರರಿಗೆ ಕೆಲಸ ಒದಗಿಸುವುದರಲ್ಲಿ ಬಹಳ ವಿಳಂಬವಾಗುತ್ತದೆ. ಆದಷ್ಟು ಬೇಗನೆ ಅವರಿಗೆ ಕೆಲಸ ಒದಗಿಸಬೇಕೆಂದು ಕೋರುತ್ತೇನೆ. ದಾವಣಗೆರೆ ಬಸ್ ನಿಲ್ದಾಣದ ಕೆಲಸ ವಿಳಂಬಕ್ಕೆ ಕಾರಣ, ಆ ಸ್ಥಳ ಬೇರೆಯವರದಾಗಿದ್ದು ಆ ಸ್ಥಳವನ್ನು ಕೊಡಲಿಕ್ಕೆ ತಯಾರಿದ್ದಾರೆ. ಅವರಿಗೆ ಪಕ್ಕದಲ್ಲಿ ರುವ ಪಿಡಬ್ಲ್ಯೂಡಿ ಜಾಗವನ್ನು ಬಿಟ್ಟುಕೊಟ್ಟರೆ ಮತ್ತು ಸ್ವಲ್ಪ ಪರಿಹಾರ ಕೊಟ್ಟರೆ ಬಿಟ್ಟು ಕೊಡಲು ತಯಾರಿದ್ದಾರೆ. ಅವರು ಅನೇಕ ಸಲ ಬಂದು ಮುಖ್ಯಮಂತ್ರಿಗಳನ್ನು ತಮ್ಮನ್ನು ಕಂಡಿದ್ದಾರೆ. ಕೂಡಲೇ ಆ ಸ್ಥಳವನ್ನು ತೆಗೆದುಕೊಂಡು ಬಸ್ ನಿಲ್ದಾಣವನ್ನು ಪೂರ್ತಿಗೊಳಿಸಿ ಇಲ್ಲದಿದ್ದರೆ ಅದು ಪೂರ್ತಿಯಾಗುವುದೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಬಸ್ ನಿಲ್ದಾಣದ ಜಾಗದ ಬಗ್ಗೆ ಪಿಡಬ್ಲ್ಯೂಡಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಜತೆ ಸಮಾಲೋಚನೆ ಮಾಡಿ ಸಮಸ್ಯೆಯನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇನೆ. ಇನ್ನು ವಿಭಾಗೀಯ ಕಚೇರಿ ಎಲ್ಲಿರಬೇಕೆಂಬುದರ ಬಗ್ಗೆ ತುಮಕೂರು ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಗಳನ್ನು ಸೇರಿಸಿಕೊಂಡು ನಾವು ನಿರ್ಣಯ ಮಾಡಬೇಕಾಗುತ್ತದೆ ಅಧಿಕಾರಿಗಳಿಂದ ವರದಿ ತರಿಸಿಕೊಂಡು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ರಾಷ್ಟ್ರೀಕರಣವಾದ ಮೇಲೆ ಕೆಲಸ ಕಳೆದುಕೊಂಡವರಿಗೆ ಕೆಲಸ ಕೊಟ್ಟಿದ್ದೇವೆ. ಮತ್ತು ನ್ಯಾಯವಾಗಿ ಯಾರು ಕೆಲಸ ಮಾಡಿದ್ದಾರೋ ಅವರಿಗೆ ಕೆಲಸ ಕೊಡುವುದಕ್ಕೆ ಭರವಸೆ ಕೊಡುತ್ತೇನೆ.

SRI B. GURUPRASAD. "Life Time Tax", whether you are going to apply the same to the four wheelers and six wheelere, whether suitable testing grounds have been provided to assess the capability of drlvers, whether any yardstick is adopted to issue licenees, whether it has come to the notice of the department that a large percentage of road accidents take place in State transport buses and whether there is any move to use speed governora for these buses?

ಶ್ರೀ ಪಿಜಿಆರ್ ಸಿಂಧ್ಯ : ಅಧ್ಯಕ್ಷರೆ, ಲೈಫ್‌ಟೈಮ್ ಟ್ಯಾಕ್ಸ್‌ಗಳನ್ನು ಕಾರಿಗೂ ಹಾಕುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಡ್ರೈವರ್ಸ್‌ಗೆ ಟ್ರೈನಿಂಗ್ ಕೊಡುವ ವಿಚಾರದಲ್ಲಿ ಬೆಸ್ಟ್ ಟ್ರೈನಿಂಗ್ ಒದಗಿಸುವ ಕಾರ್ಯಕ್ರಮಗಳು ಅವರ ಮನಸ್ಸಿನಲ್ಲಿವೆಯೆಂದು ತಿಳಿದುಕೊಂಡಿದ್ದೇನೆ. ಅದನ್ನು ಮಾಡುತ್ತೇನೆ. ಬಸ್ ಗವರ್ನರ್‌ಗಳ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡಲು ಕಷ್ಟವಾಗುತ್ತದೆ. ಅದರ ಬಗ್ಗೆ ಟೆಕ್ನಿಕಲ್ ಒಪಿನಿಯನ್‌ಗಾಗಿ ಕೇಳಿದ್ದೇವೆ. ಅದು ಬಂದ ಮೇಲೆ ವಿಚಾರ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ನಾನು ಎರಡು ಸಲಹೆ ಮಾತ್ರ ಕೊಡುತ್ತೇನೆ. ಒಂದು ಬಸ್‌ಗಳಲ್ಲಿ ಬರೀ ನೋ ಸ್ಮೋಕಿಂಗ್ ಎಂದು ಬೋರ್ಡಿದೆಯೇ ಹೊರತು ಅದು ಚಾಲ್ತಿಯಲ್ಲಿಲ್ಲ. ಇದರ ಬಗ್ಗೆ ತಮ್ಮ ಇಲಾಖೆಯ ಕಾರ್ಯಕ್ರಮ ಏನು ? ಎರಡನೆಯದು, ಕಳೆದ ಬಾರಿ ನಾನು ಹೇಳಿದ್ದಂತೆ ತುಮಕೂರು ಮಾರ್ಗವಾಗಿ ಬರುವ ಬಸ್‌ಗಳನ್ನು ರಾಜಾಜಿನಗರ ಮಾರ್ಗವಾಗಿ ಓಡಿಸಬೇಕೆಂದು ಬಹಳ ಜನ ಕೇಳುತ್ತಿದ್ದಾರೆ. ಅದಕ್ಕೆ ಸೂಚನೆ ಕೊಡಬೇಕು. ಆಮೇಲೆ ಬಸ್ ಸ್ಟಾಂಡಿನಲ್ಲಿ ಆಟೋರಿಕ್ಷಾ ಸ್ಟ್ಯಾಂಡ್ ಏನಿದೆ ಅದನ್ನು ಕವರ್ಡ್ ಅಕಾಮಡೇಷನ್ ಮಾಡಬೇಕು. ನಾಲ್ಕನೆಯದು, ಮಾನ್ಯ ಮುಖ್ಯ ಮಂತ್ರಿಗಳಲ್ಲಿ, ಅಧ್ಯಕ್ಷರಲ್ಲಿ ಮತ್ತು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ನಾವೆಲ್ಲ ಒಂದು ದಿವಸ ಮಾಜಿ ಶಾಸಕರಾಗುವವರೇ ಅಂಥಾ ಮಾಜಿ ಶಾಸಕರಿಗೆಲ್ಲ ನಿಮ್ಮ ಬಸ್‌ಗಳಲ್ಲಿ ಉಚಿತವಾಗಿ ಓಡಾಡಲು ಪಾಸ್ ಕೊಡಬೇಕು. ಅಧ್ಯಕ್ಷರು ಇದರ ಬಗ್ಗೆ ಹೆಚ್ಚಿನ ಶ್ರದ್ಧೆ ಕೊಟ್ಟು ಆದೇಶ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ —ನಮ್ಮ ಬೆಂಗಳೂರು ಬಸ್ ನಿಲ್ದಾಣದಲ್ಲಿರತಕ್ಕಂತಹ ರಿಕ್ಷಾ ಸ್ಟ್ಯಾಂಡ್‌ಗೆ ಬೇಕಾಗಿರತಕ್ಕಂತಹ ಕವರ್ಡ್ ಅಕಾಮಿಡೇಷನ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ಆದಷ್ಟು ಬೇಗ ಮಾಡಿಸುತ್ತೇವೆ. ಮಲ್ಲೇಶ್ವರಂ ಮೂಲಕ ಬರುತಕ್ಕಂತಹ ಬಸ್ಸುಗಳು ರಾಜಾಜಿನಗರದ ಮೂಲಕ ಬರಬೇಕೆಂದು ಹೇಳುತ್ತಿದ್ದಾರೆ ಅದು ಕಷ್ಟವಾಗುತ್ತದೆ ಆದರೂ ವಿಚಾರ ಮಾಡುತ್ತೇನೆ. ಎರಡು ಕಿಲೋ ಮೀಟರ್ ಎಕ್ಸ್‌ಟ್ರಾ ಆಗುತ್ತದೆ ಡೆಡ್ ಮೈಲೇಜ್ ಆಗುತ್ತದೆ. ಮಲ್ಲೇಶ್ವರಂ, ಶೇಷಾದ್ರಿಪುರಂನವರು ಹೀಗೆ ಬರಲೀ ಎಂದು ಹೇಳುತ್ತಾರೆ. ಇನ್ನೂ ನೋ ಸ್ಮೋಕಿಂಗ್ ಬಗ್ಗೆ ಬರೀ ಬೋರ್ಡ್ ಹಾಕಿದ್ದೀರಿ ಅದರಿಂದ ಏನೂ ಉಪಯೋಗವಿಲ್ಲವೆಂದು ಹೇಳಿದ್ದಾರೆ. ಹೆಚ್ಚಿನ ತಿಳುವಳಿಕೆಯಿಂದ ಪ್ರಯಾಣಿಕರ ಸಹಾಯದಿಂದ ಅದನ್ನು ಮಾಡಬಹುದು ನಮ್ಮ ಸ್ಟಾಫ್, ಏನು ಇದೆ ಕೊನೆ ಪಕ್ಷ ಅವರಾದರೂ ಕುಡಿಯಬಾರದು ಇದಕ್ಕೆ ಪ್ರೋತ್ಸಾಹ ಕೊಡಬಾರದು ಎನ್ನುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾಜೀ ಶಾಸಕರಿಗೆ ಪಾಸ್ ಕೊಡತಕ್ಕಂತಹ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ ಅವರು ಈ ಬಗ್ಗೆ

ದೊಡ್ಡ ಮನಸ್ಸು ಮಾಡಬೇಕು. ಸುಮಾರು ೬೦೦ ಜನ ಇರಬಹುದು ಅಷ್ಟೇ. ನಾಳೆ ನಾವು ನೀವು ಮಾಜಿ ಶಾಸಕರಾಗಿ ಪ್ರಯಾಣ ಮಾಡತಕ್ಕಂತಹ ಸಂದರ್ಭ ಬಂದಾಗ ಮಾಡಲೇಬೇಕಾಗುತ್ತದೆ.

ಶ್ರೀ ಎಂ. ಎಲ್. ಉಸ್ತಾದ್,—ಹೋದ ಸಲ ಈ ಬಿಲ್ ಇಂಡ್ರಡ್ಯೂಸ್ ಆದಾಗ ಇದರ ಬಗ್ಗೆ ಅಮೆಂಡ್‌ಮೆಂಟ್ ತರಬಹುದು ಎಂದು ಹೇಳಿದ್ದರು.

ಶ್ರೀ ರಾಮಕೃಷ್ಣ ಹೆಗಡೆ.—ಮಾಜೀ ಶಾಸಕರ ಬೇಡಿಕೆ ಇದೊಂದೇ ಅಲ್ಲ ಇನ್ನೂ ಅನೇಕ ಬೇಡಿಕೆಗಳು ಇವೆ ಅವು ಸರಕಾರದ ಪರಿಶೀಲನೆಯಲ್ಲಿ ಇವೆ. ಮಾಜೀ ಶಾಸಕರ ಸಂಖ್ಯೆ ಹೆಚ್ಚಾಗುತ್ತಾ ಹೋಗುತ್ತದೆ ಅದಕ್ಕಾಗಿ ಸ್ವಲ್ಪ ಯೋಚನೆ ಮಾಡ ಬೇಕಾಗುತ್ತದೆ.

ಶ್ರೀ ಬಿ. ಗುರುಪಾದಪ್ಪ ನಾಗಮಾರಪಲ್ಲಿ.—ಬೀದರ್ ಜಿಲ್ಲೆಯಲ್ಲಿ ಡಿವಿಜನ್ ಮಾಡುತ್ತೇವೆಂದು ಹೇಳಿದರು ಸಂತೋಷ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಔರಾದ್ ಬಸ್ ಡಿಪೋ ಅನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಅದಕ್ಕೆ ಎಷ್ಟು ಲಕ್ಷ ಹಣ ತಗಲುತ್ತದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಖಚಿತವಾದ ಉತ್ತರ ಕೊಡಬೇಕು. ಔರಾದ್ ಡಿವಿಜನ್‌ನಲ್ಲಿ ರಾಷ್ಟ್ರೀಕರಣವಾದ ಮೇಲೆ ಬಸ್‌ಗಳು ಬಹಳ ಕಡಿಮೆಯಾಗಿದೆ, ಬಸ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಬಸ್‌ಗಳು ಸಾಕಷ್ಟು ಇಲ್ಲವೆಂದು ದೂರು ಬರುತ್ತಿದೆ. ಎಷ್ಟು ಬಸ್‌ಗಳನ್ನು ಹೆಚ್ಚು ಮಾಡುತ್ತೀರಿ ಮತ್ತು ಅದರ ವ್ಯವಸ್ಥೆಯನ್ನು ಯಾವಾಗ ಸರಿ ಪಡಿಸುತ್ತೀರಿ ಎಂಬ ಬಗ್ಗೆ ಹೇಳಬೇಕು, ಮತ್ತು ಅಂತರ ಜಾತಿ ವಿವಾಹವಾದವರಿಗೆ ಫ್ರೀ ಪಾಸ್ ಅಥವಾ ಹನೀಮೂನ್ ಹೋಗುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ,—೩ ನೇ ಪ್ರಶ್ನೆಗೆ ಉತ್ತರ ಸಾಧ್ಯವಿಲ್ಲ, ಈ ವರ್ಷ ಗುಲ್ಬರ್ಗಾ ವಿಭಾಗಕ್ಕೆ ೭೫ ಬಸ್‌ಗಳನ್ನು ಕೊಡುತ್ತಿದ್ದೇವೆ. ಇನ್ನು ಔರಾದ್ ಡಿಪೋ ಬಗ್ಗೆ ಹೇಳುವುದಾದರೆ ನಾನು ಬಸವ ಕಲ್ಯಾಣದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಈ ವರ್ಷ ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕೆ ಬೇಕಾಗಿರತಕ್ಕಂತಹ ಜಾಗವನ್ನು ಸಧ್ಯದಲ್ಲಿ ತೆಗೆದುಕೊಂಡು ಅಲ್ಲಿ ಆಗಬೇಕಾದಂತಹ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ ಎಲ್. ಉಸ್ತಾದ್.—ಬಿಜಾಪುರ ಸಿಟಿ ಬಸ್ ಸ್ಟ್ಯಾಂಡ್ಸ್ ಮೀನಾಕ್ಷಿ ಚೌಕದಲ್ಲಿ ಮಳೆ ಬಂದರೆ ನೀರು ಹೆಚ್ಚು ಬರುತ್ತದೆ. ಮಕ್ಕಳು ಮರಿ ಎಲ್ಲಾ ಆ ಕಡೆ ಹೋಗಬೇಕಾಗುತ್ತದೆ ಅಲ್ಲಿತು ಬಾಳ ತೊಂದರೆಯಾಗುತ್ತದೆ. ಬಿಜಾಪುರ ಗಾಂಧಿ ಚೌಕ ಪೋಲೀಸ್ ಸ್ಟೇಷನ್ ಏನು ಇದೆ ಅದು ಬೆಂಗಳೂರಿನಲ್ಲಿ ಡಿ. ಜಿ. ಪಿ. ಆಫೀಸ್ ಏನು ಇದೆ ಅದಕ್ಕಿಂತ ಬೃಹತ್ತಾದಂತಹ ಜಾಗ ಇದೆ. ಅದರಲ್ಲಿ ಅರ್ಧ ಭಾಗದಷ್ಟು ಜಾಗವನ್ನು ಬಿಜಾಪುರ ಸಿಟಿ ಬಸ್ ಸ್ಟ್ಯಾಂಡ್ ಸಲುವಾಗಿ ತೆಗೆದುಕೊಳ್ಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಗೃಹ ಖಾತೆಯನ್ನು ಹೊಂದಿದ್ದಾಗ ಅವರು ಇದರ ಬಗ್ಗೆ ಯೋಚನೆ ಮಾಡಬೇಕು ಅದನ್ನು ಮಾಡಿಯೇ ತೀರಬೇಕು. ಇನ್ನು ಬಿಜಾಪುರದಿಂದ ಒಂದೇ ಒಂದು ಡಿಲಕ್ಸ್ ಬಸ್ ಇದೆ ಯಾವಾಗ ನೋಡಿದರೂ ಕೂಡ ಅದು ಫುಲ್ ಆಗಿ ಇರುತ್ತದೆ ನಿನ್ನೆ ನಾನು ಅಲ್ಲಿಂದ ಇಲ್ಲಿಗೆ ಬರುವಾಗ ಒಂದೇ ಒಂದು ಸೀಟು ನನಗೆ ಸಿಕ್ಕುವುದೇ ಕಷ್ಟವಾಯಿತು. ಆದುದರಿಂದ ಮತ್ತೊಂದು ಎಕ್ಸ್‌ಟ್ರಾ ಡಿಲಕ್ಸ್ ಬಸ್ ಅನು ಬಿಜಾಪುರದಿಂದ ಸ್ಟಾರ್ಟ್ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಬಹಳ ಮಂದಿ ಮಾಜಿ ಶಾಸಕರು ಬರುತ್ತಾ ಬರುತ್ತಾ ಹೆಚ್ಚಾಗುತ್ತಾರೆ ಎಂದು. ಹೋದ ಸಲ ಲೆಜಿಸ್ಲೇಟರ್ಸ್ ಬಿಲ್ ಮೂವ್ ಆದಾಗ ಒಂದು ಪ್ರಶ್ನೆಯನ್ನು ನಾನು ಕೇಳಿದ್ದೆ ಅದು ರೆಕಾರ್ಡ್ ಕೂಡ ಆಗಿದೆ. ಯು. ಪಿ, ಯಲ್ಲಿ ಯಾವ ರೀತಿ ಯಾಗಿ ಮಾಜಿ ಶಾಸಕರುಗಳಿಗೆ ಬಸ್ ಸೌಕರ್ಯದ ಅನುಕೂಲವಿದೆಯೋ ಅದೇ ರೀತಿಯಾಗಿ ಇಲ್ಲಿ ಸಹ ಏಕೆ ಕನ್ಸಿಡರ್ ಮಾಡಬಾರದು ಎಂದು. ಮಾನ್ಯ ಮುಖ್ಯ ಮಂತ್ರಿಯವರು ತಕ್ಷಣ ಇದಕ್ಕೆ ಅಮೆಂಡ್‌ಮೆಂಟ್ ಅನ್ನು ತಂದಿದ್ದರೆ ಮಾಡಬಹುದಾಗಿತ್ತು ಏನು ದೊಡ್ಡ ವಿಷಯವೆಂದು ಹೇಳಿದ್ದನ್ನು ನೆನಪಿಗೆ ತರುತ್ತೇನೆ ಅವರು ಇದರ ಬಗ್ಗೆ ಯೋಚನೆ ಮಾಡಬೇಕು. ಮಾಜೀ ಶಾಸಕರ ಬಳಗ ಹೆಚ್ಚಾಗುತ್ತದೆಂದು ಹೇಳುತ್ತಿದ್ದಾರೆ ಅಂದರೆ ಅಸೆಂಬ್ಲಿಯನ್ನು ಡಿಸಾಲ್ವ್ ಮಾಡುವುದೇನಾದರೂ ತಮ್ಮ ಮನಸ್ಸಿನಲ್ಲಿದೆಯೇ ?

೨–೦೦ ಪಿ. ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಿಜಾಪುರ ಸಿಟಿ ಬಸ್ ಸ್ಟ್ಯಾಂಡ್ ಬಗ್ಗೆ ಹೇಳಿರತಕ್ಕಂಥ ಜಾಗದ ಬಗ್ಗೆ ವಿಚಾರ ಮಾಡುತ್ತೇನೆ. ಡಿಲಕ್ಸ್ ಬಸ್ ಬಗ್ಗೆ ನನಗೆ ಗೊತ್ತಿರುವ ಹಾಗೆ ಅಲ್ಲಿಂದ ಪ್ಯಾಸೆಂಜರ್ಸ್ ೩೫ ಜನ ನಮಗೆ ಸಿಗುವುದಿಲ್ಲ. ಆ ರೀತಿ ಏನಾದರೂ ಅವಶ್ಯಕತೆ ಬಿದ್ದು ಟ್ರಾಫಿಕ್ ಇರುವುದಾದಲ್ಲಿ ಅದನ್ನು ಮಾಡಿಸೋಣ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ. ಈ ರಾಜ್ಯದಲ್ಲಿ ಸರಾಸರಿ ಪ್ರತಿ ವರ್ಷ ಅಮಾನತ್ತುಗೊಳ್ಳುವ ಕಂಡಕ್ಟರ್‌ಗಳ ಪ್ರಮಾಣ ಎಷ್ಟಿದೆ ? ಡ್ರೈವರ್ ಪ್ರಮಾಣ ಎಷ್ಟಿದೆ ? ಹಾಗೆಯೇ ಡಿಸ್‌ಮಿಸ್ ಆದವರ ಪ್ರಮಾಣ ಎಷ್ಟಿದೆ ? ೮೭–೮೮ ನೇ ಇಸವಿಯದು ಬೇಕು. ಹಿಂದಿನದು ಸಾಧ್ಯವಾದರೆ ಅದನ್ನು ಹೇಳಬಹುದು. ಆಮೇಲೆ ಈ ಅಮಾನತ್ತುಗೊಂಡವರು ಇತ್ಯರ್ಥವಾಗದೇ ಉಳಿದಿರುವ ಕಂಡಕ್ಟರ್‌ಗಳ ಪ್ರಮಾಣ ಎಷ್ಟಿದೆ ? ಅದರಂತೆ ಡ್ರೈವರ್‌ಗಳ ಪ್ರಮಾಣ ಎಷ್ಟಿದೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೇ, ಕಳೆದ ವರ್ಷದ ಅಂಕಿ ಅಂಶಗಳನ್ನು ನಾನು ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ೮೭–೮೮ ನೇ ಇಸವಿಯಲ್ಲಿ ೩,೮೮೦ ಜನರನ್ನು ಕೆಲಸದಿಂದ ತೆಗೆದಿದ್ದೇವೆ. ಇನ್‌ಕ್ರಿಮೆಂಟ್‌ನ್ನು ೯೪೩೪ ಜನರಿಗೆ ತಡೆಹಿಡಿದಿದ್ದೇವೆ. ಮತ್ತೆ ೩೪೮೦ ಜನರಿಗೆ ಹಿಂಬಡ್ತಿ ಮಾಡಿದ್ದೇವೆ. ೧೧,೬೨೩ ಜನರಿಗೆ ಫೈನನ್ನು ಹಾಕಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಣ್ಣನವರು ಮುಳುಬಾಗಿಲಿನಲ್ಲಿ ಬಸ್ ಡಿಪೋಗೆ ಫೌಂಡೇಷನ್‌ನ್ನು ಹಾಕಿದರು. ಅದನ್ನು ಇನ್ನೂ ತೆಗೆದುಕೊಳ್ಳಲಿಲ್ಲ. ಅದನ್ನು ಬೇಗ ಮಾಡಿಸಿಕೊಡಬೇಕು ಎಂದು ಹೇಳುತ್ತೇನೆ. ಎರಡನೆಯದಾಗಿ ತುಮಕೂರಿನಿಂದ ನಿನ್ನೆ ನಾನು ಬಂದೆ. ರೋಡ್‌ನಲ್ಲಿ ಆರು ಕಡೆ ಅಪಘಾತಗಳಾಗಿ ಜನ ಸತ್ತಿದ್ದರು ಅದನ್ನು ನೋಡಿ ನನಗೆ ಭಯವಾಯಿತು. ನ್ಯಾಷನಲ್ ಹೈವೇನಲ್ಲಿ ಕೆಲವು ಕಡೆ Death rides speedy driver we like you not your speed etc. etc. ಎಂದು ಹಾಕಿದ್ದೀರಿ ಆಂಧ್ರದಲ್ಲಿ ಪೂರ್ತಿ ಎಲ್ಲಿ ನೋಡಿದರೂ ಒಂದೊಂದು ಮೈಲಿಗೂ ನಾಲ್ಕೈದು ಕಡೆ ಈ ರೀತಿ ಹಾಕಿದ್ದಾರೆ. ಬಸ್‌ನಲ್ಲಿ ಹೋದವರು ಮನೆಗೆ ವಾಪಸ್ ಬರಬೇಕು. ಮನೆಯವರು ಅವರಿಗೋಸ್ಕರ ಕಾದಿರುತ್ತಾರೆ. ಈ ರೀತಿ ಮಾಡಿದರೆ ಡ್ರೈವರ್‌ಗೆ ಭಯ ಬರುತ್ತದೆ ಎಂದು ಹಾಕಿದ್ದಾರೆ. ಈ ಬೋರ್ಡ್‌ನ್ನು ಹಾಕುವ ಬಗ್ಗೆ ಏನಾದರೂ ಯೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ಬೋರ್ಡ್‌ಗಳನ್ನು ಏನು ಬರೆದಿದ್ದಾರೆ, ಅದನ್ನು ಓದಲಿಕ್ಕೆ ಹೋಗಿ ಆಕ್ಸಿಡೆಂಟ್ ಆಗಿದ್ದು ಉಂಟು,

ಶ್ರೀ ಆರ್, ವೆಂಕಟರಾಮಯ್ಯ.—ಇದು ಡ್ರೈವರ್‌ಗಳಿಗೆ ಭಯ ಬರಲಿ ಎನ್ನುವ ಉದ್ದೇಶದಿಂದ ಹಾಕಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್, ಸಿಂಧ್ಯಾ.—ಬಹುಶಃ ವೆಂಕಟರಾಮಯ್ಯನವರಿಗೆ ಗೊತ್ತಿರಲಿಕ್ಕಿಲ್ಲ. ಲೇಟೆಸ್ಟ್ ಪದ್ಧತಿ ಏನು ಇದೆ ಎಂದರೆ ರಸ್ತೆ ಮೇಲೆ ಹೆದ್ದಾರಿ ಮೇಲೆ ಅಕ್ಷರದಿಂದ ಮತ್ತು ಅಂಕಿಯಿಂದ ಏನೂ ಬರೆಯುವುದಿಲ್ಲ. ಚಿಹ್ನೆಯನ್ನು ಮಾತ್ರ ತೋರಿಸುತ್ತಾರೆ. ಚಿಹ್ನೆಯನ್ನು ನೋಡಿದ ತಕ್ಷಣ ಗೊತ್ತಾಗುತ್ತದೆ. ಹೆಂಡತಿ ಮಕ್ಕಳ ನೆನಪಾದ ತಕ್ಷಣ ಅದನ್ನು ಓದಬೇಕು ಎಂದರೆ ಓದಲಿಕ್ಕೆ ಹೋದರೆ ಎದುರಿಗೆ ಬರುವ ಗಾಡಿಯಾಗಲೀ ಮತ್ತೊಬ್ಬರಾಗಲೀ ಜನರಾಗಲೀ ಯಾರೂ ಅವನಿಗೆ ಕಾಣುವುದಿಲ್ಲ. ಆಗ ಆಕ್ಸಿಡೆಂಟ್ ಆಗುತ್ತದೆ.

ಶ್ರೀ ಬಿ. ಲಕ್ಕಪ್ಪ.—ರೋಡ್‌ಗಳಲ್ಲಿ ಮುಖ್ಯ ರಸ್ತೆಗಳಲ್ಲಿ ಹಂಪ್ಸ್‌ಗಳು ಜಾಸ್ತಿಯಾಗಿ ಬ್ರೇಕ್ ಹಿಡಿಯುವುದೂ ಕೂಡಾ ಕಷ್ಟವಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಇದನ್ನು ಬೇರೆ ಸ್ಟೇಟ್ಸ್‌ನಲ್ಲೂ ಕೂಡಾ ಜಾಸ್ತಿ ಹಾಕಿದ್ದಾರೆ. ದಾರಿಯುದ್ದಕ್ಕೂ ಈ ಬೋರ್ಡ್‌ಗಳು ಇದೆ. ತಿರುಪತಿಯಲ್ಲೂ ಹಾಕಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ರೋಡ್‌ನಲ್ಲಿ ಗತಿ ಅವರೋಧಕಗಳನ್ನು ಮಾಡುತ್ತಾರೆ. ಉದಾಹರಣೆಗೆ ಮೊನ್ನೆ ನಾನು ಆಫೀಸಿಗೆ ಬರುತ್ತಿದ್ದಾಗ ಲೆಜಿಸ್ಲೇಟರ್ ಹೋಂನ ಎದುರುಗಡೆ ಮೈನ್ ರಸ್ತೆಗೆ ಸೇರತಕ್ಕಂಥ ಜಾಗದಲ್ಲಿ ಒಂದು ಅಪಘಾತ ಆಯಿತು. ಅದು ಏತಕ್ಕೆ ಎಂದರೆ ಗತಿ ಅವರೋಧಕ ಇರಲಿಲ್ಲ. ಇದ್ದರೂ ಕೂಡಾ ಹಿಂದೆ ಇತ್ತು, ನೋಡಿದ ಮೇಲೆ ಅದನ್ನು ತಕ್ಷಣ ಬದಲಾಯಿಸಿ ಒಂದು ಹೊಸ ಗತಿರೋಧಕವನ್ನು ಹಾಕಿಸುವುದಕ್ಕೆ ಹೇಳಿದ್ದೆ, ಹೊಸದಾಗಿ ಈಗ ಅಲ್ಲಿ ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು.—ವೆಂಕಟರಾಮಯ್ಯನವರೇ ತಾವು ಕುಳಿತುಕೊಳ್ಳಿ,

ಶ್ರೀ ಆರ್. ವೆಂಕಟರಾಮಯ್ಯ.—ನಾನು ಇದನ್ನು ಪೂರ್ತಿ ಹೇಳಲಿಲ್ಲ. ಬಸ್‌ನಲ್ಲಿ ಡ್ರೈವರ್‌ಗೂ ಮತ್ತೆ ಪ್ಯಾಸೇಂಜರ್ಸ್‌ಗೂ ಬ್ಯಾರಿಕೇಡ್ ಇದೆ. ಇದನ್ನು ತೆಗೆದರೆ ಒಳ್ಳೆಯದು. ಏಕೆಂದರೆ ಈ ಬಸ್ ಡ್ರೈವರ್ ಇಲ್ಲೀಗಲ್ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಒಂದೇ ಅನುಕೂಲ ಇರುವುದು. ಬೇರೆ ಯಾವ ಸ್ಟೇಟ್ಸ್‌ನಲ್ಲೂ ಇಲ್ಲ. ಏತಕ್ಕೆ ಹಾಕಿದ್ದಾರೆ, ಅದಕ್ಕೆ ಏನು ಬೇಸಿಸ್ ? ಇದರಿಂದ ಇನ್ನು ನಾಲ್ಕು ಜನಕ್ಕೆ ಅಲ್ಲಿ ಅಕಾಮಡೇಟ್ ಮಾಡಬಹುದಾಗಿತ್ತು. ಇದರ ಅರ್ಥ ಏನು ಎಂದು ನನಗೆ ಗೊತ್ತಾಗುವುದಿಲ್ಲ. ನಮ್ಮ ಮುಕ್ತಾರುನ್ನೀಸಾ ಅವರು ಕೇಳಿದಾಗ ತಾವು ಒಂದು ವಿಷಯವನ್ನು ಹೇಳಿದಿರಿ, ಈ ಅಸಿಸ್ಟೆಂಟ್ ವರ್ಕ್ಸ್ ಸೂಪರಿಂಟೆಂಡೆಂಟ್ ಅವರಿಗೆ ಈಗ ತಕ್ಷಣ ಪ್ರೊಮೋಷನ್ ಕೊಡುತ್ತೀರಾ ? ಏಕೆಂದರೆ ಅವರನ್ನು ಇಲ್ಲಿ ತರಿಸಿ ಅವರಿಗೆ ತೊಂದರೆ ಆಗದ ಹಾಗೆ ಮಾಡಬೇಕು, ೬೪ ಜನ ಈಗಾಗಲೇ ತೊಂದರೆಗೆ ಈಡಾಗಿದ್ದಾರೆ. ಇದರ ಬಗ್ಗೆ ದಯವಿಟ್ಟು ಹೇಳಬೇಕು.

ಅಧ್ಯಕ್ಷರು.—ಹೇಳುತ್ತಾರೆ ಕುಳಿತು ಕೊಳ್ಳಿ,

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನ್ಯಾಯವಾಗಿ, ಕ್ರಮ ಬದ್ಧವಾಗಿ ಸಿಗತಕ್ಕಂಥ ಪ್ರೊಮೋಷನ್ ಇದೆ. ಅದನ್ನು ವಿಥೆಲ್ಡ್ ಮಾಡುವುದಕ್ಕೆ ಹೋಗುವುದಿಲ್ಲ. ಅದು ಸಿಗುತ್ತದೆ, ಇದಕ್ಕೆ ಮಾನ್ಯ ಸದಸ್ಯರು ಯಾವುದೇ ರೀತಿಯ ಸಂಶಯ ಪಡಬೇಕಾಗಿಲ್ಲ. ಮುಂಬಾಗಿಲಿನಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ, ಮತ್ತೆ ಅಪಘಾತಗಳು ಆದಷ್ಟು ಕಡಿಮೆ ಆಗುವುದಕ್ಕೆ ಎಲ್ಲಾ ರೀತಿಯಿಂದ ವಿವಿಧ ಇಲಾಖೆಗಳ ವತಿಯಿಂದ ಸಹಕಾರ ತೆಗೆದು ಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. ಬಸ್‌ನಲ್ಲಿ ಚಾಲಕನ ಹಿಂದೆ ಬ್ಯಾರಿಕೇಡ್ ಹಾಕಿದ್ದೀರಿ, ಅದನ್ನು ತೆಗೆಯಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ತೆಗೆಯುವುದರಿಂದ ತೊಂದರೆಯಾಗುತ್ತದೆ. ಓವರ್‌ಲೋಡಿಂಗ್ ಇದ್ದರೆ ಡ್ರೈವರ್ ಪಕ್ಕದಲ್ಲಿ ಕುಳಿತು ಕೊಳ್ಳತಕ್ಕದ್ದು, ಇತ್ಯಾದಿ ಕೆಲಸಗಳು ಆಗುತ್ತವೆ, ಡ್ರೈವರ್‌ಗೆ ಬಹಳ ಡಿಸ್ಟರ್ಬ್ ಆಗುತ್ತದೆ. ಈ ದೃಷ್ಟಿಯಿಂದ ಬ್ಯಾರಿಕೇಡ್ ಹಾಕಿರುತ್ತೇವೆ. ಅವರು ಸ್ಪೆಸಿಫಿಕ್ ಆಗಿ ಯಾವುದಾದರೂ ರೂಟ್‌ನಲ್ಲಿ ಈ ತರಹ ಡ್ರೈವರ್ಸ್ ಬೇರೆ ರೀತಿಯಲ್ಲಿ ಪ್ಯಾಸೆಂಜರ್ಸ್ ಅನ್ನು ಕರೆದುಕೊಂಡು ಹೋಗುವುದು ಅಥವಾ ಸಾದೆಯನ್ನು ಇಟ್ಟುಕೊಳ್ಳುವುದು ಇಂಥಾದ್ದು ಇದ್ದರೆ ಅದನ್ನು ತಿಳಿಸಿದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಹೊನ್ನಾಳಿಯಲ್ಲಿ ಪ್ರತಿ ದಿನ ೧೫೦ ಕೆ ಎಸ್ ಆರ್ ಟಿ ಸಿ ಬಸ್‌ಗಳು, ಹೋಗುತ್ತವೆ. ಅಲ್ಲಿಗೆ ವ್ಯವಸ್ಥಿತವಾದ ಬಸ್ ಸ್ಟ್ಯಾಂಡ್ ಕೊಡಿ ಎಂದು ಕಳೆದ ೪-೫ ವರ್ಷದಿಂದ ಮಾನ್ಯ ಸಾರಿಗೆ ಸಚಿವರನ್ನು ಕೇಳುತ್ತಿದ್ದೇನೆ. ಯಾವಾಗ ಬಸ್ ಸ್ಟ್ಯಾಂಡ್ ಅನ್ನು ಕೊಡುತ್ತಾರೆ ಎಂದು ತಿಳಿಸಬೇಕು. ಎರಡನೆಯದಾಗಿ ಮಾನ್ಯ ಲಕ್ಕಪ್ಪನವರು ಹೇಳಿದ ಹಾಗೆ ನಾನು ಹಳ್ಳಿಯಿಂದ ಬರತಕ್ಕ ಶಾಸಕ, ನನ್ನ ಊರಿನ ಮೇಲೆ ಹೋಗತಕ್ಕ ಎಲ್ಲಾ ಎಕ್ಸ್‌ಪ್ರೆಸ್ ಬಸ್‌ಗಳು ನಾನು ಹೇಳುವ ಜಾಗದಲ್ಲಿ ನಿಲ್ಲಿಸಬೇಕೆಂದು ಸಂಬಂಧಪಟ್ಟ ಕಂಡಕ್ಟರ್‌ನನ್ನು ಕೇಳಿದಾಗ ಅಲ್ಲಿ ಸ್ಟಾಪ್ ಇಲ್ಲದ ಕಾರಣ ನಿಲ್ಲಿಸುವುದಕ್ಕೆ ಆಗುವುದಿಲ್ಲವೆಂದು ಆತನು ಹೇಳುತ್ತಾನೆ, ನಾನು ಎಂ. ಎಲ್. ಎ. ಎಂದು ಹೇಳಿದಾಗಲೂ ಸಹ ಆತ ನಿಲ್ಲಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾನೆ ನೀವು ಎಂ. ಎಲ್. ಎ. ಆಗಿರಬಹುದು ಅಥವಾ ಯಾರೇ ಆಗಿರಬಹುದು, ಬಸ್ ಸ್ಟಾಪ್ ಇಲ್ಲಿ ಇಲ್ಲ ಇಲ್ಲಿ ನಿಲ್ಲಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾನೆ. ನನ್ನ ಸನ್ಮಾನ್ಯ ಮಿತ್ರರ ಅಭಿಪ್ರಾಯದಂತೆ ಒಂದು ಆದೇಶವನ್ನು ನೀಡಿ ನಮಗೆ ಅದರ ಕಾಪಿಯನ್ನು ಕೊಟ್ಟರೆ ನಾವು ಕಂಡಕ್ಟರ್ ಏನಾದರೂ ನಾವು ಇಚ್ಛಿಸಿದ ಸ್ಥಳದಲ್ಲಿ ಇಳಿಯಲು ಆಕ್ಷೇಪಣೆ ಮಾಡಿದರೆ ನಾವು ಆದೇಶದ ಕಾಪಿಯನ್ನು ತೋರಿಸಿ ಸಂಬಂಧಪಟ್ಟ ಊರಿನಲ್ಲಿ ಇಳಿದು ಕೊಳ್ಳಬಹುದು, ಮೂರನೆಯದಾಗಿ ಪಂಚತಾರಾ ಹೋಟೆಲ್‌ಗಳಲ್ಲಿ ಕೆಲವು

ಕಡೆ ಬೈಬಲ್ ಇಟ್ಟಿರುತ್ತಾರೆ. ಅದೇ ರೀತಿ ದೂರದ ಊರಿಗೆ ಸಂಚಾರ ಮಾಡತಕ್ಕ ಪ್ರಯಾಣಿಕರಿಗೆ ಅನುಕೂಲ ಆಗುವ ರೀತಿಯಲ್ಲಿ ಒಳ್ಳೆಯ ಉಪಯುಕ್ತವಾದ ಕಾದಂಬರಿಗಳನ್ನು ಇಟ್ಟರೆ ನಾವು ಕಾಲ ಕಳೆದುಕೊಂಡು ಹೋಗಬಹುದು. ಈ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಶಾಸಕರಿಗೆ ಆಗತಕ್ಕಂಥಹ ತೊಂದರೆಗಳ ಬಗ್ಗೆ ಮತ್ತೆ ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ವಿಚಾರ ಮಾಡುತ್ತೇನೆ. ಹೊನ್ನಾಳಿ ರಾಷ್ಟ್ರೀಕರಣ ಆಗಿರತಕ್ಕಂಥ ಒಂದು ಪ್ರದೇಶ ಅಲ್ಲ. ಅದು ಅಲ್ಲದೆ ಖಾಸಗಿ ಬಸ್ ವಶದಲ್ಲಿರತಕ್ಕ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಒಂದು ಸಣ್ಣ ಊರು.

ಶ್ರೀ ಬಿ. ಜಿ. ಬಸವನಗೌಡ,—ಅದು ಸಣ್ಣ ಊರು ಅಲ್ಲ, ೧೫೦ ಸರ್ಕಾರಿ ಬಸ್‌ಗಳು ಪ್ರತಿದಿನ ಬರುತ್ತವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆದ್ಯತೆ ಮೇರೆಗೆ ನಾವು ಬಸ್ ಸ್ಟ್ಯಾಂಡನ್ನು ಅಲ್ಲಿ ಕಟ್ಟಿಸಿ ಕೊಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ,—ತಾವು ಮಂತ್ರಿ ಆರಂಭದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವಾಣಿ ಎನ್ನುವ ಒಂದು ಕಾರ್ಯಕ್ರಮ ಮಾಡಿ, ಎಲ್ಲರ ಪ್ರಶ್ನೆಗಳಿಗೆ ಉತ್ತರ ಕೊಡುವಂತಹ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳಿದ್ದೀರಿ, ಆರು ತಿಂಗಳಿಗೊಮ್ಮೆ ಮಾಡುತ್ತೇನೆಂದು ಹೇಳಿದ್ದಿರಿ, ಆ ನಂತರ ಮಾಡಿಲ್ಲ. ಇನ್ನು ರಾತ್ರಿ ಲಕ್ಷುರಿ ಬಸ್‌ನಲ್ಲಿ ಒಮ್ಮೊಮ್ಮೆ ಡ್ರೈವರ್ ಮಾತ್ರ ಇರುತ್ತಾರೆ. ಇಬ್ಬರು ಕಂಡಕ್ಟರ್‌ಗಳು ಇರುವುದಿಲ್ಲ, ಕೆಲವುದರಲ್ಲಿ ಇರುತ್ತಾರೆ. ಅರ್ಧ ದಾರಿಯಲ್ಲಿ ಅನೇಕ ಪ್ಯಾಸೆಂಜರ್‌ಗಳು ಡ್ರೈವರ ಹತ್ತಿರ ಕುಳಿತು ಕೊಳ್ಳುತ್ತಾರೆ. ಇವರು ಟಿಕೆಟ್ ತೆಗೆದುಕೊಳ್ಳುತ್ತಾರೊ ಅಥವಾ ಇಲ್ಲವೋ ಎಂಬ ಡೌಟ್ ನೀವು ತನಿಖಾ ಸೆಲ್ ಎಂದು ಏನಾದರೂ ಮಾಡಿದ್ದೀರಿ. ನೀವು ತನಿಖಾ ಸೆಲ್ ಮಾಡಿದರೆ ಆದಾಯ ಹೆಚ್ಚು ಬರಲಿಕ್ಕೆ ಸಾಧ್ಯ ಎನ್ನುವುದು ನನ್ನ ಅಭಿಪ್ರಾಯ ಮತ್ತೆ ಎಲ್ಲಾ ಮಿತ್ರರು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಬೇಡಿಕೆ ಅಂದರೆ ಮಾಜಿ ಶಾಸಕರಿಗೆ ಪಾಸ್ ಕೊಡುವ ಬಗ್ಗೆ. ಏರ್ಪಾಡು ತಮ್ಮ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಅದು ಮಾಡಿದರೆ ದೊಡ್ಡದಾದ

ಶಾಶ್ವತವಾದ ಕೀರ್ತಿಗೆ ಪಾತ್ರರಾಗುತ್ತೀರಿ ಎಂದು ನನ್ನ ಅಭಿಪ್ರಾಯ. ಇನ್ನು ಒಂದು ವಿಚಾರ ಆರ್.ಟಿ.ಓ, ಆಫೀಸಿನಲ್ಲಿ, ಇನ್ನು ಆರ್.ಟಿ.ಓ. ಆಫೀಸ್‌ಗಳ ಹತ್ತಿರ ದಳ್ಳಾಳಿಗಳು ಬಹಳ ಜಾಸ್ತಿ ಇದ್ದಾರೆ ಬಹುಶಃ ಈಗ ಕಡಿಮೆ ಆಗಿರಬಹುದು, ತಾವು ಏನೋ ಇಂಜಕ್ಷನ್ ಕೊಡುತ್ತಿದ್ದೀರಿ, ಆದರೂ ದಳ್ಳಾಳಿಗಳು ತುಂಬಿ ಹೋಗಿದ್ದಾರೆ, ದಳಾಳ್ಳಿಗಳ ಬಾಯಿಗೆ ಅನೇಕ ಜನ ಸೋತು ಹೋಗಿದ್ದಾರೆ. ಆದ್ದರಿಂದ ಈ ದಳ್ಳಾಳಿಗಳ ಕಾಟವನ್ನು ತಪ್ಪಿಸಲಿಕ್ಕೆ ಇನ್ನೂ ಹೆಚ್ಚಿನ ಮುಂತುವರ್ಜಿ ವಹಿಸಬೇಕು. ಅವರ ಮೇಲೆ ಅನೇಕ ದೂರುಗಳೂ ಇವೆ. ದಳ್ಳಾಳಿಗಳು ಬಹಳ ಭ್ರಷ್ಟಾಚಾರ ಮಾಡುತ್ತಿದ್ದಾರೆ ಕೆಲವು ಆರ್.ಟಿ.ಓ. ಆಫೀಸಿನವರು ಶಾಮೀಲು ಆಗಿದ್ದಾರೆ ಎಂದು ಹೇಳುತ್ತಾರೆ, ಇದನ್ನು ತಪ್ಪಿಸಬೇಕು. ಯಾಕೆಂದರೆ ನೀವು ಒಳ್ಳೆಯ ರೀತಿಯಲ್ಲಿ ಮುಂದೆ ಬರುತ್ತಿದ್ದೀರಿ, ಲಾಭವನ್ನೂ ಮಾಡುತ್ತಿದ್ದೀರಿ, ಒಳ್ಳೆಯ ರೀತಿಯಲ್ಲಿ ಮಾಡುತ್ತೀರಿ. ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ. ಇದು ಶಾಶ್ವತ ಆಗಬೇಕಾದರೆ ಭ್ರಷ್ಟಾಚಾರ ಹೋಗಬೇಕು. ಅನ್ಯಾಯ ತಪ್ಪಬೇಕು. ಆದಕ್ಕೂ ತಾವು ಇಂಜೆಕ್ಷನ್ ಕೊಡಬೇಕು. ಇನ್ನೂ ಒಂದು ವಿಚಾರ. ಬೆಂಗಳೂರಿಗೆ ಬಹಳ ದೂರದಿಂದ ಬಂದವರು, ನಾವು ನಮ್ಮ ಹತ್ತಿರ ಕಾರ್ ಆಗಲಿ, ಅಥವಾ ಟ್ಯಾಕ್ಸಿ ಆಗಲಿ, ಇರುವುದಿಲ್ಲ. ನಾವು ಪೇಟೆಗೆ ಹೋಗಿ ವಾಪಸ್ ಬರಬೇಕಾದರೆ ಶಾಸಕರ ಭವನಕ್ಕೆ ಬರಬೇಕೆಂದರೆ ಯಾರೂ ರಿಕ್ಷಾದವರು ಬರುವುದಿಲ್ಲ. ನಾನು ಕೆಲವು ಆಟೋ ರಿಕ್ಷಾಗಳ ನಂಬರ್ ಕೊಡುತ್ತೇನೆ, ನಾನು ಕರೆದಾಗ ಅವರು ಯಾರೂ ಬರಲಿಲ್ಲ ಆ ಆಟೋಗಳ ನಂಬರ್ ಈ ರೀತಿ ಇದೆ.—

ಎಂಇಡಿ : ೧೧೪, ಸಿಎಂ : ೨೨೨೫, ಎಂವೈಎ : ೯೭೬೮, ಎಂವೈಎ : ೨೯೮೮

ಎಂಇಡಿ : ೧೭೬೯, ಎಂಇಡಿ : ೫೦೭೩, ಎಂಇಡಿ : ೩೧೭೧,

ಎಂಇಡಿ : ೪೭೪೮, ಸಿಎಂ : ೧೩೨೬,

ಈ ಕೆಲವು ಆಟೋದವರು ನಾವು ಕರೆದ ಕಡೆಗೆ ಬರುವುದೇ ಇಲ್ಲ. ಆದ್ದರಿಂದ ತಾವು ಇದರ ಬಗ್ಗೆ ಕ್ರಮ ಕೈಕೊಳ್ಳಬೇಕು ?

ಶ್ರೀ ರಾಮಕೃಷ್ಣಹೆಗಡೆ.—ಇಂಥಾದ್ದನ್ನು ತಾವು ಇಲ್ಲಿ ಹೇಳುವುದು ಬೇಡ. ಈ ರೀತಿ ಇಲ್ಲಿ ಹೇಳುವುದರಿಂದ ಅದು ಶಾಸಕರ ಮೇಲೆ ತಪ್ಪು ಅಭಿಪ್ರಾಯವನ್ನು ಉಂಟು ಮಾಡುತ್ತದೆ,

ಶ್ರೀ ಪಟವರ್ಧನ ರತ್ನಾಕರ್.—ಮಾನ್ಯ ಸದಸ್ಯರು ವಾಸ್ತವಾಂಶ ಏನಿದೆ ಎಂಬುದನ್ನು ವಿವರಣೆ ಕೊಟ್ಟು ಹೇಳಿದ್ದಾರೆ. ಅವರು ಆಟೋ ನಂಬರ್‌ಗಳನ್ನೂ ಸಹ ಕೊಟ್ಟರು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಬಹಳ ಲಘುವಾಗಿ ನೋಡುವುದು ಸರಿಯಲ್ಲ.

ಶ್ರೀ ಪಿ, ಜಿ. ಆರ್. ಸಿಂಧ್ಯ.—ಜನವಾಣಿ ಕಾರ್ಯಕ್ರಮವನ್ನು ದಕ್ಷಿಣಕನ್ನಡ ಜಿಲ್ಲೆ ಮತ್ತು ಬೇರೆ ಜಿಲ್ಲೆಗಳಲ್ಲಿ ಮಾಡಿದ್ದೇವೆ. ಇದನ್ನು ಮತ್ತೆ ಮುಂದುವರಿಸಿಕೊಂಡು ಹೋಗಬೇಕೆಂದು ಸಲಹೆ ಮಾಡಿದ್ದಾರೆ. ಇದರಿಂದ ಜನರಿಗೆ ಉಪಯೋಗ ಆಗುವುದಾದರೆ ಮತ್ತೆ ಮುಂದುವರೆಸುತ್ತೇವೆ. ಇನ್ನೊಂದು ವಿಚಾರ ಎಂದರೆ ಬಹುತೇಕ ಲಕ್ಷುರಿ ಬಸ್‌ಗಳಲ್ಲಿ ಕಂಡಕ್ಟರ್‌ಗಳು ಇರುವುದಿಲ್ಲ. ಡ್ರೈವರ್‌ಗಳು ಮಾತ್ರ ಇರುವುದು. ಈಗ ಬೆಂಗಳೂರು ಮತ್ತು ಮೈಸೂರು ನಡುವೆ ಓಡಾಡುವ ತಡೆರಹಿತ ಬಸ್‌ಗಳಲ್ಲಿ ಕಂಡಕ್ಟರ್ಸ್ ಇರುವುದಿಲ್ಲ. ಮಾನ್ಯ ಸದಸ್ಯರು ಕೆಲವು ರೂಟ್‌ಗಳಲ್ಲಿ ಅಕ್ರಮಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಈ ರೂಟ್‌ಗಳ ಬಗ್ಗೆ ಅವರು ನನಗೆ ಬರೆದು ತಿಳಿಸಿದರೆ. ನಮ್ಮ ತನಿಖಾದಳದ ಮೂಲಕ ತನಿಖೆಯನ್ನು ಮಾಡಿಸುತ್ತೇನೆ. ಮತ್ತೆ ಮಾನ್ಯ ಸದಸ್ಯರು ಆಟೋರಿಕ್ಷಾದವರ ಹಾವಳಿ ಬಗ್ಗೆ ಹೇಳಿದ್ದಾರೆ. ಅವರು ಕರೆದ ಕಡೆಗೆ ಬರದಿದ್ದಾಗ, ಅದನ್ನು ಆರ್.ಟಿ.ಓ. ಅವರಿಗೆ ತಿಳಿಸುವುದು ಕಷ್ಟವಾಗಬಹುದು, ಅಂತಹ ಸಂದರ್ಭದಲ್ಲಿ ಅದನ್ನು ಪಕ್ಕದ ಪೋಲೀಸ್ ಸ್ಟೇಷನ್‌ಗೆ ದೂರು ಕೊಟ್ಟರೆ ಅವರು ತಕ್ಷಣವೇ ಅವರ ಮೇಲೆ ಕ್ರಮ ಕೈಕೊಳ್ಳುತ್ತಾರೆ. ಆಟೋರಿಕ್ಷಾ ಚಾಲಕರ ಪೈಕಿ ಒಳ್ಳೆಯವರೂ ಸಹ ಇದ್ದಾರೆ. ಆದರೆ ಕೆಲವರು ಕೆಟ್ಟದ್ದಾಗಿ ನಡೆದುಕೊಳ್ಳುತ್ತಾರೆ, ಈಗಾಗಲೇ ನಾವು ಕರೆದ ಕಡೆಗೆ ಬರದಿದ್ದವರ ಬಗ್ಗೆ ಸಾಕಷ್ಟು ಶಿಸ್ತಿನ ಕ್ರಮ ಕೈಕೊಂಡಿದ್ದೇವೆ. ಮತ್ತೆ ಆರ್.ಟಿ.ಓ. ಕಛೇರಿಯಲ್ಲಿ ಈಗ ಅದಷ್ಟು ದಳ್ಳಾಳಿಗಳ ಕಾಟ ಕಡಿಮೆ ಆಗಿದೆ. ಈ ಹಿಂದಿನ ಪರಿಸ್ಥಿತಿಗೆ ಹೋಲಿಕೆ ಮಾಡಿದರೆ ಈಗ ಎಷ್ಟೋ ಸುಧಾರಣೆ ಆಗಿದೆ. ಆದರೂ ಸಹ ಇನ್ನೂ ಹೆಚ್ಚಿನ ಕೆಲಸ ಮಾಡಬೇಕಾಗಿದೆ. ನಮ್ಮ ಈ ಕಛೇರಿಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿದರೆ ಈ ದಳ್ಳಾಳಿಗಳ ಕಾಟವನ್ನು ನಿಲ್ಲಿಸಬಹುದೆಂದು ಈಗಾಗಲೇ ಕೆಲವು ಮಾರ್ಪಾಡುಗಳನ್ನು ಮಾಡಿದ್ದೇವೆ. ಇದರ ಜೊತೆಗೆ ಇನ್ನೂ ಕೆಲವು ಬದಲಾವಣೆಗಳನ್ನು ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಬಿ.ಜಿ, ಕೊಟ್ರಪ್ಪ.—ಹರಿಹರದಲ್ಲಿ ಈಗ ಒಳ್ಳೆಯ ಬಸ್‌ಸ್ಟ್ಯಾಂಡ್ ಇಲ್ಲ. ಅಲ್ಲಿಗೆ ನಾಲ್ಕು ಕಡೆಗಳಿಂದ ಬಸ್‌ಗಳು ಬಂದು ಹೋಗುತ್ತಿವೆ. ಪ್ರಯಾಣಿಕರಿಗೆ ಅನುಕೂಲವಾದಂಥ ಬಸ್‌ಸ್ಟ್ಯಾಂಡ್ ಇಲ್ಲದ ಕಾರಣ ಎಷ್ಟು ತೊಂದರೆ ಆಗಿದೆ ಎಂಬುದು ತಮಗೂ ಗೊತ್ತಿದೆ, ಮತ್ತು ಮಾನ್ಯ ಮಿತ್ರರಿಗೂ ಗೊತ್ತಿದೆ. ಇದರ ಬಗ್ಗೆ ನಾನು ಇಲ್ಲಿ ಮೊದಲಿನಿಂದಲೂ ಹೇಳುತ್ತಿದ್ದೇನೆ. ಆದರೂ ತಾವು ಕ್ರಮ ತೆಗೆದುಕೊಂಡಿಲ್ಲ. ಇದೇ ಆಗಸ್ಟ್ ೧೫ ರಂದು ತಾವು ದಾವಣಗೆರೆ ಬಸ್‌ಸ್ಟ್ಯಾಂಡ್ ಅನ್ನು ಓಪನ್ ಮಾಡಲು ಬರುವವರಿದ್ದೀರಿ. ಈಗ ಹರಿಹರದ ಬಸ್‌ಸ್ಟ್ಯಾಂಡ್ ಕೆಲಸಕ್ಕೂ ತಾವು ಫೌಂಡೇಷನ್ ಸ್ಟೋನ್ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಬಹಳ ಕಡಿಮೆ ಮಂದಿ ಇದ್ದಾರೆ. ಅವರು ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಬೆಂಗಳೂರಿಗೆ ಉಚಿತವಾಗಿ ಬರಲು ಅವಕಾಶ ಕೊಡಲು ಸಾಧ್ಯವಾಗದಿದ್ದರೆ ಅವರವರ ಜಿಲ್ಲೆಗಳಲ್ಲಿಯಾದರೂ ಉಚಿತವಾಗಿ ತಿರುಗಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಹರಿಹರದಲ್ಲಿ ಬಸ್‌ಸ್ಟ್ಯಾಂಡ್ ಮಾತ್ರವಲ್ಲ, ಬಸ್ ಡಿಪೋವನ್ನು ಸಹ ಪ್ರಾರಂಭ ಮಾಡುವಂತಹ ಕಾರ್ಯಕ್ರಮ ನಮ್ಮ ಸಾರಿಗೆ ಸಂಸ್ಥೆಗಿದೆ. ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಕೊಟ್ರಪ್ಪನವರು ಇದಕ್ಕೆ ಸಂಬಂಧಪಟ್ಟಂತೆ ನಮಗೆ ಜಾಗವನ್ನು ಕೊಡಿಸಲು ಸಹಕಾರ ನೀಡಿದರೆ ಈ ವರ್ಷವೇ ಕಾರ್ಯಕ್ರಮ ಕೈಕೊಳ್ಳುವುದರ ಜೊತೆಗೆ ಕೆಲಸವನ್ನು ಸಹ ಪ್ರಾರಂಭ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ. ಮತ್ತೆ ಸ್ವಾತಂತ್ರ್ಯ ಹೋರಾಟಗಾರರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ಕೊಡುವ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸಾರಿಗೆ ಸಂಸ್ಥೆ ಬಸ್‌ಗಳು ಶುಚಿ ಆಗಿರುವುದಿಲ್ಲ. ಬಹಳ ಗಲೀಜಾಗಿರುತ್ತವೆ. ಇಂತಹ ಬಸ್‌ಗಳಲ್ಲಿ ಪ್ರಯಾಣ ಮಾಡಿದವರು ತಮ್ಮ ಬಟ್ಟೆಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಬಸ್‌ಗಳನ್ನು ಶುಚಿಯಾಗಿ ಇಡಬೇಕು. ಮತ್ತೆ ಗುಬ್ಬಿಯಲ್ಲಿ ಒಂದು ಬಸ್‌ಸ್ಟ್ಯಾಂಡ್ ಬೇಕು ಎಂದು ನಾನು ಕಳೆದ ಎರಡು ವರ್ಷಗಳಿಂದ ಕೇಳುತ್ತಿದ್ದೇನೆ. ಆದರೆ ಇನ್ನೂ ಕೊಟ್ಟಿಲ್ಲ. ಗಾಳಿ ಮಳೆ ಬಂದರೆ ಪ್ರಯಾಣಿಕರು ಬಹಳ ತೊಂದರೆ ಅನುಭವಿಸಬೇಕಾಗಿರುವುದನ್ನು ತಾವು ಸಹ ನೋಡಿದ್ದೀರಿ. ಆದ್ದರಿಂದ ಇದರ ಬಗ್ಗೆ ತಾವು ಈಗ ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ,—ಬಸ್ಸುಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸ್ವಚ್ಛವಾಗಿ ಇಡಲಿಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಈ ವರ್ಷ ನಾವು ಹೊಸದಾಗಿ ಪ್ರತಿಯೊಂದು ಬಸ್ಸನ್ನೂ ಕನಿಷ್ಟಪಕ್ಷ ಒಂದು ಸಾರಿ ಬಕೀಟ್ ವಾಷಿಂಗ್ ಮೂಲಕ ತೊಳೆಯಬೇಕು ಎಂದು ನಿರ್ಧಾರ ಮಾಡಿದ್ದೇವೆ, ಮತ್ತೆ ಗುಬ್ಬಿ ಬಸ್ ನಿಲ್ದಾಣದ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಕುಮಾರಗೌಡ ಎ. ಪಾಟೀಲ್.—ಬಸವನ ಬಾಗೇವಾಡಿಯಲ್ಲಿ ಮಿನಿ ಬಸ್ ಡಿಪೋ ಮಾಡಲಿಕ್ಕೆ ಸೂಚನೆ ಮಾಡಿತ್ತು, ಅದು ಯಾವ ಹಂತದಲ್ಲಿದೆ ? ಮತ್ತೆ ಕೆಲವೊಂದು ಡಿವಿಜನ್‌ಗಳು ಪದೇ ಪದೇ ನಷ್ಟವನ್ನು ಅನುಭವಿಸುತ್ತಾ ಇವೆ, ಅವು ಏಕೆ ನಷ್ಟವನ್ನು ಅನುಭವಿಸುತ್ತಾ ಇವೆ. ಮತ್ತೆ ಕೆಲವು ಲಾಭದಲ್ಲಿವೆ, ಬೆಳಗಾಂ ಡಿವಿಜನ್, ಬಿಜಾಪುರ ಡಿವಿಜನ್, ಗುಲ್ಬರ್ಗ ಡಿವಿಜನ್. ಇತರೆ ಡಿವಿಜನ್‌ಗಳು ನಷ್ಟವನ್ನು ಅನುಭವಿಸುತ್ತಿವೆ. ಇದಕ್ಕೆ ಕಾರಣಗಳೇನು. ಇದನ್ನು ನಿವಾರಿಸಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸಬೇಕು. ಆಮೇಲೆ ರಾಷ್ಟ್ರೀಕರಣದಲ್ಲಿ ಇನ್ನೂ ೧೨ ಜಿಲ್ಲೆಗಳು ಉಳಿದಿವೆ ಎಂದುಹೇಳುತ್ತಾರೆ. ಅವನ್ನು ಯಾವಾಗ ರಾಷ್ಟ್ರೀಕರಣ ಮಾಡುತ್ತೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಕರಣ ೧೨ ಜಿಲ್ಲೆಗಳಲ್ಲಿ ಉಳಿದಿರತಕ್ಕಂಥಾದ್ದು ಭಾಗಶಃ ಮಾತ್ರ. ಹಂತಹಂತವಾಗಿ ಮಾಡತಕ್ಕಂಥ ಕಾರ್ಯಕ್ರಮ ಸರ್ಕಾರದ ಮುಂದೆ ಇದೆ. ಈ ವರ್ಷ ೨ ಜಿಲ್ಲೆಗಳಲ್ಲಿ ಮಾಡಬೇಕು ಎನ್ನುವ ನಿರ್ಧಾರವೂ ಸಹಿತ ಇದೆ. ಮತ್ತೆ ಕೆಲವು ಡಿವಿಜನ್‌ಗಳು ಡಿಪೋಗಳು ಲಾಭ ಮಾಡುತ್ತಾ ಇವೆ, ಮತ್ತೆ ಕೆಲವು ನಷ್ಟದಲ್ಲಿವೆ ಇದಕ್ಕೆ ಕಾರಣವೇನು ಎಂದು ಕೇಳಿದ್ದಾರೆ. ಇದು ಬಹಳ ದೊಡ್ಡ ವಿಚಾರ, ಅದನ್ನು ಚರ್ಚೆ ಮಾಡಬೇಕಾಗುತ್ತದೆ. ನಷ್ಟದಲ್ಲಿರತಕ್ಕಂಥ ಡಿಪೋಗಳು, ಡಿವಿಜನ್‌ಗಳು ಏನಿವೆ ಅಲ್ಲಿರತಕ್ಕಂಥ ಅಧಿಕಾರಿಗಳು ಅಥವಾ ಅವರಿಗೆ ಇರತಕ್ಕಂಥ ಕೊರತೆ, ಇವುಗಳನ್ನು ಬಗೆಹರಿಸಲಿಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಮಂತ್ರಿವರ್ಯರು ಕಳೆದ ತಿಂಗಳು ಮಡಿಕೇರಿಗೆ ಬಂದಾಗ ಕೊಡಗು ಮತ್ತು ಸೌತ್ ಕೆನರಾ ಜಿಲ್ಲೆಯನ್ನು ರಾಷ್ಟ್ರೀಕರಣ ಮಾಡುತ್ತೇವೆ ಎಂದು ಹೇಳಿ ಬಂದಿದ್ದಾರೆ. ಆದರೆ ನನಗೆ ಭಯ ಏನೆಂದರೆ, ಕೊಡಗಿನಲ್ಲಿ ಬಹಳಷ್ಟು ರಸ್ತೆಗಳು ಸರ್ಕಾರಿ ಬಸ್ ಓಡತಕ್ಕಂಥ ಸ್ಟಾಂಡರ್ಡ್‌ನಲ್ಲಿಲ್ಲ. ಕೆಲವು ರೂಟ್‌ಗಳಲ್ಲಿ ಸರ್ಕಾರಿ ಬಸ್ ಓಡಿಸುತ್ತಾರೆ. ಎರಡು ದಿವಸ, ೩ ದಿವಸ ಓಡಿಸಿ ವಾಪಸ್ ಬರುತ್ತಾರೆ, ಅಲ್ಲಿ ರಸ್ತೆಗಳು ಚೆನ್ನಾಗಿಲ್ಲ, ಓಡಿಸುವುದಕ್ಕೆ ಆಗುವುದಿಲ್ಲ ಎಂದು. ಸುಮಾರು ನೂರಕ್ಕೆ ೬೦ ರಸ್ತೆಗಳು ಅಂಥವೇ ಇರುವುದು ಆ ರಸ್ತೆಗಳಲ್ಲಿ ಪ್ರೈವೇಟ್‌ನವರು ಕಷ್ಟಪಟ್ಟು ನಷ್ಟವಾದರೂ ಪರವಾಗಿಲ್ಲ ಎಂದು ಓಡಿಸುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಅದು ರಾಷ್ಟ್ರೀಕರಣ ಆಗಿಬಿಟ್ಟರೆ ಆ ರೂಟ್‌ನಲ್ಲಿ ಈ ಬಸ್ ಹೋಗುವುದಿಲ್ಲ. ಇವರ ಬಸ್ ಹೋಗಬೇಕಾದರೆ ರೂಟನ್ನು ಸರ್ಟಿಫೈ ಮಾಡಬೇಕು, ಅದೆಲ್ಲಾ ಬಹಳಷ್ಟು ನಿಯಮ ಇದೆ, ಅದರ ಪ್ರಕಾರ ಆ ರೂಟ್‌ನಲ್ಲಿ ಯಾವುದೂ ಹೋಗುವುದಿಲ್ಲ ಅದನ್ನು ಮಾಡುವುದಕ್ಕೆ ಬದಲು ಈ ರಸ್ತೆಗಳನ್ನು ನೀವು ಚೆನ್ನಾಗಿ ಮಾಡಿ, ಬಸ್ ಓಡಿಸತಕ್ಕಂಥ ವ್ಯವಸ್ಥೆ ಮಾಡಬೇಕು, ಅದು ಆಗದಿದ್ದ ಪಕ್ಷದಲ್ಲಿ ಒಳ್ಳೆಯ ರಸ್ತೆ ಆಗುವವರೆಗೆ ಕೆಲವು ಇಂಟೀರಿಯರ್ ಹೋಗತಕ್ಕಂಥ ಬಸ್‌ಗಳನ್ನು ನೀವು ರಾಷ್ಟ್ರೀಕರಣ ಮಾಡಕೂಡದು ಎಂದು ನಿಮ್ಮನ್ನು ಕೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನಾನು ಇತ್ತೀಚೆಗೆ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಅಂತಹ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಆದರಿಂದ ಉಳಿದಿರತಕ್ಕ ಪ್ರಶ್ನೆಗಳಿಗೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಕಳೆದ ಸಾರಿ ಈ ಸಾರಿಗೆ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟಹಾಗೆ ಚರ್ಚೆ ನಡೆದು ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇದ್ದಂತಹ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯನ್ನೂ ಕೂಡ ಹಿಂದಿನ ಸಾಲಿನಲ್ಲಿ ರಾಷ್ಟ್ರೀಕರಣ ಮಾಡುತ್ತೇವೆ ಎನ್ನತಕ್ಕಂಥ ವಾಗ್ದಾನ ಕೊಟ್ಟಿದ್ದರು, ಇದುವರೆಗೆ ಅದೂ ಕೂಡ ಆಗಲಿಲ್ಲ. ಅದಕ್ಕೆ ಏನಾದರೂ ಎಡರು ತೊಡರುಗಳು ಇದ್ದರೆ ಅದು ಏನು ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಮತ್ತು ಈ ವರ್ಷವಾದರೂ ಕೂಡ ಆ ಕಾರ್ಯವನ್ನು ಕೈಗೆತ್ತಿಕೊಳ್ಳತಕ್ಕಂಥ ಉದ್ದೇಶ ಇದೆಯೋ? ಎರಡನೆಯದು ಏನೆಂದರೆ, ಈಗಾಗಲೇ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ನಾನು ಅದನು ಪುನರುಚ್ಚಾರ ಮಾಡಬೇಕಾಗಿದೆ. ಮಂಡ್ಯ ಜಿಲ್ಲೆಗೆ ಸೀಮಿತವಾಗಿ ಹೇಳಬೇಕಾದರೆ ಮಂಡ್ಯ ನಗರ ಮತ್ತು ತಾಲ್ಲೂಕು ಕೇಂದ್ರದಲ್ಲಿ ಪ್ರಯಾಣಿಕರು ಸುಮಾರು ೧೦–೧೫ ಮೈಲಿ ಫಾಸಲೆ ಹೆಚ್ಚಾಗಿ ಬರುವುದರಿಂದ. ಈ ಪ್ರಯಾಣಿಕರ ಒತ್ತಡ ದಿನೇ ದಿನೇ ಹೆಚ್ಚಾಗುತ್ತಾ ಇರುವುದರಿಂದ ಸಿಟಿ ಬಸ್‌ಗಳ ರೂಪದಲ್ಲಿ ಅಥವಾ ಮಿನಿ ಬಸ್‌ಗಳನ್ನು ಹಾಕಿ ಆ ಒತ್ತಡವನ್ನು ಕಡಿಮೆ ಮಾಡುವುದಕ್ಕೆ ಪ್ರಯತ ಮಾಡಬೇಕು. ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿರಬಹುದು ಜನರು ಬಸ್‌ನ ಟಾಪ್ ಮೇಲೆ ಕುಳಿತುಕೊಂಡು ಬರತಕ್ಕಂಥಾದ್ದು ಬಹಳ ಹೆಚ್ಚಾಗಿದೆ. ಇದು ಅಪರಾಧಗಳನ್ನು ತಪ್ಪಿಸುವ ದೃಷ್ಟಿಯಿಂದಲೂ ಕೂಡ ತೀರ ಅವಶ್ಯಕವಾಗಿರುವುದರಿಂದ, ಹೆಚ್ಚಾಗಿರುವ ಪ್ರಯಾಣಿಕರ ಒತ್ತಡವನ್ನು ಕಡಿಮೆ ಮಾಡುವುದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಆಮೇಲೆ ನಾಗಮಂಗಲಕ್ಕೆ ಸಂಬಂಧಪಟ್ಟ ಹಾಗೆ ಒಂದು ಡಿಪೋ ಕೊಡತಕ್ಕಂಥ ವಿಚಾರದಲ್ಲಿ ಈಗಾಗಲೇ ಅನುಕೂಲಕರವಾದ ವರದಿ ಸರ್ಕಾರಕ್ಕೆ ಕೊಟ್ಟಿನೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯ ರಾಷ್ಟ್ರೀಕರಣದ ಬಗ್ಗೆ ಕಳೆದ ಸಾರಿ ಸದನದಲ್ಲಿ ಹೇಳಿದ್ದು ನಿಜ. ನಾವು ಈಗಾಗಲೇ ಸಾರಿಗೆ ಸಂಸ್ಥೆಯಿಂದ ಘೋಷಣೆ ಮಾಡಿರತಕ್ಕ ಮೈಸೂರು ಜಿಲ್ಲೆಯ ರಾಷ್ಟ್ರೀಕರಣದಲ್ಲಿ ಅರ್ಧ ಭಾಗ ಮಂಡ್ಯ ಕೂಡಾ ಸೇರಿದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಮಂಡ್ಯ ನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿರತಕ್ಕ ಇತರೆ ದೊಡ್ಡ ಪಟ್ಟಣಗಳಲ್ಲಿ ಪ್ರಯಾಣಿಕರ ಒತ್ತಡ ಜಾಸ್ತಿಯಾಗಿದೆ, ೨ ವರ್ಷಗಳಹಿಂದೆ ಜಿಲ್ಲೆಯ ಶಾಸಕರು, ಜಿಲ್ಲೆಯ ಪಾರ್ಲಿಮೆಂಟ್ ಸದಸ್ಯರನ್ನು ಕರೆಸಿ ಸಾರಿಗೆ ಇಲಾಖೆಯ ಡಿ.ಜಿ ಪಿ. ಹಾಗೂ ಹೋಮ್ ಕಮಿಷನರ್ ಅಲ್ಲಿಗೆ ಹೋಗಿ ಸಭೆ ಮಾಡಿ ಅಲ್ಲಿನ ಪ್ರೈವೇಟ್ ಆಪರೇಟರ್ಸ್‌ನೂ ಕರೆಸಿ ಇದು ರಾಷ್ಟ್ರೀಕರಣ ಅದೇ ಇರುವ ಭಾಗವಾಗಿರುವುದರಿಂದ ಅವರಿಗೂ ನಮಗೂ ಹೊಂದಾಣಿಕೆ ಆಗಿದ್ದು ಬಸ್‌ಗಳನ್ನು ಓಡಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದಾದ ನಂತರ ಈಗ ಹೆಚ್ಚು ಆಗಿರತಕ್ಕ ಪ್ರಯಾಣಿಕರ ಒತ್ತಡಕ್ಕೆ ಸಮಾನವಾಗಿ ಬಸ್‌ಗಳನ್ನು ಹೆಚ್ಚು ಮಾಡಿಲ್ಲ. ಕಾರಣ ಏನೆಂದರೆ ಇದು ರಾಷ್ಟ್ರೀಕರಣ ಆಗಿಲ್ಲ. ನಾವೇನಾದರೂ ಹೆಚ್ಚು ಬಸ್‌ಗಳನ್ನು ಹಾಕಿದರೆ ಅವರು ಕೋರ್ಟಿಗೆ ಹೋಗುತ್ತಾರೆ. ಮುಂದಿನ ತಿಂಗಳಲ್ಲಿ ಅಲ್ಲಿ ಜಿಲ್ಲಾಧಿಕಾರಿಗಳ ಜೊತೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಅಲ್ಲಿನ ಪೋಲೀಸ್ ಅಧಿಕಾರಿಗಳ ಜೊತೆ ಈ ಬಗ್ಗೆ ಚರ್ಚೆ ಮಾಡಲಾಗುತ್ತದೆ. ಅವಶ್ಯಕ ಬಿದ್ದರೆ ನಾನೂ ಕೂಡಾ ಹೋಗುತ್ತೇನೆ. ಇನ್ನು ನಾಗಮಂಗಲ ಬಸ್ ಡಿಪೋ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಈಗ ಇರತಕ್ಕ ಸ್ಟೇಜ್ ರೇಟ್ ಹಳೇ ಕಾಲದ್ದಾಗಿದ್ದು ೨ ಕಿ.ಮೀ. ನಿಂದ ೧೦ ಕಿ.ಮೀ. ವರೆಗೂ ಒಂದೇ ರೇಟ್ ಇರುವುದರಿಂದ ಮಧ್ಯದಲ್ಲಿ ಹತ್ತಿ ಇಳಿಯುವವರಿಗೆ ರೇಟ್ ಹೆಚ್ಚು ಇರುತ್ತದೆ, ಆದ್ದರಿಂದ ಇದನ್ನು ಬದಲಾವಣೆ ಮಾಡಬೇಕಾಗಿದೆ ಎಂದು ಮಾನ್ಯ ಮಂತ್ರಿಗಳು ೨ ವರ್ಷಗಳ ಹಿಂದೆಯೇ ಹೇಳಿದ್ದರು. ಅದಷ್ಟು ಮಟ್ಟಿಗೆ ೧೯೭೭–೭೮ರಲ್ಲೇ ಇದನ್ನು ಮುಗಿಸುತ್ತೇನೆಂದು ಸಹಾ ಹೇಳಿದ್ದರು. ಆದರೆ ಸರ್ಕಾರ ಈ ಬಗ್ಗೆ ಯೋಜನೆಯನ್ನೇ ಕೈಗೊಂಡಿಲ್ಲ. ಎರಡನೆಯದಾಗಿ ಶಹಾಬಾದ್ ಬಸ್ ನಿಲ್ದಾಣಕ್ಕೆ ಷೆಡ್ ವ್ಯವಸ್ಥೆ ಇಲ್ಲ, ಅಲ್ಲಿ ಕುಳಿತುಕೊಳ್ಳುವುದಕ್ಕೆ ಸ್ಥಳಾವಕಾಶ ಇಲ್ಲ. ಬಸ್ ನಿಲ್ದಾಣವಲ್ಲಿ ಅಸ್‌ಬೆಸ್ಟ್ ಶೀಟ್ ಹಾಕುವುದಕ್ಕೆ ಎರಡೂವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ, ಇದನ್ನು ಒಂದು ವರ್ಷದಲ್ಲಿ ಹಾಕಿಸಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಅದು ಏನಾಯಿತು ? ಇವತ್ತು ಬೆಂಗಳೂರಿನಿಂದ ನಮ್ಮ ಭಾಗಕ್ಕೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಬೆಂಗಳೂರಿನಿಂದ ಬಳ್ಳಾರಿವರೆಗೆ ಮಾತ್ರ ರಸ್ತೆಯ ಎರಡೂ ಪಕ್ಕದಲ್ಲಿ ರಸ್ತೆಯ ತಿರುವು, ಹಂಪ್ಸ್ ಹಾಗೂ ಇತರ ವಿಷಯಗಳ ಬಗ್ಗೆ ಲೋಡ್ ಸಿಗ್ನಲ್ಸ್ ಕಾಣಬರುತ್ತಿವೆ. ಬಳ್ಳಾರಿಯಿಂದ ಮುಂದೆ

ರಾಯಚೂರು, ಗುಲ್ಬರ್ಗ, ಬೀದರ್ ಭಾಗಗಳ ರಸ್ತೆಯಲ್ಲಿ ಈ ಫಲಕಗಳು ಕಾಣುವುದಿಲ್ಲ. ಹಿಂದುಳಿದ ಜಿಲ್ಲೆಗಳು ಎಂದು ಇದರಲ್ಲೂ ಕೂಡಾ ತಾರತಮ್ಯ ಏಕೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ —ಅಧ್ಯಕ್ಷರೇ, ಗುಲ್ಬರ್ಗಾ, ಬಳ್ಳಾರಿ, ಬೀದರ್, ರಾಯಚೂರು ಕಡೆಗಳಲ್ಲಿ ಏನು ರೇಡಿಯಂ ಸೈನ್ ಬೋರ್ಡ್‌ಗಳು ಇಲ್ಲಾ ಎಂದು ಹೇಳಿದ್ದಾರೆ ಆ ಬಗ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚನೆ ಕೊಡುತ್ತೇನೆ. ಮತ್ತೆ ಶಹಬಾದ್ ಬಸ್ ನಿಲ್ದಾಣದಲ್ಲಿ ಮೇಲೆ ಕವರ್ ಮಾಡುವ ಬಗ್ಗೆ ಹಾಗೂ ಕುರ್ಚಿ ವ್ಯವಸ್ಥೆ ಮಾಡಬೇಕೆಂದಿದ್ದಾರೆ ಅದನ್ನು ಮಾಡಿಸೋಣ. ಇನ್ನು ಸ್ಟೇಜ್ ರಿವಿಜನ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ನಾನು ಪ್ರಾಸ್ತಾವಿಕವಾಗಿ ಮಾತನಾಡತಕ್ಕ ಸಮಯದಲ್ಲೇ ಹೇಳಿದೆ. ಇಡೀ ರಾಜ್ಯದಲ್ಲಿ ಇದನ್ನು ಮಾಡಬೇಕೆಂದರೆ ಸಿಕ್ಕಾಪಟ್ಟೆ ಕನ್‌ಫ್ಯೂಸ್ ಆಗುತ್ತದೆ. ಇದಕ್ಕಾಗಿ ಕಳೆದ ಸಾರಿ ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರು ಏನು ಒಂದು ಸಲಹೆ ಕೊಟ್ಟರು ಎಂದರೆ ಎಲ್ಲಿ ತಾರತಮ್ಯ ಇದೆ ಅಂತಹ ಕಡೆ ಸ್ಟೇಜ್ ಬ್ರ್ಯಾಕೆಟ್ ಮಾಡೋಣ ಎಂದು ಹೇಳಿದ್ದಾರೆ. ಇದನ್ನು ನಾವು ಬಹಳ ಕಡೆ ಮಾಡಿದ್ದೇವೆ. ಇನ್ನೂ ಎಲ್ಲಾದರೂ ಇಂತಹ ತಾರತಮ್ಯ ಆಗಿದ್ದರೆ ಅಲ್ಲಿ ಬ್ರ್ಯಾಕೆಟ್ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಂಡು ಆ ಸಮಸ್ಯೆಯನ್ನು ಬಗೆಹರಿಸುತ್ತೇವೆ,

ಶ್ರೀ ಬಾಬುರೆಡ್ಡಿ ವಿ, ತುಂಗಳ್.— ಅಧ್ಯಕ್ಷರೇ, ಕರ್ನಾಟಕ ರಸ್ತೆ ಸಾರಿಗೆ ಸಾರಿಗೆ ಸಂಸ್ಥೆಯ ಬಿಜಾಪುರ ವಿಭಾಗ ಕಳೆದ ೧೨ ವರ್ಷಗಳಿಂದಲೂ ಆದಾಯದಲ್ಲಿ ಪ್ರಥಮವಾಗಿದೆ, ಆದಾಯದಲ್ಲಿ ಈ ಜಿಲ್ಲೆ ಪ್ರಥಮವಾಗಿದ್ದರೂ ಬಿಜಾಪುರ ಜಿಲ್ಲೆಗೆ ಸಿಗಬೇಕಾದ ಸೌಕರ್ಯಗಳು ಎಂದರೆ ಹೆಚ್ಚಿನ ಬಸ್‌ಗಳನ್ನು ಏನು ಕೊಡಬೇಕೋ ಅದನ್ನು ಹಾಗೂ ಹೆಚ್ಚು ಬಸ್ ಸ್ಟ್ಯಾಂಡ್‌ಗಳನ್ನು ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಎರಡನೆಯದಾಗಿ ಬೆಂಗಳೂರಿನಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ಕಿಂಕೋ ಸಂಸ್ಥೆಯನ್ನು ರಸ್ತೆ ಸಾರಿಗೆ ಸಂಸ್ಥೆಗೆ ವಿಲೀನ ಮಾಡಿ ರಸ್ತೆ ಸಾರಿಗೆ ಸಂಸ್ಥೆ ನೌಕರರಿಗೆ ಏನು ಸೌಲಭ್ಯಗಳನ್ನು ಕೊಡುತ್ತಿದ್ದೀರೋ ಅದೇ ಸೌಲಭ್ಯವನ್ನು ಈ ಸಂಸ್ಥೆಯ ನೌಕರರಿಗೂ ಕೊಡಬೇಕು. ಈ ಬಗ್ಗೆ ಒಂದು ವರ್ಷದ ಹಿಂದೆಯೇ ಸಾರಿಗೆ ಮಂತ್ರಿಗಳು ಭರವಸೆ ಕೊಟ್ಟಿದ್ದರೂ ಅದು ಇನ್ನೂ ಕೂಡಾ ಅಧಿಕೃತವಾಗಿ ಜಾರಿಗೆ ಬಂದಿಲ್ಲ. ಇನ್ನು ಬಿಜಾಪುರ, ಬೆಳಗಾಂ ಕಡೆಯಿಂದ ಬೆಂಗಳೂರಿಗೆ ಸೂಪರ್ ಡಿಲಕ್ಸ್ ಎಂದರೆ ಸುವಿಹಾರಿ ಬಸ್‌ಗಳಲ್ಲಿ ಬರಬೇಕಾದರೆ ೧೩ ರಿಂದ ೧೪ ಗಂಟೆಗಳು ಆಗುತ್ತದೆ. ಹೆಸರಿಗೆ ಮಾತ್ರ ಇವು ಸುವಿಹಾರಿ ಬಸ್‌ಗಳಾದರೂ ಯಾವುದೇ ರೀತಿಯ ವ್ಯವಸ್ಥೆ ಅವುಗಳಲ್ಲಿ ಇಲ್ಲ. ಆದುದರಿಂದ ವಿಮಾನಗಳಲ್ಲಿ ಗಗನಸಖಿಯರು ಇರುವಂತೆ ನಮ್ಮ ಸೂಪರ್ ಡಿಲೆಕ್ಸ್ ಬಸ್‌ಗಳಲ್ಲೂ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಸದಸ್ಯರು ಹೇಳಿರತಕ್ಕ ಕೊನೇ ಸಲಹೆಯ ಬಗ್ಗೆ ಹೇಳುವುದಾದರೆ ಇದರ ಅಗತ್ಯ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಮತ್ತು ಎರಡನೆಯ ಸಲಹೆ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.— ಅಧ್ಯಕ್ಷರೆ, ಕೆಲವು ಟಿಕೆಟ್ ಮೇಲೆ ಲಾಟರಿ ಬರುತ್ತದೆಂದು ಬಹಳ ಮಂದಿ ಟಿಕೆಟ್ ತೆಗೆದುಕೊಂಡಿದ್ದಾರೆ. ತಾವು ಎಷ್ಟು ಕಲರ್ ಟಿ.ವಿ, ಕೊಟ್ಟಿದ್ದೀರಿ ತಿಳಿಸಬೇಕು. ಇನ್ನೊಂದಕ್ಕೆ ತಾವು ಪರಿಶೀಲನೆ ಮಾಡುತ್ತೇನೆಂದು ಹೇಳಬೇಡಿ. ನಮ್ಮ ಶಿರಸಿಯಿಂದ ಬೆಂಗಳೂರಿಗೆ ನಾಲ್ಕು ಬಸ್ಸುಗಳು ಬರುತ್ತವೆ. ಅದೇ ಸಿದ್ದಾಪುರದಿಂದ ಬೆಂಗಳೂರಿಗೆ ಬರುವ ಬಸ್ಸು ಒಂದೂ ಇಲ್ಲ. ನಾನು ಇದರ ಬಗ್ಗೆ ಐದಾರು ಸಾರಿ ಮಿನಿಸ್ಟರ್ ಹತ್ತಿರ ಹೇಳಿದೆ, ಅಧಿಕಾರಿಗಳ ಹತ್ತಿರ ಹೇಳಿದೆ ಸ್ವಾಮಿ. ತಾವು ಬಸ್ಸ ಕೊಡದೇ ಇದ್ದರೆ ಹೋಗಲಿ, ಐದು ಸೀಟುಗಳನ್ನಾದರೂ ಕೊಡಿ ಎಂದು ಹೇಳಿದ್ದೆ. ತಾವು ಈ ಒಂದು ಸೀಟು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು ಅನಂತರ ಇನ್ನೊಂದು ಹೇಳಬೇಕು. ಅಂದರೆ, ನಿಮ್ಮ ಚೆಕ್ಕಿಂಗ್ ಆಫೀಸರ್ ಏನಿದ್ದಾರೆ ಅವರು ಸೂಪರ್ ಡಿಲಕ್ಸ್ ಹೋಗುತ್ತಿರಬೇಕಾದರೆ ಎಲ್ಲಾದರೂ ಅಡವಿಯಲ್ಲಿ ಚೆಕ್ ಮಾಡಲಿಕ್ಕೆ ಬರುತ್ತಾರೆ, ದಯಮಾಡಿ ಅವರಿಗೆ ಊರಿನಲ್ಲಿ ಚೆಕ್ ಮಾಡಲಿಕ್ಕೆ ಹೇಳಿ ಏಕೆಂದರೆ ಅಡವಿಯಲ್ಲಿ ಯಾರಾದರೂ ಡಕಾಯಿತರು ಬಂದು ಪ್ರಯಾಣಿಕರನ್ನು ಹೊಡೆದುಹಾಕಿ ಇರುವುದನ್ನು ದೋಚಿಕೊಂಡು ಹೋಗಬಹುದು ಏಕೆಂದರೆ ಈಗಾಗಲೇ ಎರಡು ಮೂರು ಸಾರಿ ದರೋಡೆ ಆಗಿರುವ ಪ್ರಕರಣ ಇದೆ. ಬಸ್ಸ ಹತ್ತಿದ ತಕ್ಷಣ ಬಾಗಿಲು ಲಾಕ್ ಮಾಡಿಕೊಂಡು ಚೆಕ್ ಮಾಡಲಿ. ಬೇಡ ಎಂದು ಹೇಳುವುದಿಲ್ಲ. ಆದರೆ ರೋಡಿನಲ್ಲಿಯೇ ನಿಲ್ಲಿಸಿ

ಕೊಂಡುಂ ಚೆಕ್ ಮಾಡುವುದುಂ ಬೇಡ. ಆ ರೀತಿಯಂ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಈ ಲಾಟರಿ ಸಿಸ್ಟಮ್‌ನಲ್ಲಿ ಕೊಡುತ್ತಿರತಕ್ಕಂಥ ಬಹುಮಾನಗಳ ಬಗ್ಗೆ ಮರುಪರಿಶೀಲನೆ ಮಾಡಿ ಇನ್ನೂ ಹೆಚ್ಚಿನ ಬಹುಮಾನ ಕೊಡತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಈಗಾಗಲೇ ತಿಳಿಸಿದ್ದೇನೆ. ಇನ್ನು ಮಾನ್ಯ ಸದಸ್ಯರು ಸಿದ್ದಾಪುರದಿಂದ ಕೆಲವು ಸೀಟುಗಳನ್ನು ಮಾನ್ಯ ಶಾಸಕರಿಗೆ ಅಥವಾ ಪಾಸ್ ಇರತಕ್ಕವರಿಗೆ ರಿಸರ್ವೇಷನ್ ಮಾಡಿಕೊಡಬೇಕೆಂದು ಹೇಳಿದ್ದಾರೆ ಅದನ್ನು ಮಾಡಿಸಿಕೊಡೋಣ. ಇನ್ನು ಚೆಕ್ಕಿಂಗ್ ಸಿಸ್ಟಮ್ ಬಗ್ಗೆ ಹೇಳಿದ್ದಾರೆ, ಅದರ ಬಗ್ಗೆ ಅವರು ಹೇಳಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ.

ಶ್ರೀ ಆರ್. ರೋಷನ್‌ಬೇಗ್.— ಅಧ್ಯಕ್ಷರೆ, ಶಿವಾಜಿನಗರ ಬಸ್‌ಸ್ಟ್ಯಾಂಡ್ ಬಹಳ ಕಂಜೆಸ್ಟೆಡ್ ಆಗಿದೆ. ಬಿ.ಆರ್.ವಿ. ಥಿಯೇಟರ್ ಮುಂದೆ ಬಹಳ ಒಳ್ಳೆಯ ಜಾಗ ಇದೆ, ಶಿವಾಜಿ ನಗರ ಬಸ್ ನಿಲ್ದಾಣವನ್ನು ಅಲ್ಲಿಗೆ ಷಿಫ್ಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದನ್ನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ಶಿವಾಜಿನಗರ ಬಸ್‌ನಿಲ್ದಾಣವನ್ನು ಮಾನ್ಯ ಸದಸ್ಯರು ಹೇಳಿರತಕ್ಕಂಥ ಜಾಗಕ್ಕೆ ಬದಲಾವಣೆ ಮಾಡತಕ್ಕಂಥಾದ್ದು ಕಷ್ಟವಾಗುತ್ತದೆ, ಈಗ ಇರತಕ್ಕ ಬಸ್ ನಿಲ್ದಾಣವನ್ನು ಇನ್ನೂ ಹೆಚ್ಚು ಅಗಲ ಮಾಡಲಿಕ್ಕೆ ನಗರ ಕಾರ್ಪೊರೇಷನ್ನಿನವರು ಮಾನ್ಯ ಮುಖ್ಯ ಮಂತ್ರಿಗಳ ಸೂಚನೆಯ ಮೇರೆಗೆ ಇನ್ನೂ ಜಾಸ್ತಿ ಜಾಗವನ್ನು ಬಿಟ್ಟು ಕೊಡಲಿಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದನ್ನು ಇನ್ನೂ ಅಗಲ ಮಾಡುತ್ತೇವೆ.

ಶ್ರೀಮತಿ ಮುಕ್ತರುನ್ನೀಸಾ.—ಪ್ರಿಯಾರಿಟಿ ಬೇಸಿಸ್‌ನಲ್ಲಿ ೬ ಕ್ಯಾಟಗರೀಸ್‌ಗೆ ೨೦೦ ರಿಕ್ಷಾ ಅಲಾಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ೬ ಕ್ಯಾಟಗರೀಸ್‌ನಲ್ಲಿ ೫ ಕ್ಯಾಟಗರೀಸ್ ಏನು ಇವೆ ಅಂದರೆ ೧ ಕೋ–ಆಪರೇಟೀವ್ ಸೊಸೈಟಿ, ೨ ಅಸೋಸಿಯೇಷನ್, ೩ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ೪ ಎಜುಕೇಟೆಡ್ ಅನ್ ಎಂಪ್ಲಾಯೀಸ್, ೫ ರೀಪ್ಲೇಸ್‌ಮೆಂಟ್ ಆಫ್ ಓಲ್ಡ್ ವೆಹಿಕಲ್ಸ್ ಈ ೫ ಕ್ಯಾಟಗರೀಸ್ ತಾವು ಬರೆದಿದ್ದೀರಿ. ಇನ್ನು ೬ನೇ ಕ್ಯಾಟಗರಿ ಅದರ್ಸ್ ಎಂದು ಇದೆ. ಅದರ್ಸ್ ಅಂದರೆ ಯಾವ ಕ್ಯಾಟಗರಿ.'' ಲೇಡಿಸ್, ಗೀಡೀಸ್‌ಗೆ ಕೊಡುತ್ತೀರಾ? ಇನ್ನೊಂದು ಮಾತು ಅಂದರೆ ಇವರು ಮೈನಾರಿಟೀಸ್ ಎಂದು ತಾವು ಮುಂದೆ ಆದರೂ ಇನ್‌ಕ್ಲೂಡ್ ಮಾಡಬೇಕು. ಈಗ ೫ ಕ್ಯಾಟಗರೀಸ್ ತಾವು ಮೆನ್‌ಷನ್ ಮಾಡಿದಿದ್ದೀರಿ. ಅದರ್ಸ್ ಅಂದರೆ ಯಾವ ಕ್ಯಾಟಗರಿ ಎಂದು ತಿಳಿಸಬೇಕು. ನನ್ನ ಇನ್ನೊಂದು ಸಲಹೆ ಏನೆಂದರೆ ಇವೊತ್ತು ಎಲ್ಲಾ ಮೆಂಬರ್ಸ್ ಕ್ಲಾರಿಫಿಕೇಷನ್ ಕೇಳುತ್ತಿದ್ದಾರೆ ಅದಕ್ಕೆ ತಾವು ಉತ್ತರ ಕೊಡುತ್ತಿದ್ದೀರಿ. ನನ್ನ ಸಲಹೆ ಇಷ್ಟೆ, ತಾವು ಎರಡು ಸಾರಿ ಸರ್‌ಪ್ರೈಸ್ ಆಗಿ ಬಸ್‌ನಲ್ಲಿ ಟ್ರಾವೆಲ್ ಮಾಡಬೇಕು ಆಗ ತಾವು ಚೆನ್ನಾಗಿ ತಿಳಿದುಕೊಳ್ಳಬಹುದು, ಒಳ್ಳೆಯ ಉತ್ತರವನ್ನು ಕೊಡಬಹುದು. ಅದಕ್ಕೋಸ್ಕರ ಇದು ನಮ್ಮ ಒಳ್ಳೆಯ ಸಲಹೆ ತಾವು ಯಾರಿಗೂ ಹೇಳದೆ ಸರ್‌ಪ್ರೈಸ್ ಆಗಿ ಎರಡು ಮೂರು ಟೈಮ್ ತಾವೇ ಬಸ್‌ನಲ್ಲಿ ಟ್ರಾವಲ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ, ಆರ್. ಸಿಂಧ್ಯ. – ಸಂದರ್ಭ ಬಿದ್ದಾಗ ಬಸ್ಸಿನಲ್ಲಿ ಟ್ರಾವೆಲ್ ಮಾಡಿದ್ದೇನೆ. ಇನ್ನು ಈ ಆಟೋರಿಕ್ಷಾ ಪ್ರಿಯಾರಿಟಿ ಅಲಾಟ್‌ಮೆಂಟ್ ಏನು ಇದೆ ಇದು ಮಾನ್ಯ ಮುಖ್ಯ ಮಂತ್ರಿಗಳು ಬಜಾಜ್ ಕಂಪನಿ ಅವರಿಗೆ ಪತ್ರ ಬರೆದು ಮೂರು ವರ್ಷಗಳ ಹಿಂದಿನಿಂದಲೂ ಆಟೋರಿಕ್ಷಾ ಡ್ರೈವರ್ಸ್‌ಗಳಿಗೆ ಸಹಾಯ ಮಾಡಬೇಕೆಂದು ವಿಶೇಷವಾಗಿ ಮುಖ್ಯ ಮಂತ್ರಿಗಳ ಕೋಟಾ ಎಂದು ೨೦೦ ಆಟೋರಿಕ್ಷಾ ಪ್ರತಿ ಮೂರು ತಿಂಗಳಿಗೊಮ್ಮೆ ಕೊಡಲಾಗುತ್ತಿದೆ. ಇದರಿಂದ ಅವರಿಗೆ ಸಹಾಯವಾಗಿದೆ. ಇನ್ನು ಅದರ್ ಕ್ಯಾಟಗರೀಸ್‌ನಲ್ಲಿ ಬರತಕ್ಕದ್ದು ಅಂದರೆ ಒಬ್ಬ ಆಟೋ ರಿಕ್ಷಾ ಡ್ರೈವರ್ ಇರುತ್ತಾನೆ ಅವನು ಸಾಯುತ್ತಾನೆ. ಅಂತಹ ಸಂದರ್ಭದಲ್ಲಿ ಅವನನ್ನು ಅವಲಂಬಿಸಿಕೊಂಡಿರತಕ್ಕ ಅವರ ಮನೆಯವರಿಗೆ ಕೊಟ್ಟು ಈ ರೀತಿಯ ಸಹಾಯವನ್ನು ಮಾಡುತ್ತೇವೆ.

೨-೩೦ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮುಖ್ಯಮಂತ್ರಿಗಳ ಕೋಟ ಡಿಸ್ಕ್ರಿಷನರಿ ಅಲ್ಲ. ಆಟೋರಿಕ್ಷಾ ಅಸೋಸಿಯೇಷನ್‌ನವರು ೩-೪ ವರ್ಷಗಳ ಹಿಂದೆ ನನ್ನ ಹತ್ತಿರ ಬಂದು, ನಮಗೆ ಕೊಡತಕ್ಕ ಆಟೋ ರಿಕ್ಷಾಗಳ ಸಂಖ್ಯೆ ಸಾಲದು, ಇದನ್ನು ಹೆಚ್ಚಿಸಬೇಕೆಂದು ಕೇಳಿಕೊಂಡಾಗ ನಾನು ರಾಹು ಬಜಾಜ್‌ರವರಿಗೆ ಪತ್ರವನ್ನು ಬರೆದೆ. ಏಕೆಂದರೆ ಅವರು ನನ್ನ ಸ್ನೇಹಿತರಾಗಿದ್ದುದರಿಂದ. ಆಗಿನಿಂದಲೂ ಅವರು ೨೦೦ ಆಟೋರಿಕ್ಷಾಗಳನ್ನು ಹೆಚ್ಚಿಗೆ ಕೊಡುತ್ತಾ ಬಂದಿದ್ದಾರೆ, ಮುಖ್ಯಮಂತ್ರಿಗಳ ಕೋಟಾ ಎಂದು ಮಾನ್ಯ ಸಿಂಧ್ಯರವರು ಏನು ಹೇಳಿದರು ಅದು ಮುಖ್ಯ ಮಂತ್ರಿಗಳ ಕೋಟಾ ಅಲ್ಲ. ಇದೂ ಕೂಡ ರೂಲ್ಸ್ ಪ್ರಕಾರವೇ ಹಂಚಿಕೆಯಾಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಒಂದು ಪತ್ರದ ಆಧಾರದಮೇಲೆ ಕೊಟ್ಟಿರತಕ್ಕದ್ದು ಎಂದು ನಾನು ಹೇಳಿದ್ದೇನೆ. ಆದರೆ ಅದನ್ನು ಅಲಾಟ್‌ಮೆಂಟ್ ಮಾಡುವಾಗ ರೂಲ್ಸ್ ಪ್ರಕಾರವೇ ಬಹುತೇಕ ಹಂಚಿಕೆಯನ್ನು ಮಾಡಿದ್ದೇವೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಸಾತನೂರಿನಲ್ಲಿ ಬಸ್ ನಿಲ್ದಾಣವನ್ನು ನಿರ್ಮಾಣಮಾಡಲು ೨ ವರ್ಷಗಳ ಹಿಂದೆ ಅಡಿಗಲ್ಲನ್ನು ಹಾಕಲಾಯಿತು. ಆದರೆ ಇದುವರೆಗೂ ಅಲ್ಲಿ ಬಸ್ ಸ್ಟ್ಯಾಂಡ್ ನಿರ್ಮಾಣದ ಕೆಲಸ ಪ್ರಾರಂಭವೇ ಆಗಿಲ್ಲ. ಇದನ್ನು ಯಾವಾಗ ಮಾಡುತ್ತೀರಿ ?

ಎರಡನೆಯದಾಗಿ ಕನಕಪುರದಲ್ಲಿ ಬಸ್ ನಿಲ್ದಾಣದ ನಿರ್ಮಾಣ ಕಾರ್ಯ ಪೂರ್ತಿಯಾಗಿದ್ದರೂ ಇನ್ನೂ ಏತಕ್ಕೆ ಪ್ರಾರಂಭವಾಗಿಲ್ಲ? ಸಾರ್ವಜನಿಕರ ಉಪಯೋಗಕ್ಕೆ ಯಾವಾಗ ಮಾಡುತ್ತೀರಿ?

ಮೂರನೆಯದಾಗಿ ಬೆಂಗಳೂರು ಜಿಲ್ಲೆಯಲ್ಲಿ ಭಾಗಶಃ ರಾಷ್ಟ್ರೀಕರಣ ಆಗತಕ್ಕದ್ದು ಉಳಿದಿದೆ. ಇದನ್ನು ಯಾವಾಗ ಮಾಡುತ್ತೀರಿ ? ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ರಾಷ್ಟ್ರೀಕರಣ ಮಾಡುವ ಬಗ್ಗೆ ಈ ವರ್ಷ ಸರ್ಕಾರದ ಮುಂದೆ ಯಾವ ಪ್ರಸ್ತಾಪವೂ ಇಲ್ಲ. ಕನಕಪುರದ ಬಸ್‌ಸ್ಟ್ಯಾಂಡ್ ಕೆಲಸ ಮುಗಿದಿದೆ. ಅದನ್ನು ಮುಂದಿನ ತಿಂಗಳು ಉದ್ಘಾಟನೆ ಮಾಡುತ್ತೇವೆ. ಇನ್ನು ಸಾತನೂರು ಬಸ್‌ಸ್ಟ್ಯಾಂಡ್ ಕೆಲಸವನ್ನು ಈ ತಿಂಗಳು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಹೇಳಿದರು, ೩ ಕೋಟಿ ರೂಪಾಯಿಗಳನ್ನು ಬಸ್ ಡಿಪೋಗಳನ್ನು ಕಟ್ಟುವುದಕ್ಕೆ ಮತ್ತು ಇಂಪ್ರೂವ್‌ಮೆಂಟ್‌ಗೋಸ್ಕರ ಇಟ್ಟಿದ್ದೇವೆಂದು. ಈ ಉದ್ದೇಶಕ್ಕಾಗಿ ಯಾವ ಯಾವ ಭಾಗಗಳನ್ನು ಐಡೆಂಟಿಫೈ ಮಾಡಿದ್ದೀರಿ ?

ಎರಡನೆಯದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕಾಗಿ ಸ್ಪೆಷಲ್ ಕಮಿಟಿ ಎಂದು ಏನಾದರೂ ಕಾನ್‌ಸ್ಟಿಟ್ಯೂಟ್ ಮಾಡುತ್ತೀರಾ? ಇದು ಯಾವಾಗ ಕಾರ್ಯ ಪ್ರಾರಂಭವಾಗುತ್ತದೆಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಇನ್ನು ಮೂರನೆಯದಾಗಿ ಅನೇಕ ಬಸ್‌ಸ್ಟ್ಯಾಂಡ್‌ಗಳಲ್ಲಿ ಅಂದರೆ ಈಗಾಗಲೇ ಏನು ಹೊಸದಾಗಿ ಕಟ್ಟಿಸಿದ್ದೀರಿ ಅಲ್ಲಿ ಖಾಸಗಿಯವರು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡು ಸಣ್ಣಸಣ್ಣ ಪೆಟ್ಟಿಗೆ ಅಂಗಡಿ ಗಳನ್ನು ಇಟ್ಟುಕೊಂಡಿದ್ದಾರೆ. ಇದರಿಂದಾಗಿ ಯಾವ ವಾಹನಗಳೂ ಕೂಡ ಸರಾಗವಾಗಿ ಆ ಬಸ್ ಸ್ಟ್ಯಾಂಡ್‌ಗಳೊಳಗೆ ಹೋಗುವುದಕ್ಕೆ ಸಾಧ್ಯವಿಲ್ಲವಾಗಿದೆ. ನಿಮ್ಮ ಬಸ್‌ಗಳೂ ಕೂಡ ಸಲೀಸಾಗಿ ಆ ಬಸ್‌ಸ್ಟ್ಯಾಂಡ್‌ನೊಳಗೆ ಹೋಗುವುದಕ್ಕಾಗುತ್ತಿಲ್ಲ. ಅಷ್ಟೊಂದು ಕಷ್ಟವಾಗಿದೆ. ಆದ್ದರಿಂದ ಈ ರೀತಿ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡಿರತಕ್ಕ ಸಣ್ಣಪುಟ್ಟ ಅಂಗಡಿಯವರನ್ನು ತೆಗೆಸುತ್ತೀರಾ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸ್ಪೆಷಲ್ ರಿಕ್ರೂಟ್‌ಮೆಂಟ್ ಬಗ್ಗೆ ನಾವು ಈಗಾಗಲೇ ನಮ್ಮ ಧೋರಣೆ ಏನೆಂಬುದನ್ನು ಅನೌನ್ಸ್ ಮಾಡಿದ್ದೇವೆ. ೫೦೦ ಜನ ಡ್ರೈವರ್ಸ್‌ಗಳನ್ನು ರಿಕ್ರೂಟ್‌ಮೆಂಟ್ ಮಾಡಿಕೊಳ್ಳುವ ಬಗ್ಗೆ ಹೇಳಿದ್ದೇವೆ. ಇನ್ನು ಬಾಕಿ ಕೆಟಗರಿಯ ರಿಕ್ರೂಟ್‌ಮೆಂಟ್ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಕೋಟಾವನ್ನು ಫಿಲಪ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ರಿಕ್ರೂಟ್‌ಮೆಂಟ್‌ಗೆ ಸ್ಪೆಷಲ್ ಕಮಿಟಿಯನ್ನೇನೂ ನಾವು ಮಾಡುತ್ತಿಲ್ಲ. ಏಕೆಂದರೆ ಸರ್ಕಾರದಿಂದ ಒಂದು ರಿಕ್ರೂಟ್‌ಮೆಂಟ್ ಬೋರ್ಡನ್ನೇ ಮಾಡುತ್ತಿರು

ವುದರಿಂದ ಆ ಬೋರ್ಡ್‌ನವರೇ ಈ ಕೆಲಸವನ್ನೂ ಮಾಡುತ್ತಾರೆ. ಮಾನ್ಯ ಖರ್ಗೆಯವರು ಹೇಳಿದಂತೆ ಬಸ್ ಸ್ಟ್ಯಾಂಡ್‌ನಲ್ಲಿ ಕೆಲವರು ಸಣ್ಣಪುಟ್ಟ ಅಂಗಡಿಗಳನ್ನು ಏನು ಇಟ್ಟು ಕೊಂಡಿದ್ದಾರೆ ಅದು ನಿಜ. ಆದರೆ ಅನೇಕ ಸಂದರ್ಭಗಳಲ್ಲಿ ಇದನ್ನು ಒಂದು ಮಾನವೀಯತೆ ದೃಷ್ಟಿಯಿಂದ ನೋಡಿದ್ದೇವೆ. ಇದರ ಬಗ್ಗೆ ಸೂಕ್ತ ಗಮನಹರಿಸಿ ಎಲ್ಲೆಲ್ಲಿ ತೊಂದರೆಯಾಗಿದೆ ಅಂಥ ಕಡೆ ಎನ್‌ಕ್ರೋಚ್‌ಮೆಂಟ್ ಆಗಿರುವುದನ್ನು ಬಿಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ವರ್ಷ ೩೬ ಡಿಪೋಗಳ ಮತ್ತು ೭೬ ಬಸ್ ಸ್ಟ್ಯಾಂಡ್‌ಗಳ ವಿಚಾರದಲ್ಲಿ ವಿವರಗಳನ್ನು ಕೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩ ಕೋಟಿ ರೂಪಾಯಿಗಳನ್ನು ಯಾವ ಯಾವ ಕ್ಲಾಸುಗಳಿಗೆ ಎಂದು ತಾವು ಪ್ರಾವಿಷನ್ ಮಾಡಿ ಇಟ್ಟಿದ್ದೀರಿ ?

(ಸಚಿವರಿಂದ ಉತ್ತರ ಇಲ್ಲ.)

ಶ್ರೀ ಬಿ. ವಿ. ಕರೀಗೌಡ,—ಸ್ವಾಮಿ. ಹಾಸನ ಜಿಲ್ಲೆಯಲ್ಲಿ ರೀಜನಲ್ ವರ್ಕ್‌ಷಾಪನ್ನು ಮಾಡುತ್ತೇವೆಂದು ೧೯೮೬ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಡಿಗಲ್ಲನ್ನು ಹಾಕಿ ಬಂದಿದ್ದಾರೆ. ಆಗ ಮಾನ್ಯ ಪ್ರಕಾಶ್‌ರವರು ಸಾರಿಗೆ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ೨೦ ಎಕರೆ ಜಮೀನನ್ನು ಸಾರಿಗೆ ಇಲಾಖೆಯ ರೀಜನಲ್ ವರ್ಕ್‌ಷಾಪ್‌ಗೋಸ್ಕರ ತೆಗೆದುಕೊಂಡರು. ಅನಂತರ ರೀಜನಲ್ ವರ್ಕ್‌ಷಾಪನ್ನು ಮಾಡುವುದಕ್ಕಾಗುವುದಿಲ್ಲ. ತ್ರೀ ಟೈರ್ ಇದ್ದುದನ್ನು ತೆಗೆದು ಈಗ ಟೂ ಟೈರ್ ಸಿಸ್ಟಂನ್ನು ಮಾಡಿದ್ದೇವೆ ಎಂದು ಹೇಳಿದರು ಮತ್ತು ಆ ಜಮೀನನ್ನು ತೆಗೆದುಕೊಳ್ಳುವಾಗ ಆ ರೈತರಿಗೆ ಏನು ಹೇಳಿದರೆಂದರೆ, ನಿಮ್ಮ ಜಮೀನು ಹೋಗಿದೆಯೆಂದು ವ್ಯಸನ ಪಟ್ಟುಕೊಳ್ಳಬೇಡಿ, ಜಮೀನನ್ನು ಕಳೆದುಕೊಂಡವರ ಮಕ್ಕಳಿಗೆ ಅರ್ಹತೆಯಮೇರೆಗೆ ಕೆಲಸವನ್ನು ಕೊಡುತ್ತೇವೆ ಎಂದರು. ಆದರೆ ಇವತ್ತಿನವರೆಗೂ ಆ ಜಮೀನನ್ನು ಕಳೆದುಕೊಂಡವರ ಮಕ್ಕಳಿಗೆ ಕೆಲಸವನ್ನು ಕೊಟ್ಟಿಲ್ಲ. ಆದರೆ ಅವರ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಈಗ ರೀಜನಲ್ ವರ್ಕ್‌ಷಾಪನ್ನು ಮಾಡುವುದಕ್ಕಾಗದಿದ್ದರೆ ಆ ಜಮೀನನ್ನು ಮತ್ತೆ ಆ ರೈತರಿಗೇ ಬಿಟ್ಟುಕೊಡುವುದಕ್ಕೆ ಏನು ತೊಂದರೆ ಇದೆ. ಅಥವಾ ಅವರ ಮಕ್ಕಳಿಗೆ ಕೆಲಸವನ್ನು ಕೊಡುವುದಕ್ಕೆ ಏನು ತೊಂದರೆ ಇದೆಯೆಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಬೇಕು.

ಇನ್ನು ಎರಡನೆಯದಾಗಿ ೧೯೮೭ರ ನವೆಂಬರ್ ತಿಂಗಳಲ್ಲಿ ಶಾಂತಿ ಗ್ರಾಮದಲ್ಲಿ ಒಂದು ಬಸ್‌ಸ್ಟ್ಯಾಂಡ್ ಕಟ್ಟುವುದಕ್ಕೆ ಅಡಿಗಲ್ಲನ್ನು ಹಾಕಿ ಬಂದರು. ಸುಮಾರು ಒಂದೂವರೆ ವರ್ಷವಾದರೂ ಇನ್ನೂ ಆ ಕೆಲಸ ಆಗಲಿಲ್ಲ. ಅದು ಆಗುತ್ತದೆಯೋ ಇಲ್ಲವೋ? ಅದು ಕಲ್ಲಾಗಿ ಹಾಗೆಯೇ ಉಳಿಯುತ್ತದೆಯೇ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಶಾಂತಿ ಗ್ರಾಮದಲ್ಲಿ ಬಸ್ ನಿಲ್ದಾಣದ ಕೆಲಸ ಇಷ್ಟರಲ್ಲೇ ಪ್ರಾರಂಭವಾಗುತ್ತದೆ. ಅದಕ್ಕೆ ಬೇಕಾದ ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. ಹಾಸನದಲ್ಲಿ ಆಗಬೇಕಾದ ರೀಜಿನಲ್ ವರ್ಕ್‌ಷಾಪ್ ಬಗ್ಗೆ ಹೇಳಿದ್ದಾರೆ. ಕಳೆದ ಮೂರುವರ್ಷದಿಂದ ರಸ್ತೆಸಾರಿಗೆ ಸಂಸ್ಥೆಯಲ್ಲಿ ತ್ರಿಟೈರ್ ಸಿಸ್ಟಮ್ ಇದ್ದುದನ್ನು ಈಗ ಟೂಟೈರ್ ಸಿಸ್ಟಮ್ ಮಾಡಿದ್ದೇವೆ. ಹುಬ್ಬಳ್ಳಿಯಲ್ಲಿದ್ದವರನ್ನ ಬೆಂಗಳೂರು ನಗರಕ್ಕೆ, ಮತ್ತು ಬೆಂಗಳೂರು ನಗರದಲ್ಲಿದ್ದವರನ್ನು ಹುಬ್ಬಳ್ಳಿ ನಗರಕ್ಕೆ ಅಂದರೆ ನೌಕರರನ್ನು ಡಿವಿಜನ್ ನಿಂದ ಡಿವಿಜನ್‌ಗೆ ಟ್ರಾನ್ಸ್‌ಫರ್ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ.

ಹಾಸನದಲ್ಲಿ ಈಗಾಗಲೇ ೮೦ ಲಕ್ಷ ರೂಪಾಯಿಗಳಿಗೆ ಜಮೀನನ್ನು ತೆಗೆದುಕೊಂಡಿದ್ದೇವೆ. ಅದನ್ನು ಬೇರೆ ರೀತಿಯಲ್ಲಿ ಸಾರಿಗೆ ಸಂಸ್ಥೆಗೆ ಉಪಯೋಗ ಮಾಡಿಕೊಳ್ಳುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ.— ಮಾನ್ಯ ಅಧ್ಯಕ್ಷರೇ, ಹಳೆಯ ಮೈಸೂರಿನ ಪ್ರತಿಯೊಂದು ಜಿಲ್ಲಾ ಕೇಂದ್ರದಿಂದ ಮಹದೇಶ್ವರ ಬೆಟ್ಟಕ್ಕೆ ಬಸ್‌ಗಳು ಓಡಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಮಹದೇಶ್ವರ ಬೆಟ್ಟದಲ್ಲಿ ಒಂದು ಬಸ್‌ನಿಲ್ದಾಣವನ್ನು ಮಾಡಿಕೊಡುತ್ತೇವೆಂದು ಹೇಳಿದ್ದು ಅದು ಇನ್ನೂ ಕಾರ್ಯಗತವಾಗಿಲ್ಲ. ಬೆಂಗಳೂರಿನಿಂದ ಕೊಳ್ಳೇಗಾಲಕ್ಕೆ ಓಡಾಡತಕ್ಕಂಥ ಎಲ್ಲಬಸ್‌ಗಳೂ ಕೂಡ ಅಲ್ಲಿಯವರೆಗೂ ಓಡಾಡುವಂತೆ ವಿಸ್ತರಿಸಬೇಕು. ಏತಕ್ಕೆಂದರೆ ರೇಷ್ಮೆ ಬೆಳೆಗಾರರು ವಿಶೇಷವಾಗಿ ಆ

ಭಾಗದಿಂದ ಬರತಕ್ಕಂಥವರು ಇರುತ್ತಾರೆ. ಕೊಳ್ಳೇಗಾಲದಲ್ಲಿ ವಿಶೇಷವಾಗಿ ಜನ ಸಂಖ್ಯೆ ಜಾಸ್ತಿಯಾಗಿರುವುದರಿಂದ ಅಲ್ಲಿ ಸಿಟಿ ಬಸ್‌ಗಳ ವ್ಯವಸ್ಥೆ ಮಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಸದಸ್ಯರು ಬಸ್‌ಗಳ ಸೌಕರ್ಯದ ಬಗ್ಗೆ ಹೇಳಿದ್ದಾರೆ. ಅದು ರಾಷ್ಟ್ರೀಕರಣವಾಗದ ಪ್ರದೇಶವಾಗಿರುವುದರಿಂದ ಬಸ್ ಸೌಕರ್ಯವನ್ನು ಮಾಡತಕ್ಕಂಥದ್ದು ಕಷ್ಟವಾಗುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಬಸ್ ಸೌಕರ್ಯವನ್ನು ಮಾಡಿಕೊಡುತ್ತೇವೆ. ಮಹದೇಶ್ವರ ಬೆಟ್ಟದಲ್ಲಿ ಬಸ್ ನಿಲ್ದಾಣವನ್ನು ಕಟ್ಟಬೇಕೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅಲ್ಲಿ ಜಾಗದ ಬಗ್ಗೆ ತಕರಾರು ಇದೆ. ಆದ್ದರಿಂದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ತಕರಾರು ಮುಗಿದ ತಕ್ಷಣ ಬಸ್‌ನಿಲ್ದಾಣದ ಕೆಲಸವನ್ನು ಪ್ರಾರಂಭಿಸುತ್ತೇವೆ.

ಶ್ರೀ ಪಟವರ್ಧಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳೇ ತಮ್ಮ ಉತ್ತರದಲ್ಲಿ ಹೇಳಿದರು ಹೊಸ ನಿಯಮಗಳ ಪ್ರಕಾರ ಟೈರ್ ರೀಟ್ರೇಡಿಂಗ್ ನಿಂದಾಗಿ ಒಂದೂವರೆ ಕೋಟಿ ರೂಪಾಯಿಗಳಷ್ಟು ಉಳಿಯುತ್ತಿದೆ ಎಂದು ಹೇಳಿದರು. ಇದಕ್ಕಿಂತ ಹೆಚ್ಚಾಗಿ ರಸ್ತೆಗಳು ಹಾಳಾಗಿದ್ದು, ಆ ರಸ್ತೆಗಳಲ್ಲಿ ಬಸ್‌ಗಳನ್ನು ಓಡಿಸುತ್ತಿರುವುದರಿಂದ ಹೆಚ್ಚು ಟೈರುಗಳಿಂದ ನಷ್ಟವಾಗುತ್ತಿರುವುದು ಎಷ್ಟು? ಎರಡನೆಯದಾಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಸ್ತೆ ಸೂಚನಾ ಫಲಕಗಳನ್ನು ಅವಶ್ಯಕವಾಗಿ ಇರುವ ಕಡೆ ಏತಕ್ಕೆ ಹಾಕಿಲ್ಲ? ಮೂರನೆಯದಾಗಿ ಶಬ್ದಮಾಲಿನ್ಯ, ವಾಯು ಮಾಲಿನ್ಯಗಳ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಈ ಕಾರ್ಯಕ್ರಮಗಳನ್ನು ಸ್ಪಷ್ಟವಾಗಿ ರೂಪಿಸಬೇಕು. ತೀರ್ಥಹಳ್ಳಿಯಲ್ಲಿ ಬಸ್‌ಸ್ಟ್ಯಾಂಡ್‌ಗಳನ್ನು ಕಟ್ಟುತ್ತೇವೆಂದು ಹೇಳಿ ಮೂರುವರ್ಷವಾಯಿತು. ತಮ್ಮ ಅವಧಿಯಲ್ಲಾದರೂ ಕಟ್ಟಿದರೆ ನಾವು ಸಂತೋಷದಿಂದ ಸಹಕಾರ ಮಾಡುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ತೀರ್ಥಹಳ್ಳಿಯಲ್ಲಿ ಬಸ್‌ನಿಲ್ದಾಣವನ್ನು ಕಟ್ಟತಕ್ಕಂಥದ್ದು ಕಷ್ಟವಾಗುತ್ತದೆ. ಏತಕ್ಕೆಂದರೆ ಶಿವಮೊಗ್ಗ ರಾಷ್ಟ್ರೀಕರಣವಾಗಿರತಕ್ಕಂಥ ಪ್ರದೇಶ. ರಾಷ್ಟ್ರೀಕರಣವಾಗಿರತಕ್ಕಂಥ ಪ್ರದೇಶಗಳಿಗೆ ಮೊದಲು ಆದ್ಯತೆಯನ್ನು ಕೊಡಬೇಕಾಗುತ್ತದೆ, ಶಿವಮೊಗ್ಗ ನಗರದಲ್ಲಿ ಬಹಳ ಸುಸಜ್ಜಿತವಾಗಿರತಕ್ಕಂಥ ೩೦ ಲಕ್ಷರೂಪಾಯಿಗಳ ವೆಚ್ಚದ ಬಸ್‌ನಿಲ್ದಾಣವನ್ನು ಕಟ್ಟುತ್ತಿದ್ದೇವೆ. ಭದ್ರಾವತಿಯಲ್ಲೂ ಕೂಡ ಒಂದು ಬಸ್‌ನಿಲ್ದಾಣವನ್ನು ಕಟ್ಟಿಸುತ್ತಿದ್ದೇವೆ. ಆದ್ದರಿಂದ ತೀರ್ಥಹಳ್ಳಿಗೆ ಬಸ್ ನಿಲ್ದಾಣವನ್ನು ಕೊಡತಕ್ಕಂಥದ್ದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರು ಉಳಿದಿರತಕ್ಕಂಥ ಸಲಹೆಗಳನ್ನು ಏನು ಕೊಟ್ಟಿದ್ದಾರೆ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.— ಮಾನ್ಯ ಅಧ್ಯಕ್ಷರೇ, ಜನತಾ ಸರ್ಕಾರ ಅಧಿಕಾರಕ್ಕೆ ಬಂದು ೫ ವರ್ಷಗಳಾಯಿತು. ತಿಪಟೂರಿಗೆ ನಾಲ್ಕು ವರ್ಷಗಳ ಹಿಂದೆಯೇ ಬಸ್‌ನಿಲ್ದಾಣವನ್ನು ಕೊಡುವುದಾಗಿ ಹೇಳಿ ಎರಡು ವರ್ಷಗಳ ಹಿಂದೆ ಶಿಲಾನ್ಯಾಸವಾಗಿರುತ್ತದೆ. ಎರಡು ವರ್ಷಗಳಿಂದ ಯಾವುದೇ ಕಾರ್ಯಕ್ರಮ ತೆಗೆದುಕೊಂಡಿಲ್ಲ, ಬಸ್‌ನಿಲ್ದಾಣದ ನಿರ್ಮಾಣದ ಬಗ್ಗೆ ಯಾವುದೇ ಪ್ರೋಗ್ರೆಸ್ ಇಲ್ಲ. ದಿವಸಕ್ಕೆ ಸುಮಾರು ೫ ನೂರು ಬಸ್‌ಗಳು ಓಡಾಡತಕ್ಕಂಥ ಸ್ಥಳ. ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನ ರೈತರು ಪ್ರಯಾಣ ಮಾಡತಕ್ಕಂಥ ಸ್ಥಳ. ಆದ್ದರಿಂದ ಸರ್ಕಾರದವರು ಈಗಲಾದರೂ ತಮ್ಮ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಈಗಾಗಲೇ ಗಮನವನ್ನು ಹರಿಸಿದ್ದೇವೆ. ಮಾನ್ಯ ಸದಸ್ಯರು ಮತ್ತು ಜಿಲ್ಲಾ ಮಂತ್ರಿಗಳಾದ ಮಾನ್ಯ ಲಕ್ಷ್ಮೀನರಸಿಂಹಯ್ಯನವರ ಜೊತೆಯಲ್ಲಿ ತಿಪಟೂರಿಗೆ ಈಗಾಗಲೇ ಹೋಗಿ ಸ್ಥಳ ಪರಿಶೀಲನೆ ಮಾಡಿ ೧೩ ಲಕ್ಷ ರೂಪಾಯಿಗಳನ್ನು ಬಸ್‌ನಿಲ್ದಾಣದ ನಿರ್ಮಾಣಕ್ಕಾಗಿ ಮಂಜೂರಾತಿಯನ್ನೂ ಸಹ ನೀಡಲಾಗಿದೆ. ಆದರೆ ಜಾಗದ ಬಗ್ಗೆ ಇರತಕ್ಕ ತಕರಾರಿನಿಂದಾಗಿ ಕೆಲಸ ನಿಂತಿದೆ. ತಕರಾರನ್ನು ಆದಷ್ಟು ಜಾಗ್ರತೆಯಾಗಿ ಇತ್ಯರ್ಥಗೊಳಿಸಲು ಮಾನ್ಯ ಸದಸ್ಯರು ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ತಕರಾರು ಇತ್ಯರ್ಥವಾದಲ್ಲಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಚಂದ್ರಶೇಖರಯ್ಯ.—ಇವರು ಕೇಳಿದಂತಹ ಜಾಗವನ್ನು ಮುನಿಸಿಪಾಲಿಟಿಯಿಂದ ಕೊಟ್ಟಿದ್ದೇವೆ. ನಂತರ ಎರಡು ಎಕರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಜಾಗವನ್ನು ಉಚಿತವಾಗಿ ಕೊಡುತ್ತೇವೆಂದು ಬರೆದುಕೊಟ್ಟಿದ್ದೇವೆ. ಜಾಗದ ತಕರಾರು ಏನೂ ಇಲ್ಲ. ಬಿಲ್ಡಿಂಗ್

ಕಟ್ಟಬೇಕಾದರೆ ಹಣ ಬೇಕು ಅಷ್ಟೆ. ಮೊದಲು ೩ ಎಕರೆ ಜಾಗದಲ್ಲಿ ಪ್ಲಾನ್ ಮಾಡಿದ್ದರು. ಆ ಪ್ಲಾನ್ ಬದಲಾಯಿಸುವುದಕ್ಕೆ ಒಪ್ಪಿದ್ದೇವೆ. ದಯವಿಟ್ಟು ಮಂತ್ರಿಗಳು ಆ ರೀತಿ ಹೇಳಬಾರದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಎರಡು ಎಕರೆ ಜಾಗವನ್ನು ಮುಫತ್ತಾಗಿ ಕೊಟ್ಟಿರುವುದು ನಿಜ. ಆದರೆ ರೆಕಾರ್ಡ್ಸ್ ನೋಡಿದಾಗ ತಕರಾರು ಇರುವುದು ನಿಜ. ಅದನ್ನು ಬಗೆಹರಿಸಬೇಕಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೩ ಸಾರಿ ಶಾಸಕರನ್ನು ಜಿಲ್ಲಾ ಮಟ್ಟದಲ್ಲಿ ಕರೆದು ಸಲಹೆ ಸೂಚನೆಗಳನ್ನು ಕೇಳಿದ್ದೀರಿ, ಊಟ ಕೊಟ್ಟಿದ್ದೀರಿ, ಬ್ಯಾಗ್ ಪರ್ಸ್, ಪೆನ್ ಎಲ್ಲ ಕೊಟ್ಟಿದ್ದೀರಿ, ಆದರೆ ನಮ್ಮ ಸಲಹೆ ಸೂಚನೆಗಳಿಗೆ ಆದ್ಯತೆ ಕೊಟ್ಟು ಒಂದಾದರೂ ಕೆಲಸ ಮಾಡಿದ್ದೀರಾ? ನೇಮಕಾತಿ ಮಾಡುವ ಸಂದರ್ಭದಲ್ಲಿ ಸ್ಥಳೀಯರಿಗೆ ಅವಕಾಶ ಮಾಡಿಕೊಡುತ್ತೀರಾ? ಎಸ್.ಸಿ. ಎಸ್.ಟಿ.ಯವರಿಗೆ ಕೊಡತಕ್ಕ ಆದ್ಯತೆ ಕೊಟ್ಟು ಎಲ್ಲಾ ಜಿಲ್ಲೆಗಳಿಗೆ ಸಮನಾಗಿ ಹಂಚುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ನನಗೆ ಗೊತ್ತಿರುವ ಹಾಗೆ, ನೇಮಕಾತಿಯಲ್ಲಿ ೧೩ ಡಿವಿಜನ್‌ಗಳಿಗೆ ಸಂಬಂಧಪಟ್ಟ ಹಾಗೆ ಆಯಾಯ ಜಿಲ್ಲಾ ಕೇಂದ್ರಗಳಲ್ಲಿ ವಿಭಾಗ ಮಟ್ಟದ ಸಮಿತಿಗಳನ್ನು ಮಾಡಿರುತ್ತಾರೆ. ಶೇಕಡ ೭೦ಕ್ಕೂ ಹೆಚ್ಚು ಜನ ಸ್ಥಳೀಯರೇ ಇದ್ದಾರೆ. ಎಲ್ಲಿಯೂ ಆ ರೀತಿ ಅಕ್ರಮಗಳು ನಡೆದಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಹಣ ತೆಗೆದುಕೊಂಡು ಕೆಲಸ ಕೊಟ್ಟಿದ್ದಾರೆಂಬ ವಿಚಾರ ಗಮನಕ್ಕೆ ಬಂದಾಗ ಆ ನೇಮಕಾತಿಯನ್ನು ರದ್ದು ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಒಂದೂ ಕೆಲಸ ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ನನಗೆ ಗೊತ್ತಿರುವ ಹಾಗೆ ಇಲಾಖೆಯ ಬಗ್ಗೆ ಒಂದೂ ಕೆಲಸವನ್ನು ೩-೪ ವರ್ಷಗಳಿಂದ ಅವರು ನನಗೆ ಹೇಳಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಇಲ್ಲ, ಇಲ್ಲ. ನನಗೆ ಸುಳ್ಳು ಹೇಳಬಹುದು. ಆದರೆ ಉಳಿದ ಶಾಸಕರ ಬಗ್ಗೆ ಹೇಳಿ, ಏನೂ ಮಾಡಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ದಕ್ಷಿಣ ಕನ್ನಡ ಜಿಲ್ಲೆ ರಾಷ್ಟ್ರೀಕರಣ ಆಗದೆ ಇರತಕ್ಕ ಪ್ರದೇಶ. ಹೆಚ್ಚಿನ ಪೂರೈಕೆಗಳನ್ನು ಖಾಸಗಿ ಬಸ್ಸಿನವರೇ ಮಾಡುತ್ತಾರೆ. ಎಲ್ಲಿ ಸಾಧ್ಯ ಅಲ್ಲಿ ಮಾಡಿಕೊಟ್ಟಿದ್ದೇವೆ. ಅವರ ಊರಿನಲ್ಲಿ ಇತ್ತೀಚೆಗೆ ೭೦ ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿರತಕ್ಕ ಬಸ್ ಡಿಪೋವನ್ನು ಉದ್ಘಾಟನೆ ಮಾಡಿ ಬಂದಿದ್ದೇವೆ. ಒಂದೂ ಕೆಲಸ ಆಗಿಲ್ಲವೆಂದರೆ ಹೇಗೆ?

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸಚಿವರು ಹೇಳುತ್ತಿದ್ದರು, ಹಳ್ಳಿ ಸಾರಿಗೆಯಿಂದ ಲಾಭ ವಾಗಿದೆ ಎಂದು ಆದರೆ ಹಳ್ಳಿಗಳ ಕಡೆ ಒಂದು ಸ್ಟೇಜ್ ಆದ ಮೇಲೆ ಕ್ವಾರ್ಟರ್ ಸ್ಟೇಜ್ ಇದ್ದರೂ ಪೂರ್ತಿ ಸ್ಟೇಜಿನ ಲೆಕ್ಕವನ್ನೇ ತೆಗೆದುಕೊಳ್ಳುತ್ತಾರೆ. ಅರ್ಧ ಸ್ಟೇಜ್‌ಗಿಂತ ಕಡಿಮೆ ಇದ್ದರೆ ಪೂರ್ತಿ ಸ್ಟೇಜಿನ ಲೆಕ್ಕ ತೆಗೆದುಕೊಳ್ಳಬಾರದೆಂದು ಅನೇಕ ಮಾನ್ಯ ಸದಸ್ಯರು ಸಲಹೆ ಮಾಡಿದರು. ಇದುವರೆಗೆ ಸರ್ಕಾರ ಅದನ್ನು ಪರಿಶೀಲಿಸಲಿಲ್ಲ. ಪರಿಷ್ಕರಣ ಮಾಡಲಿಲ್ಲ. ಅದನ್ನು ಮಾಡುವುದು ಅಗತ್ಯ ಇದೆ. ಹಳ್ಳಿ ಸಾರಿಗೆಯಿಂದ ಲಾಭವಾಗಿದೆ. ಹಳ್ಳಿಯಿಂದ ಯಾವಾಗಲೂ ನಷ್ಟವಿಲ್ಲ. ಅರ್ಧ ಸ್ಟೇಜಿಗಿಂತ ಕಡಿಮೆ ಇದ್ದರೆ ಅದನ್ನು ಏತಕ್ಕೆ ಗಣನೆಗೆ ತೆಗೆದುಕೊಳ್ಳಬಾರದು? ಅದನ್ನು ಗಣನೆಗೆ ತೆಗೆದುಕೊಂಡರೆ ರೈತರಿಗೆ, ಬಡವರಿಗೆ ನಷ್ಟವಾಗುವುದಿಲ್ಲ. ಕೆಲವು ಕಡೆ ಒಂದು ಹಳ್ಳಿಗೆ ಒಂದು ಕಿಲೋಮೀಟರ್ ದೂರ ಹಿಂದೆ ಬರಬೇಕಾಗುತ್ತದೆ. ಕೆಲವು ಕಡೆ ಒಂದು ಕಿಲೋಮೀಟರ್ ಮುಂದೆ ಹೋಗಬೇಕಾಗುತ್ತದೆ. ಎಲ್ಲರಿಗೂ ಒಂದು ಸ್ಟೇಜಿನ ರೇಟನ್ನೇ ಹಾಕುತ್ತಾರೆ. ಇದನ್ನು ಏಕೆ ಕಡಿಮೆ ಮಾಡಬಾರದು? ಇದರಿಂದ ಪ್ಯಾಸೆಂಜರ್‌ಗಳಿಗೆ ಅನ್ಯಾಯವಾಗುವುದಿಲ್ಲವೇ? ಅನ್ಯಾಯವಾಗಿ ಅವರು ಒಂದು ಸ್ಟೇಜಿನ ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅದನ್ನು ಸರಿ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಈಗ ನಾನು ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

"೩೧-೩-೧೯೮೦ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೬ ಮತ್ತು ೩೧ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು ಮಂಜೂರು ಮಾಡಬೇಕು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 26—ವಾಹನ ತೆರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೮೯,೧೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ 30—ರಸ್ತೆ ಸಾರಿಗೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦೦,೫೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೩೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರ್ಮಾಡುವುದು."

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—೮೧೩ (೧೪೭೧)ರ ಪ್ರಶ್ನೆಗೆ ಮುಂದಿನ ಸಾರಿ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಬರುವುದಿಲ್ಲ. ಪವರ್ ಕಾರ್ಪೊರೇಷನ್‌ಗೆ ಬರುತ್ತದೆ. ಮುಂದಿನ ಸಾರಿ ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ಮಾನ್ಯ ಕಾನಡೆಯವರೆ. ತಮಗೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನನಗೆ ಉತ್ತರ ಕಳುಹಿಸಿಕೊಡುವುದು ಮುಖ್ಯವಲ್ಲ. ಇದು ೬೬ ಮಂದಿ ಭ್ರಷ್ಟ ಅಧಿಕಾರಿಗಳ ವಿಚಾರ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪವರ್ ಮಿನಿಸ್ಟರ್ ಅವರ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳು ಯಾವತ್ತು ಬರುತ್ತದೆಯೋ ಆವತ್ತು ಹಾಕಿ.

ಅಧ್ಯಕ್ಷರು.—ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಲಿಖಿತ ಉತ್ತರ ಕೊಡುವುದಲ್ಲ. ಇದು ಭ್ರಷ್ಟಾಚಾರದ ವಿಷಯ.

ಅಧ್ಯಕ್ಷರು.—ಪವರ್ ಮಿನಿಸ್ಟರ್ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—೨೦ನೇ ತಾರೀಖು ಪವರ್ ಮಿನಿಸ್ಟರ್ ಉತ್ತರ ಕೊಡುವ ದಿನ. ಆವತ್ತು ಉತ್ತರ ಕೊಡುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಆವತ್ತು ಸೆಷನ್ ಇರುತ್ತದೆಯೋ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇರುತ್ತದೆ.